
ಐಕ್ಯರಂಗ


ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 19
ಮೇ 11, 2003 ಬೆಲೆ ರೂ. 3.00




ನೀರು.... ನೀರು.... ಕೋಲಾರದ ಕೂಗು






ಭಾರತ–ಪಾಕ್ ಮಾತುಕತೆ ಧಿಡೀರನೆ ಯಾಕೆ?

'ವ್ಯಾಟ್' ಏನು? ಯಾಕೆ?



ಜಗದಗಲ ಅರಳಿ ನಿಂತ ಮೇ ಕೆಂಪು ದಿನ



ತೊಗಾಡಿಯಾ ಮತ್ತು ತಗಡು ತ್ರಿಶೂಲವೂ

ಎಚ್ಚೆನ್ ಚಂಪಾಗೆ ಬುಶ್ ಬಗ್ಗೆ ಹೇಳಿದ್ದು !

ಪರಲೋಕದ ಒಂದು ಸೀನು. ಅದು ಸ್ವರ್ಗವೋ ನರಕವೋ ತಿಳಿಯದು. ಐನ್‌ಸ್ಟೈನ್ ಬರುತ್ತಾನೆ. ಬಾಗಿಲು ಬಡಿದಾಗ ಕಾವಲುಗಾರ ಹೊರಬಂದ.

'ಯಾರು ನೀನು?'

' ಐನ್‌ಸ್ಟೈನ್'

'ಓಹೋ! ಆದರೆ ನೀನೇ ಐನ್‌ಸ್ಟೈನ್ ಅಂತ ಹ್ಯಾಗೆ ನಂಬೋದು?'

ಎ, ಬಿ, ಸಿ, ಪ್ಲಸ್, ಮೈನಸ್, ಇಜಿಕೊಲ್ಟು, ಕ್ಯೂಬ್ ಏನೇನೋ ಸೇರಿಸಿ ಒಂದು ಇಕ್ವೇಶನ್ ಬರೆಯುತ್ತಾನೆ. ಅರ್ಥ ತಿಳಿಯದ ಕಾವಲುಗಾರ 'ಒಕೇ ನೀನೇ ಐನಸ್ಟೈನ್' ಅಂತ ಒಳಗೆ ಬಿಡುತ್ತಾನೆ.

ಮುಂದಿನ ಸರದಿ ಪಿಕಾಸೋನದು. ಅದೇ ಡೈಲಾಗು. ಏನೇನೋ ಗೆರೆ ಗೀಚಿ, ಬಣ್ಣ ಅದ್ದಿ ಚಿತ್ರ ಬಿಡಿಸುತ್ತಾನೆ. ಅರ್ಥ ತಿಳಿಯದ ಕಾವಲುಗಾರ 'ಒಕೇ ನೀನೇ ಪಿಕಾಸೋ' ಅಂತ ಒಳಗೆ ಬಿಡುತ್ತಾನೆ.

ಅನಂತರ ಬಂದವ ಜಾರ್ಜ್ ಬುಶ್.

'ಯಾರು ನೀನು ?'

'ಬುಶ್'

'ನೀನೇ ಬುಶ್ ಅಂತ ಪ್ರೂವ್ ಮಾಡು'

'ನಾನ್ಯಾಕೆ ಪ್ರೂವ್ ಮಾಡಲಿ ? ನಾನು ಬುಶ್.'

'ಅಲ್ಲಪ್ಪಾ, ಇದು ಇಲ್ಲಿಯ ಪದ್ಧತಿ, ಕಾನೂನು, ಸಂಪ್ರದಾಯ. ನಿನಗಿಂತ ಮುಂಚೆ ಯಾರು ಬಂದಿದ್ದರು ಗೊತ್ತೇ?'

'ಯಾರು ಬಂದಿದ್ದರು?'

'ಐನಸ್ಟೈನ್ ಬಂದಿದ್ದ. ಪಿಕಾಸೋ ಬಂದಿದ್ದ.'

'ಯಾರದು ಐನಸ್ಟೈನ್? ಯಾರದು ಪಿಕಾಸೋ?'

ಕಾವಲುಗಾರ : 'ಒಕೇ. ನೀನೇ ಬುಶ್. ಒಳಗೆ ಬಾ.'

ಕೃಪೆ : ಸಂಕ್ರಮಣ (೩೪೭)
ಚಂಪಾ ಕಾಲಂ ನಿಂದ


ಇದು ನಿಮಗೆ ಗೊತ್ತೆ?

ನೀರು ಇಂದು ಸರಕಾಗಿರುವುದು ಎಲ್ಲರಿಗೂ ಗೊತ್ತು. ಆದರೆ ಈ ಸರಕಿನ ವಹಿವಾಟು ಎಷ್ಟು ದೊಡ್ಡದು ಎಂಬುದು ಬಹುಶಃ ಗೊತ್ತಿರಲಿಕ್ಕಿಲ್ಲ. ಕೆಲವು ಪಾಶ್ಚಿಮಾತ್ಯ ದೇಶಗಳಲ್ಲಿ ನೀರು ಬೀರಿಗಿಂತ ದುಬಾರಿ!! ಇಂದು ನೀರಿನ ಜಾಗತಿಕ ವಹಿವಾಟು 40 ಸಾವಿರ ಕೋಟಿ ಡಾಲರುಗಳು. ಇದು ಒಟ್ಟಾರೆ ಔಷಧಿ ವಹಿವಾಟಿಗಿಂತಲೂ ಹೆಚ್ಚು. ಔಷಧಿ ವಹಿವಾಟು(30 ಸಾವಿರ ಕೋಟಿ ಡಾಲರು) ನೀರಿನ ವಹಿವಾಟಿನ ಮುಕ್ಕಾಲು ಭಾಗ)

ಭಾರತೀಯ ಸೇನೆಯೇ ಪ್ರಬಲ ಶಕ್ತಿ

ವಿಮೋಚನಾ ಸಮರದಲ್ಲಿ....

ಮೇಜರ್ ಜಯಪಾಲ್ ಸಿಂಗ್



ಆತ್ಮಕಥನ 25



ಹಿಂದಿನ ಸಂಚಿಕೆಯಲ್ಲಿ ಗಾಂಧೀಜಿ ನೇತೃತ್ವದ ಕಾಂಗ್ರೆಸ್ ಜಿನ್ನಾ ಜೊತೆ ಒಪ್ಪಂದ ಮಾಡಿಕೊಳ್ಳದಿರುವುದು, 'ಭಾರತ ಬಿಟ್ಟು ತೊಲಗಿ ಚಳುವಳಿಯನ್ನು ಆರಂಭಿಸದಿರುವುದು, ಆಗಿನ ಭಾರತದ ದೊಡ್ಡ ತ್ರೀಮೂರ್ತಿಗಳಾದ ಸಾಮ್ರಾಜ್ಯಶಾಹಿ, ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗಳ ಹುನ್ನಾರ, ಹೊರನೋಟಕ್ಕೆ ಕ್ರಾಂತಿಕಾರಿಯಾಗಿ ಕಂಡರೂ ರಾಜಿಗಾಗಿ ತುಡಿಯುತ್ತಿದ್ದ ಕಾಂಗ್ರೆಸ್ ಮತ್ತು ರಾಜಕೀಯ ಬೂಟಾಟಿಕೆಯ ಪಟೇಲ್ ಈ ಬಗ್ಗೆ ಓದಿರುವಿರಿ. ಮುಂದೆ...

ಕನ್ನಡಕ್ಕೆ: ವಿಶ್ವ ಕುಂದಾಪುರ

ಚಳಿಗಾಲದಲ್ಲಿ ಮುರ್ರಿಯಲ್ಲಿ ಯಾರೂ ಇರುತ್ತಿರಲಿಲ್ಲ. ನೀರವ ಮೌನ. ಕುಳಿರ್ಗಾಳಿ ಬೀಸುತ್ತಿತ್ತು. ಬೆಟ್ಟಗಳ ಮೇಲೆ ಹಿಮ ಆವರಿಸಿತ್ತು. ಆಲ್ಲೊಮ್ಮೆ ಬಿರುಗಾಳಿ ಬೀಸಿತು, ಚಳಿಯಿಂದ ನಮ್ಮ ಮೈ ನಡುಗಿತು.

ಡೈನ್‌ವುಡ್ ಹೋಟೆಲ್‌ನಲ್ಲಿ ಭಾರತೀಯ ಪ್ರೇಮಗೀತೆಗಳನ್ನು ಹಾಡುತ್ತಾ ಮೈಕಾಯಿಸಿ ಕೊಳ್ಳುತ್ತಾ ಕುಳಿತಿದ್ದೆವು. ಈ ದೂರ ಪ್ರದೇಶಕ್ಕೆ ಚಳಿಗಾಲದಲ್ಲಿ ಬರುವ ಜನರಿಗೆ ಅನುಕೂಲವಾಗಲೆಂದು ಹೋಟೆಲ್‌ನಲ್ಲಿ ಒಬ್ಬ ಅಡುಗೆಯವ ಮತ್ತು ಬೇಕರ್ ಅನ್ನು ಮಾತ್ರ ಬಿಟ್ಟಿದ್ದರು.

ಇದೊಂದು ಐತಿಹಾಸಿಕ ಸಭೆ. ಸಂಘಟನಾ ಸನ್ನದ್ಧತೆ ಬಗ್ಗೆ ವರದಿಗಳನ್ನು ಸಿದ್ಧಪಡಿಸಲಾಯಿತು. ಸಂಘಟನೆಯ ದಕ್ಷತೆ ಹಾಗೂ ವ್ಯಾಪಕತೆ ಈ ವರದಿಯಲ್ಲಿ ವ್ಯಕ್ತವಾಯಿತು. ಸಂಘಟನೆಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಅಧಿಕಾರಿಗಳು ಮತ್ತು ಸೈನಿಕರಿದ್ದರು. ಯಾವಕ್ಷಣದಲ್ಲಿ ಸೂಚನೆ ನೀಡಿದರೂ ಹೋರಾಟಕ್ಕೆ ಶಸ್ತ್ರ ಕೈಗೆತ್ತಿಕೊಳ್ಳಲು ಅವರು ಸಿದ್ಧರಿದ್ದರು. ನಮ್ಮ ಸಂಘಟನೆಯಲ್ಲದೆ ಹೊರಗೆ ಇನ್ನೂ ಅನೇಕ ಸಂಘಟನೆಗಳು ಅಸ್ತಿತ್ವದಲ್ಲಿದ್ದವು. ಸಂಘಟನೆಯಲ್ಲಿ ಇಲ್ಲದ ಜನರು ಕೂಡ ಬಂಡೇಳುತ್ತಿದ್ದರು. 'ನಾಗರೀಕರು' ಕೂಡ ಬಂಡಾಯವಲ್ಲಿ ಸೇರುತ್ತಿದ್ದರು! ಇದು ನಮ್ಮ ಅಂದಾಜಾಗಿತ್ತು.

ಇಷ್ಟೊಂದು ದೊಡ್ಡ ಸಂಘಟನೆ ಶತ್ರು ಪಾಳಯದಲ್ಲೇ ಇದ್ದು ಬ್ರಿಟಿಷರಿಂದ ಪತ್ತೆಯಾಗದೆ ಕಾರ್ಯನಿರ್ವಹಿಸುತ್ತಿತ್ತು ಎನ್ನುವುದು ಅನೇಕರಿಗೆ ಅಚ್ಚರಿಯಾಗಿ ಕಾಣಬಹುದು. ಅದೊಂದು ಅದ್ಭುತವೇ ಹೌದು. ಬ್ರಿಟಿಷರಿಗೆ ಈ ವಿಷಯ ಗೊತ್ತಿತ್ತು. ಅದನ್ನು, ಅಂದರೆ ಸಂಘಟನೆಯನ್ನು ಬುಡಸಮೇತ ಕಿತ್ತುಹಾಕಬೇಕಾದರೆ ಬ್ರಿಟಿಷರು ಇಡೀ ಭಾರತೀಯ ಸೇನೆಯನ್ನು ಮತ್ತು ವಾಯುಪಡೆಯನ್ನು ವಿಸರ್ಜಿಸಬೇಕಾಗುತ್ತಿತ್ತು. ಯಾಕೆಂದರೆ ಸಂಘಟನೆ ಇಡೀ ಸೇನಾ ಪಡೆಗಳನ್ನು ವ್ಯಾಪಿಸಿತ್ತು. ಸಂಘಟನೆಯ ಯೋಜನೆಯಲ್ಲಿನ ಲಂಬ ವ್ಯವಸ್ಥೆ (vertical system)ಯಿಂದಾಗಿ ಭಾರತೀಯ ಸಶಸ್ತ್ರ ಪಡೆಗಳಲ್ಲಿನ ಸಾರ್ವತ್ರಿಕ ಹಾಗೂ ತೀಕ್ಷ್ಣ ಬ್ರಿಟಿಷ್ ವಿರೋಧಿ ಅತೃಪ್ತಿಯ ಹಿಂದಿದ್ದ ಒಂದು ಸಮನ್ವಯಿತ ಯೋಜನೆಯ ಸುಳಿವು ಬ್ರಿಟಿಷರಿಗೆ ಸಿಗಲಿಲ್ಲ. ಈ ಅತೃಪ್ತಿಯ ಬಗ್ಗೆ ಬ್ರಿಟಿಷರಿಗೆ ಚೆನ್ನಾಗಿಯೇ ಅರಿವಿತ್ತು.

ರಾಷ್ಟ್ರೀಯ ವಿಮೋಚನೆ ಹೋರಾಟವನ್ನು ಹತ್ತಿಕ್ಕಲು ಯಾವುದೇ ದಬ್ಬಾಳಿಕೆ ಹರಿಯಬಿಟ್ಟರೆ ಭಾರತೀಯ ಸಶಸ್ತ್ರ ಪಡೆಗಳು ತಮಗೆ ಬೆಂಬಲ ನೀಡಲಾರವು ಎಂಬ ಅಭಿಪ್ರಾಯವನ್ನು ಬ್ರಿಟಿಷರು ತಳೆದರು. ಯುದ್ಧೋತ್ತರ ನಂತರದ ಅವಧಿಯಲ್ಲಿ ಬ್ರಿಟಿಷರು ಅನುಸರಿಸಿದ ರಾಜಕೀಯ ತಂತ್ರಕ್ಕೆ ಈ ಅಭಿಪ್ರಾಯವೇ ಆಧಾರವಾಗಿತ್ತು. ದಬ್ಬಾಳಿಕೆ ನಡೆಸಿದ್ದೇ ಆದಲ್ಲಿ ಸೈನಿಕರು ಅದನ್ನು ಸಕ್ರಿಯವಾಗಿ ವಿರೋಧಿಸುತ್ತಾರೆ, ಬಹಳಷ್ಟು ಸೈನಿಕರು ಭಾರತೀಯ ಜನರ ಪರವಾಗಿ ನಿಲ್ಲುತ್ತಾರೆ.

ಬ್ರಿಟಿಷ್ ಪಡೆಗಳು ಕೂಡ ಯುದ್ಧದಿಂದ ದಣಿದು ಹೋಗಿದ್ದವು. ಅವುಗಳ ಸೈನಿಕರು ಸ್ವದೇಶಕ್ಕೆ ತೆರಳಲು ಕಾತರರಾಗಿದ್ದರು. ಕೋಮುವಾದಿ ವೈರಸ್ ಆಗಿನ್ನು ಭಾರತೀಯ ಸೇನೆಯನ್ನು ತಟ್ಟಿರಲಿಲ್ಲ. ಹೀಗಾಗಿ ಸಾಮ್ರಾಜ್ಯಶಾಹಿ ಹಸ್ತ ಅಲ್ಲಿ ಇರಲಿಲ್ಲ.

ಐಎನ್‌ಎ ಬಗ್ಗೆ ಬ್ರಿಟಿಷರು ಭಯಗೊಂಡಿದ್ದರು ಎಂದು ಹೇಳುವುದು ತಪ್ಪಾಗುತ್ತದೆ. ಅವರಿಗೆ ಅಂಥ ಭೀತಿಯೇನೂ ಇರಲಿಲ್ಲ. ಐಎನ್‌ಎಯ ಬಹುದೊಡ್ಡ ಭಾಗ ರಣರಂಗದಲ್ಲಿ ನಾಶವಾಗಿತ್ತು, ಅದರ ಬಹಳಷ್ಟು ಜನರು ಭಾರತದ ಜೈಲುಗಳಲ್ಲಿ ಬಂಧಿಯಾಗಿದ್ದರು. ರಾಜಕೀಯವಾಗಿ ಅದು ಭಾರತದ ಜನರಲ್ಲಿ ಉತ್ಸಾಹ ತುಂಬಿತ್ತು ಹಾಗೂ ಅದರ ಕ್ರಾಂತಿಕಾರಿ ಚಟುವಟಿಕೆ ಭಾರತೀಯ ಸಶಸ್ತ್ರಪಡೆಗಳ ಹೃದಯವನ್ನು ಗೆದ್ದಿತ್ತು.

ಕೆಂಪುಕೋಟೆಯಲ್ಲಿ ನಡೆದ ಐಎನ್‌ಎ ಅಧಿಕಾರಿಗಳ ವಿಚಾರಣೆಯನ್ನು ನಾವು ಸೇನೆಯೊಳಗಿನಿಂದ ನಿಕಟವಾಗಿ ಗಮನಿಸುತ್ತಿದ್ದೆವು. ವಿಚಾರಣೆಯ ಕಲಾಪಗಳಿದ್ದ ವಿಶೇಷ ಪುಸ್ತಕಗಳನ್ನು ಮುದ್ರಿಸಿದೆವು. ಬರ್ಮಾ, ಥಾಯ್ ಲ್ಯಾಂಡ್, ಇಂಡೋ-ಚೀನಾ ಮತ್ತು ಮಲಯಗಳಲ್ಲಿದ್ದ ನಮ್ಮ ಪಡೆಗಳಿಗೆ ನಮ್ಮ ಸಂಘಟನೆ ಈ ಪುಸ್ತಿಕೆಗಳನ್ನು ರವಾನಿಸಿತು.

ರಾಷ್ಟ್ರೀಯ ವಿಮೋಚನೆ ಸಂಗ್ರಾಮದಲ್ಲಿ ಐ.ಎನ್.ಎ. ಪಾತ್ರ ರಾಜಕೀಯವಾಗಿ ಅತಿ ಮಹತ್ವದ್ದಾಗಿತ್ತು. ಆದರೆ ಯುದ್ಧೋತ್ತರ ತಿಂಗಳುಗಳಲ್ಲಿ ಅದು ಭಾರತದಲ್ಲಿ ಮಿಲಿಟರಿ ಶಕ್ತಿಯಾಗಿ ಕಳೆಗುಂದಿದ್ದರಿಂದ ಬ್ರಿಟಿಷರಿಗೆ ಅಪಾಯಕಾರಿ ಎನಿಸಲಿಲ್ಲ. ಆ ಕಾಲದಲ್ಲಿ ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯ ಅಸ್ತಿತ್ವಕ್ಕೆ ಭೀತಿಯೊಡ್ಡಿದ್ದು ೨೫ ಲಕ್ಷದಷ್ಟು ಸಿಬ್ಬಂದಿಯಿದ್ದ ಬೃಹತ್ ಭಾರತೀಯ ಸಶಸ್ತ್ರ ಪಡೆಗಳು.

ಒಂದು ಶತಮಾನಕ್ಕೂ ಹೆಚ್ಚು ಕಾಲದಿಂದ (ತಡೆಗೋಡೆಯಾದ ಸೇನೆ) ದೇಶದಲ್ಲಿ ಸಾಮ್ರಾಜ್ಯಶಾಹಿ ಆಡಳಿತ ದೌರ್ಜನ್ಯ ಹಾಗೂ ದಬ್ಬಾಳಿಕೆಯ ಪ್ರಮುಖ ಸಾಧನವಾಗಿದ್ದ ಈ ಬಂಡುಕೋರ ಸೈನ್ಯದ ಅಸ್ತಿತ್ವ ಬ್ರಿಟಿಷರು ರಾಷ್ಟ್ರೀಯ ವಿಮೋಚನೆ ಸಮರದ ಮೇಲೆ ಬಹಿರಂಗ ಪ್ರಹಾರಹಾಕಲು ದೊಡ್ಡ ತಡೆಗೋಡೆಯಾಯಿತು. ಬಹಿರಂಗ ದಾಳಿಗೆ ಬದಲು ಗಮನ ಬೇರೆಡೆ ಸೆಳೆಯಲು ವಿವಿಧ ತಂತ್ರಗಳನ್ನು ಅನುಸರಿಸಿದರು.

ಕಾಂಗ್ರೆಸ್ ಮತ್ತು ಮುಸ್ಲಿಂಲೀಗ್ ಜತೆಗಿನ ಸಂಧಾನಗಳು ಭಾರತೀಯ ಸಶಸ್ತ್ರ ಪಡೆಗಳಲ್ಲಿನ ಕಟ್ಟಾ ಕ್ರಾಂತಿಕಾರಿ ಶಕ್ತಿಗಳನ್ನು ದುರ್ಬಲಗೊಳಿಸಲು, ರಾಷ್ಟ್ರೀಯ ಆಂದೋಲನದ ಏಕತೆಯನ್ನು ಮುರಿಯಲು ಸಾಕಷ್ಟು ಸಮಯ ಒದಗಿಸುವುದೆಂದು ಬ್ರಿಟಿಷರು ಯೋಚಿಸಿದರು. ಕಾಂಗ್ರೆಸ್‌ನಿಂದ ಹೊರಗಡೆ ಕ್ರಾಂತಿಕಾರಿ ಶಕ್ತಿಗಳು ಜನತೆಯ ಮುಂದಿಟ್ಟ ಸ್ಪಷ್ಟ ಮುನ್ನೋಟದ ಬಗ್ಗೆ ಗೊಂದಲ ಮೂಡಿಸಲು ಹಾಗೂ ಈ ಶಕ್ತಿಗಳನ್ನು ತಟಸ್ಥಗೊಳಿಸಲು ಸಮಯ ಸಿಗುವುದೆಂಬುದೂ ಅವರ ಯೋಚನೆಯಾಗಿತ್ತು.

ಈ ಗುರಿಸಾಧಿಸಿದ ತಕ್ಷಣವೇ ಅವರು ಮತ್ತೆ ತಮ್ಮ ಆಟ ಆಡಬಹುದು, ರಾಷ್ಟ್ರೀಯ ಹೋರಾಟದ ವಿರುದ್ಧ ಬಹಿರಂಗ ದಾಳಿ ನಡೆಸಬಹುದು ಹಾಗೂ ಅಸ್ಥಿರವಾದ ಆಡಳಿತವನ್ನು ಇನ್ನಷ್ಟು ಕಾಲ ಮುಂದುವರಿಸಬಹುದು ಎಂಬುದು ಪರಂಗಿಗಳ ಲೆಕ್ಕಾಚಾರವಾಗಿತ್ತು.

ಅಂದಿನ ಪರಿಸ್ಥಿತಿಯ ಬಗೆಗಿನ ನಮ್ಮ ಅಂದಾಜು ಆದಾಗಿತ್ತು. ರಾಷ್ಟ್ರೀಯ ವಿಮೋಚನೆ ಸಮರದಲ್ಲಿನ ಬಿಕ್ಕಟ್ಟನ್ನು ಬಗೆಹರಿಸುವ ವಿಧಾನಗಳನ್ನು ಜನವರಿ ಏಳರಂದು ಮುದ್ರೆಯಲ್ಲಿ ನಡೆದ ಸಭೆಯಲ್ಲಿ ವಿವರವಾಗಿ ಚರ್ಚಿಸಿದೆವು. ಬಿಕ್ಕಟ್ಟನ್ನು ಕೊನೆಗಾಣಿಸಲು ಗಾಂಧೀಜಿ, ಪಟೇಲ್, ನೆಹರೂ ಮತ್ತು ಇತರ ಕಾಂಗ್ರೆಸ್ ನಾಯಕರನ್ನು ನೆಚ್ಚಿಕೊಳ್ಳುವಂತಿರಲಿಲ್ಲ. ಈ ವಿಚಾರದಲ್ಲಿ ಸಮಾಜವಾದಿಗಳು ಮತ್ತು ಕಮ್ಯುನಿಸ್ಟರನ್ನು ಪರ್ಯಾಯ ಶಕ್ತಿಯಾಗಿ ಅವಲಂಬಿಸಿ ಅವರ ಮಾರ್ಗದರ್ಶನಕ್ಕಾಗಿ ಎದುರುನೋಡಬಹುದಿತ್ತು.

ತ್ರಿಮೂರ್ತಿಗಳು :

ರಾಜಕೀಯವಾಗಿ ಅಪಕ್ವವಾದ, ನಮ್ಮ ನೇತೃತ್ವದ ಪ್ರತ್ಯೇಕತೆ ಬಂಡಾಯ ಯಶಸ್ವಿ ಆಗದಿರಬಹುದು ಎಂಬ ಆತಂಕ ನಮ್ಮನ್ನು ಕಾಡಿತು. ಇಂಥ ಸನ್ನಿವೇಶದಲ್ಲಿ ನಮ್ಮ ದೃಷ್ಟಿಕೋನ ಏನಿರಬೇಕು? ಈ ಸಮಸ್ಯೆಯನ್ನು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿದೆವು. ಸಮಾಜವಾದಿಗಳು ನೆರವಾಗಬಹುದು ಎಂದು ನಮ್ಮ ಸಂಗಾತಿಗಳು ವರದಿಮಾಡಿದರು. (ಮುಂದುವರಿಯುವುದು)

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಮೇ 5, 2003
ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಸಾಹಿತ್ಯ ಅಕಾಡೆಮಿಗಳು ಕುರಿತು ದಕ್ಷಿಣ ಭಾರತದ ಭಾಷಾ ಅಕಾಡೆಮಿಗಳ ಅಧ್ಯಕ್ಷರ ಸಮಾವೇಶ ಬೆಳಿಗ್ಗೆ 11 ಗಂಟೆಗೆ
ಸ್ಥಳ: ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು.

ಮೇ 5ರಿಂದ 7ರ ವರೆಗೆ
ಛಾಯಾಚಿತ್ರ ಪ್ರದರ್ಶನ
ಚಿತ್ರಕಲಾ ಪರಿಷತ್ತು ಬೆಂಗಳೂರು.

ಮೇ 11, 2003
ಖ್ಯಾತ ಲೇಖಕ ವ್ಯಾಸರಾಯ ಬಲ್ಲಾಳರ ಮುಂಬಯಿ ಬದುಕಿನ ಅನುಭವ ಕಥನ ಬಿಡುಗಡೆ ಸಮಾರಂಭ
ಸಮಯ : ಬೆಳಿಗ್ಗೆ 10ಕ್ಕೆ
ನಮನ ಸಭಾಂಗಣ - ಕನ್ನಡ ಭವನ ಜೆ.ಸಿ. ರಸ್ತೆ.

ಮೇ 17, 2003
ಕರ್ನಾಟಕ ಪ್ರಾಂತ ರೈತ ಸಂಘ ಉತ್ತರ ಕನ್ನಡ ಜಿಲ್ಲಾ ಸಮ್ಮೇಳನ ಕಾರವಾರ.

ಮೇ 19 ರಿಂದ 21, 2003
ಅಖಿಲ ಭಾರತ ಔಷಧಿ ಪ್ರತಿನಿಧಿಗಳ (FMRAI) ಮುಷ್ಕರ

ಜೂನ್ 2-5, 2003
ಬಿ.ಎಸ್.ಎನ್.ಎಲ್. ಎಂಪ್ಲಾಯಿಸ್ ಯೂನಿಯನ್ 2 ನೇ ಅಖಿಲ ಭಾರತ ಸಮ್ಮೇಳನ ಲಕ್ನೋ - ಉತ್ತರ ಪ್ರದೇಶ.

ವ್ಯಾಟ್ ಅಥವಾ ಮೌಲ್ಯವರ್ಧಿತ ತೆರಿಗೆ - ಕೆಲವು ಪ್ರಶ್ನೋತ್ತರಗಳು

ಈಗ ಎಲ್ಲಾ ಕಡೆ ಈ 'ವ್ಯಾಟ್' ದೇ ಮಾತು. ಅದರ ಕೆಲವಂಶ ಹಿಡಿದು ವಾದ-ಪ್ರತಿವಾದ. ವ್ಯಾಪಾರೀಗಳಂತೂ ದೇಶವ್ಯಾಪಿ ಮುಷ್ಕರಕ್ಕೆ ಇಳಿದರು. 'ವ್ಯಾಟ್' ಜಾರಿಯ ಬಗ್ಗೆ ಸಮಿತಿಯೊಂದು ರಚಿಸಲಾಗಿದೆ. ಪ.ಬಂಗಾಳದ ಹಣಕಾಸು ಸಚಿವರು ಇದರ ಸಂಚಾಲಕರು. ಇಂತಹ ವ್ಯಾಟ್ ಏನು? ಯಾಕೆ ಎಂಬ ಬಗ್ಗೆ ವಿವರಿಸಿದ್ದಾರೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್‌ರವರು

ವ್ಯಾಟ್ ಅಥವಾ ಮೌಲ್ಯವರ್ಧಿತ ತೆರಿಗೆ ಎಂದರೇನು?

ವ್ಯಾಟ್ (value added tax) ಎಂಬುದರ ಕನ್ನಡ ಸಮಾನಾರ್ಥಕ ಪದ ಮೌಲ್ಯವರ್ಧಿತ ತೆರಿಗೆ ಎಂದು. ಈ ತೆರಿಗೆ ಈಗ ಜಾರಿಯಲ್ಲಿರುವ ಮಾರಾಟ ತೆರಿಗೆ ಅಥವಾ ವಾಣಿಜ್ಯ ತೆರಿಗೆಗೆ ಬದಲಾಗಿ ಜಾರಿಗೆ ತರಬೇಕೆಂದಿರುವ ವ್ಯವಸ್ಥೆ. ಇದು ಒಂದು ವಸ್ತುವಿನ ಮಾರಾಟದ ಬೆಲೆಯ ಮೇಲೆ ತೆರಿಗೆ ಹಾಕುವುದಕ್ಕೆ ಬದಲಾಗಿ ಆ ವಸ್ತುವನ್ನು ತಯಾರು ಮಾಡುವಲ್ಲಿ ಎಷ್ಟು ಮೌಲ್ಯವನ್ನು ಸೇರಿಸಲಾಗಿದೆ ಎಂಬುದರ ಮೇಲೆ- ಅಂದರೆ ಹೆಚ್ಚಿದ ಮೌಲ್ಯದ ಮೇಲೆ ಮಾತ್ರ ತೆರಿಗೆ ಹಾಕುವ ಪದ್ಧತಿ.


ಮೌಲ್ಯವರ್ಧನೆ ಎಂದರೇನು?

ಮನುಷ್ಯ ತನ್ನ ದುಡಿಮೆಯಿಂದ ಅನೇಕ ವಸ್ತುಗಳ ಮೌಲ್ಯವನ್ನು ಹೆಚ್ಚಿಸುತ್ತಾನೆ. ಅಕ್ಕಿಯಿಂದ ಅನ್ನ ಮಾಡಿದಾಗ ತರಕಾರಿಗಳಿಂದ ಸಾರು, ಸಾಂಬಾರು ಇತ್ಯಾದಿಗಳನ್ನು ಮಾಡಿದಾಗ ಅವುಗಳ ಮೌಲ್ಯ ಹೆಚ್ಚುತ್ತದೆ. ಹಾಗೆಯೇ ನೆಲದಿಂದ ಕಬ್ಬಿಣದ ಅದಿರನ್ನು ಹೊರಗೆ ತೆಗೆದಾಗ ಅದಕ್ಕೆ ಮೌಲ್ಯ ಸೇರ್ಪಡೆಯಾಗುತ್ತದೆ. ಹಾಗೆಯೇ ಕಬ್ಬಿಣದ ಅದಿರಿನಿಂದ ಕಬ್ಬಿಣ, ತಗಡು, ಉಕ್ಕಿನ ಕಲಗೆ ಇವುಗಳನ್ನು ಮಾಡಿದಾಗ , ಹಾಗೆಯೇ ಅವುಗಳಿಂದ ಮತ್ತೆ ಅನೇಕ ವಸ್ತುಗಳನ್ನು ತಯಾರಿಸಿದಾಗ ಹೀಗೆ ಪ್ರತಿ ಹಂತದಲ್ಲಿಯೂ ವಸ್ತುವಿನ ಮೌಲ್ಯ ಹೆಚ್ಚುತ್ತಾ ಹೋಗುತ್ತದೆ.

ಅದೇ ರೀತಿ ವಸ್ತುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಿದಾಗಲೂ ಅದರ ಮೌಲ್ಯ ಹೆಚ್ಚುತ್ತದೆ.

ಮೌಲ್ಯದ ವರ್ಧನೆಯ ಮೇಲೆ ತೆರಿಗೆ ಹಾಕುವುದು ಹೇಗೆ?

ಯಾವುದೇ ಮಾರಾಟದ ವಸ್ತುವಿಗೆ ಆ ಹಂತದಲ್ಲಿ ಯಾವ ಮೌಲ್ಯ ಸೇರ್ಪಡೆಯಾಗಿದೆಯೋ ಆ ಹೆಚ್ಚಿದ ಮೌಲ್ಯದ ಮೇಲೆ ಮಾತ್ರ ತೆರಿಗೆ ಹಾಕುವುದು ಮೌಲ್ಯವರ್ಧಿತ ತೆರಿಗೆಯ ಪದ್ಧತಿ. ಅಂದರೆ ಗೋಧಿ ಹಿಟ್ಟಿನ ಮೇಲೆ ತೆರಿಗೆ ಎಂದರೆ ಅದರಲ್ಲಿ ಗೋಧಿಯ ಬೆಲೆ ಕಳೆದು ಹೆಚ್ಚಿದ ಬೆಲೆ ಏನಿದೆಯೋ ಅದರ ಮೇಲೆ ಮಾತ್ರ ತೆರಿಗೆ. ಹಾಗೆಯೇ ಬ್ರೆಡ್ ಮೇಲೆ ತೆರಿಗೆ ಎಂದರೆ ಬ್ರೆಡ್ ಮಾಡಲು ಉಪಯೋಗಿಸಿದ ಗೋಧಿಯ ಹಿಟ್ಟಿನ ಬೆಲೆಯನ್ನು ಇತರ ವಸ್ತುಗಳ ಬೆಲೆಯನ್ನು ತೆಗೆದುಹಾಕಿ, ಗೋಧಿಯ ಹಿಟ್ಟಿನಿಂದ ಬ್ರೆಡ್ ಮಾಡಿದಾಗ ಹೆಚ್ಚಿದ ಬೆಲೆಯ ಮೇಲೆ ಮಾತ್ರ ತೆರಿಗೆ ಹಾಕುವುದು.



ಮಾರಾಟ ತೆರಿಗೆಗೂ ಮೌಲ್ಯದವರ್ಧಿತ ತೆರಿಗೆಗೂ ಇರುವ ವ್ಯತ್ಯಾಸವೇನು?

ಮಾರಾಟ ತೆರಿಗೆ ಪದ್ಧತಿಯಲ್ಲಿ ಗೋಧಿಯ ಹಿಟ್ಟಿನ ಮೇಲೆ ತೆರಿಗೆ ಎಂದರೆ ಗೋಧಿಯ ಬೆಲೆಯನ್ನು ಸೇರಿಸಿದ ಗೋಧಿಯ ಹಿಟ್ಟಿನ ಮೇಲೆ ತೆರಿಗೆ ಹಾಕಲಾಗುತ್ತದೆ. ಬ್ರೆಡ್‌ನ ಮೇಲೆ ತೆರಿಗೆ ಎಂದರೆ ಬ್ರೆಡ್‌ನ ಇಡೀ ಬೆಲೆಯ ಮೇಲೆ ತೆರಿಗೆ ಹಾಕಲಾಗುತ್ತದೆ. ಮೌಲ್ಯವರ್ಧಿತ ತೆರಿಗೆಯಲ್ಲಿ ಬ್ರೆಡ್‌ನ ಬೆಲೆಯಿಂದ ಗೋಧಿಹಿಟ್ಟು ಮತ್ತಿತರ ಕಚ್ಚಾವಸ್ತುಗಳ ಬೆಲೆಯನ್ನು ತೆಗೆದು ಉಳಿದ ಹೆಚ್ಚಿದ ಮೌಲ್ಯಕ್ಕೆ ಮಾತ್ರ ತೆರಿಗೆ ಹಾಕಲಾಗುತ್ತದೆ.

ಮೌಲ್ಯವರ್ಧಿತ ತೆರಿಗೆ ಪದ್ಧತಿಯ ಬಳಕೆದಾರರಿಗಾಗುವ ಅನುಕೂಲಗಳೇನು?

ಮೌಲ್ಯವರ್ಧಿತ ತೆರಿಗೆ ಪದ್ಧತಿಯಿಂದ ತೆರಿಗೆ ಮೇಲೆ ತೆರಿಗೆ ಬೀಳುವ (caseading effect)ದನ್ನು ತಪ್ಪಿಸಬಹುದು. ಉದಾಹರಣೆಗೆ ಬ್ರೆಡ್ ಮೇಲೆ ಮಾರಾಟ ತೆರಿಗೆ ಎಂದರೆ ಬ್ರೆಡ್‌ನ ಒಟ್ಟು ಬೆಲೆಯ ಮೇಲೆ ತೆರಿಗೆ. ಅದರಲ್ಲಿ ಗೋಧಿಯ ಹಿಟ್ಟಿನ ಮೇಲೆ ಈಗಾಗಲೇ ಹಾಕಲಾದ ಮಾರಾಟ ತೆರಿಗೆಯೂ ಅದರಲ್ಲಿ ಸೇರಿಹೋಗಿರುತ್ತದೆ. ಬ್ರೆಡ್‌ನ ಮೇಲೆ ತೆರಿಗೆ ಹಾಕಿದಾಗ ಗೋಧಿಯ ಹಿಟ್ಟಿನ ಬೆಲೆಯಲ್ಲಿ ಅಡಗಿಹೋದ ಮಾರಾಟ ತೆರಿಗೆಯ ಮೇಲೆ ಇನ್ನೊಮ್ಮೆ ಮಾರಾಟ ತೆರಿಗೆ ಹಾಕಲಾಗುತ್ತದೆ.

ಹೀಗೆ ತೆರಿಗೆಯ ಮೇಲೆ ತೆರಿಗೆ ಬೀಳುವ ಪದ್ಧತಿಯಿಂದ ಅನೇಕ ರೀತಿಯ ಪರಿಷ್ಕರಣೆಗೆ ಒಳಗಾಗುವ ವಸ್ತುಗಳ ಮೇಲೆ ಅನೇಕ ಬಾರಿ ತೆರಿಗೆ ಬಿದ್ದು ವಸ್ತುವಿನ ಬೆಲೆ ಏರುತ್ತದೆ. ಉದಾಹರಣೆಗೆ ಕಬ್ಬಿಣದ ಅದಿರಿನಿಂದ ಸ್ಟೀಲ್ ಪಾತ್ರೆಯಾಗುವವರೆಗೆ ಹತ್ತಾರು ಹಂತಗಳಲ್ಲಿ ತೆರಿಗೆಯ ಮೇಲೆ ತೆರಿಗೆ ಬೀಳುತ್ತದೆ. ಮೌಲ್ಯವರ್ಧಿತ ತೆರಿಗೆಯಲ್ಲಿ ಈ ರೀತಿ ತೆರಿಗೆಯ ಮೇಲೆ ತೆರಿಗೆ ಬೀಳುವುದನ್ನು ತಪ್ಪಿಸಬಹುದು.

ವ್ಯಾಟ್ ಪದ್ಧತಿಯಿಂದ ಮತ್ತೇನಾದರೂ ಒಳ್ಳೆಯ ಪರಿಣಾಮಗಳಿವೆಯೇ?

ಇವೆ. ವ್ಯಾಟ್ ಹಾಕುವ ಪದ್ಧತಿಯನ್ನು ಮೇಲೆ ವಿವರಿಸಿದಾಗ ನಿಮಗೆ ಅದು ಗೊತ್ತಾಗಿರಬಹುದು. ವ್ಯಾಟ್ ಪದ್ಧತಿಯಲ್ಲಿ ಉತ್ಪಾದನೆಯ ಮಾರಾಟದ ಪ್ರತಿ ಹಂತದಲ್ಲಿಯೂ ಕೂಡ ಸರಿಯಾದ ಲೆಕ್ಕಾಚಾರ ಇಡಬೇಕಾಗುತ್ತದೆ. ಅದರಿಂದ ತೆರಿಗೆ ಕೊಡದೆ ತಪ್ಪಿಸಿಕೊಳ್ಳುವುದು ಕಷ್ಟಸಾಧ್ಯವಾಗುತ್ತದೆ. ಈಗ ಅನೇಕ ಬಾರಿ ಬಿಲ್ ನೀಡದೆ ತೆರಿಗೆ ಸಂಗ್ರಹಿಸುವುದನ್ನು ತಪ್ಪಿಸುತ್ತಾರೆ. ಬಳಕೆದಾರನಿಗೆ ಗೊತ್ತಾಗದಂತೆ ತೆರಿಗೆ ಸಂಗ್ರಹಿಸಿದರೂ ಸರ್ಕಾರಕ್ಕೆ ಅದನ್ನು ಪಾವತಿ ಮಾಡದೆ ತಪ್ಪಿಸುತ್ತಾರೆ. ವ್ಯಾಟ್ ಪದ್ಧತಿಯಲ್ಲಿ ಹೀಗೆ ಮಾರಾಟ ತೆರಿಗೆ ತಪ್ಪಿಸುವುದು ಕಷ್ಟಕರವಾಗುತ್ತದೆ.

ಅಷ್ಟೇ ಅಲ್ಲ ಪ್ರತಿಯೊಬ್ಬರ ಆದಾಯವೂ ಸರಿಸುಮಾರು ನಿಖರವಾಗಿ ಗೊತ್ತಾಗುವಂತಾಗುತ್ತದೆ. ರಾಮನ ಲೆಕ್ಕ ಕೃಷ್ಣನ ಲೆಕ್ಕ ಎನ್ನುವ ಮಾತಿದೆಯಲ್ಲ. ಕೃಷ್ಣನ ಲೆಕ್ಕ ಇಡುವುದು, ಆದಾಯ ತೆರಿಗೆ ತಪ್ಪಿಸುವುದು ಸುಲಭವಲ್ಲ. ಹೀಗಾಗಿ ಸರ್ಕಾರದ ಆದಾಯ ಹೆಚ್ಚಾಗುತ್ತದೆ.

ಹೀಗೆ ಪ್ರತಿಹಂತದಲ್ಲಿಯೂ ಸರಿಯಾದ ಲೆಕ್ಕಪತ್ರ ಇಡುವ ವ್ಯವಸ್ಥೆಯಿಂದ ಒಂದು ಉದ್ಯಮದ ಆರ್ಥಿಕ ವ್ಯವಸ್ಥೆಯಲ್ಲಿ ಮೌಲ್ಯವರ್ಧನೆ ಹೆಚ್ಚುಸುವುದಕ್ಕೆ ಗಮನ ಹೆಚ್ಚಾಗಬೇಕಾಗುತ್ತದೆ. ಅರ್ಥವ್ಯವಸ್ಥೆಯ ಅಂಕಿ ಅಂಶಗಳು ಹೆಚ್ಚು ನಿಖರವಾಗುತ್ತದೆ.

ಇತ್ತೀಚೆಗೆ ಇಡೀ ದೇಶದ ವರ್ತಕರು ಮುಷ್ಕರ ಹೂಡಿದ್ದು ಯಾವ ಕಾರಣಕ್ಕಾಗಿ?

ಮೇಲೆ ವಿವರಿಸಲಾದ ವ್ಯಾಟ್ ಪದ್ಧತಿಯ ಅನುಕೂಲಗಳೇ ನಿಮಗೆ ಈ ಮುಷ್ಕರದ ಒಳ ಕಾರಣಗಳನ್ನು ತಿಳಿಸುತ್ತವೆ. ವರ್ತಕರು ಬಿಲ್ ನೀಡಬೇಕಾಗುವುದು, ಮಾರಾಟ ತೆರಿಗೆ ಸಂಗ್ರಹಿಸಲೇಬೇಕಾಗುವುದು ಹಾಗೂ ಸರ್ಕಾರಕ್ಕೆ ಪಾವತಿಸಬೇಕಾಗುವುದು, ಆದಾಯ ತೆರಿಗೆ ತಪ್ಪಿಸಿಕೊಳ್ಳಲು ಅವಕಾಶ ಕಡಿಮೆಯಾಗುವುದು, ನಿಖರ ಲೆಕ್ಕಪತ್ರ ಇಡಬೇಕಾಗುವುದು. ಇವು ವರ್ತಕರು ಸಿಟ್ಟಿಗೇಳಲು ಕಾರಣ. ಇದರಲ್ಲಿ ಸಣ್ಣ ವಹಿವಾಟುದಾರರಿಗೆ ತೆರಿಗೆ ತಪ್ಪಿಸುವುದಕ್ಕಿಂತಲೂ ಲೆಕ್ಕವನ್ನು ಇಡುವುದೇ ದೊಡ್ಡ ಕಷ್ಟ ಆದಕ್ಕಾಗಿ ಲೆಕ್ಕ ಬರೆಯುವವರನ್ನು ಇಟ್ಟುಕೊಳ್ಳಬೇಕಾಗುತ್ತದೆ. ಚಾರ್ಟೆಡ್ ಅಕೌಂಟೆಂಟ್‌ಗಳ ಮೊರೆ ಹೋಗಬೇಕಾಗುತ್ತದೆ ಎಂಬುದು ದೊಡ್ಡ ಕಷ್ಟ. ದೊಡ್ಡ ವಹಿವಾಟುದಾರರಿಗೆ ಲೆಕ್ಕ ಇಡುವುದು

ಪುಟ 4 ಕ್ಕೆ

ತೊಗಾಡಿಯಾ, ಈ ತಗಡು ತ್ರಿಶೂಲದಲ್ಲಿ ಯಾವ ಮಾಂತ್ರಿಕ ಶಕ್ತಿಯಿದೆ?

ಜಿಲ್ಲಾ ಯುವ ವಿಕಾಸ ವೇದಿಕೆಯಿಂದ ಹಿಂದೂ ಸಮಾಜೋತ್ಸವಕ್ಕೆ ಆಗಮಿಸುತ್ತಿರುವ ತೊಗಾಡಿಯಾಗೆ ಫ್ಯಾಕ್ಸ್‌ನಲ್ಲಿ ಪ್ರಶ್ನೆ.

ರಾಜಸ್ತಾನದಲ್ಲಿ ಕಂಬಿ ಎಣಿಸಿದ ಪ್ರವೀಣ ತೊಗಾಡಿಯಾ ಹಿಂದೂ ಸಮಾಜೋತ್ಸವದ ಹೆಸರಿನಲ್ಲಿ ಬಿಜೆಪಿಗೆ ಚುನಾವಣಾ ಸಿದ್ಧತೆಗಾಗಿ ಭಟ್ಕಳಕ್ಕೆ ಬರಲಿದ್ದಾನೆ. ಭಟ್ಕಳ ಕೋಮು ಗಲಭೆಗಳಲ್ಲಿ ಹತ್ತಿ ಉರಿದ ಪ್ರದೇಶವೆಂಬುದು ಗಮನಿಸಬೇಕು. ಈ ಹಿನ್ನೆಲೆಯಲ್ಲಿ ಕೆಲವು ಮೂಲಭೂತ ಪ್ರಶ್ನೆಗಳನ್ನು ಎತ್ತಿದ್ದಾರೆ ದೀಪಕ ಕೆಳಮನೆಯವರು



"ಪ್ರಿಯ ತೊಗಾಡಿಯಾ ನೀವು ಹಿಂದುಗಳಿಗೆ ತ್ರಿಶೂಲ ವಿತರಿಸುವ ಬದಲು ಶಾಲಾ, ಕಾಲೇಜುಗಳನ್ನು ಯಾಕೆ ಪ್ರಾರಂಭಿಸಬಾರದು?"

ಉ.ಕ. ಜಿಲ್ಲಾ ಯುವ ವಿಕಾಸ ವೇದಿಕೆ ಅಧ್ಯಕ್ಷ ದೀಪಕ ಕೆಳಮನೆಯವರು ಅಂತರ್ರಾಷ್ಟ್ರೀಯ ವಿಶ್ವಹಿಂದು ಪರಿಷತ್ ಪ್ರಧಾನ ಕಾರ್ಯದರ್ಶಿ ಪ್ರವೀಣ ತೊಗಾಡಿಯಾ ಅವರಿಗೆ ಕಳುಹಿಸಿದ ಫ್ಯಾಕ್ಸ್ ಸಂದೇಶದಲ್ಲಿ ಪ್ರಶ್ನಿಸಿದ್ದಾರೆ.

ತೊಗಾಡಿಯಾ ನೀವು ಜನರಿಗ ವಿತರಿಸುತ್ತಿರುವ ತ್ರಿಶೂಲ ಮಾಂತ್ರಿಕ ಶಕ್ತಿಯಿಂದ ಕೂಡಿದ್ದೇ? ಅದು ನಮ್ಮ ಬಡ ಜನರಿಗೆ ಊಟ, ವಸತಿ, ವಿದ್ಯೆ ಒದಗಿಸುವ ಮಾಂತ್ರಿಕ ಶಕ್ತಿ ಹೊಂದಿದೆಯೇ? ಅದನ್ನು ಹಿಡಿದ ದಲಿತ ಬ್ರಾಹ್ಮಣನ ಯೋಗ್ಯತೆಗೆ ಬಂದು ಬಿಡುತ್ತಾನೆಯೇ? ತ್ರಿಶೂಲ ಹೊಂದಿದವರು ಜಾತಿ ಧರ್ಮಗಳನ್ನು ತ್ಯಜಿಸಿ ಎಲ್ಲರೂ ಸಮಾನರಾಗುತ್ತಾರೆಯೇ? ಆ ಮನೆಯಲ್ಲಿ ರೋಗ ರುಜಿನಗಳು ಕಾಣಿಸಿಕೊಳ್ಳುವುದಿಲ್ಲವೇ? ಮಗ ತಂದೆ-ತಾಯಿಯರನ್ನು, ಗುರು ಹಿರಿಯರನ್ನು ಗೌರವ ಭಾವದಿಂದ ಕಾಣುತ್ತಾನೆಯೇ?

ತೊಗಾಡಿಯಾ ಅವರೇ ಈ ದೇಶ ಜಗತ್ತಿನಲ್ಲಿ ತನ್ನ ಜಾತ್ಯಾತೀತತೆ ಮತ್ತು ಸಮಾನತೆಯಿಂದ ಗಮನಸೆಳೆದಿದೆ. ಇಂದು ಭಯೋತ್ಪಾದಕತೆ, ಪ್ರತ್ಯೇಕತಾವಾದ ಹಾಗೂ ಮತೀಯವಾದಗಳು ಜಗತ್ತನ್ನು ತಲ್ಲಣಗೊಳಿಸುತ್ತಿವೆ. ಇವು ಧಾರ್ಮಿಕ ಸಂಘಟನೆಗಳ ಹೆಸರಲ್ಲಿ ನಡೆಯುತ್ತಿವೆ.

ಇತ್ತೀಚಿನ ದಿನಗಳಲ್ಲಿ ಅಂತರ್ರಾಷ್ಟ್ರೀಯ ವಿಶ್ವ ಹಿಂದು ಪರಿಷತ್ ಪ್ರಧಾನ ಕಾರ್ಯದರ್ಶಿಯಾಗಿ ನೀವೂ ಸಹ ಪ್ರಚೋದನಕಾರಿ ಭಾಷಣ ಮಾಡಿ ಸಮಾಜದಲ್ಲಿ ವಿಷ ಬೀಜ ಬಿತ್ತುತ್ತಿದ್ದೀರಿ ಎಂದು ವಿಷಾದದಿಂದ ಹೇಳಬೇಕಾಗಿದೆ.

ತೊಗಾಡಿಯಾ, ನೀವು ಈ ಜಿಲ್ಲೆಯ ಹಿಂದು ಸಮಾಜಕ್ಕೆ ಶಾಲೆಗಳನ್ನು, ವಿವಿಧ ವೃತ್ತಿಪರ ಕಾಲೇಜುಗಳನ್ನು ನೀಡಿದ್ದೀರಾ? ನೀವು ಯಾಕೆ ಈ ತ್ರಿಶೂಲದ ಬದಲು ಇಂಥ ಜನೋಪಯೋಗಿ ಸಂಸ್ಥೆ ಪ್ರಾರಂಭಿಸಬಾರದು? ಓರ್ವ ಅಮಾಯಕ ಹಿಂದುವಿಗೆ ತ್ರಿಶೂಲದಿಂದ ಏನು ಪ್ರಯೋಜನ? ನಿಮ್ಮಲ್ಲಿ ಹಿಂದುಳಿದ ಹಿಂದುಗಳ ಚೈತನ್ಯಕ್ಕೆ ಏನಾದರೂ ಯೋಜನೆ ಇದೆಯೇ? ಬಡ ಮಕ್ಕಳ ಶಿಕ್ಷಣಕ್ಕೆ ಶಿಷ್ಯವೇತನವಿದೆಯೇ? ಅವರಿಗೆ ಕುಡಿಯಲು ನೀರಿದೆಯೇ? ಪೌಷ್ಠಿಕ ಆಹಾರ ಒದಗಿಸುತ್ತೀರಾ?

ದಯವಿಟ್ಟು ನೀವು ಭಟ್ಕಳಕ್ಕೆ ಆಗಮಿಸುವ ಮುನ್ನ ನನ್ನ ಈ ಪ್ರಶ್ನೆಗೆ ಉತ್ತರಿಸಬೇಕು ಎಂದಿದ್ದಾರೆ. ನೀವು ಹಿಂದುಗಳಿಗಾಗಿ ಕೈಗೊಂಡ ವಿದಾಯಕ ಕಾರ್ಯಕ್ರಮಗಳನ್ನು ಜನತೆಗೆ ತಿಳಿಸಿ ಹೊರತು ಹಿಂದು ಹೆಸರಲ್ಲಿ ಹಿಂದುಳಿದವರ, ಅಮಾಯಕರನ್ನು ಪ್ರಚೋದಿಸಿ ಬಿಜೆಪಿಗೆ ವೋಟ್‌ಬ್ಯಾಂಕ್ ಮಾಡಿಕೊಳ್ಳಬೇಡಿ.

ನೆನಪಿಡಿ, ಸಮಾಜದ ನಡುವಿನ ಸಾಮರಸ್ಯ ಕಲಕಿದರೆ ಮತ್ತೆ ಕಟ್ಟುವದು ಕಷ್ಟ. ನಮ್ಮ ಜನರಲ್ಲಿ ಆರೋಗ್ಯಕರ ವಿಚಾರಗಳಿವೆ, ಆಚರಣೆಯಿದೆ. ಅದನ್ನು ಹಾಳುಮಾಡಬೇಡಿ. ನಮ್ಮದು ಆದರ್ಶ ಕನಸಿನ ಭಾರತ ಹೊರತು ವಿಶ್ವ ಹಿಂದು ಪರಿಷತ್ ಪ್ರಾಯೋಜಿತ ಬಿಜೆಪಿ ಭಾರತವಲ್ಲ ಎಂದು ಎಚ್ಚರಿಸಿದ್ದಾರೆ.

- ಕರಾವಳಿ ಮುಂಜಾವು, 29.04.2003


ಕಾಮ್ರೇಡ್ ರುಕ್ಮಯ ಭಂಡಾರಿ - ಅಗಲಿದ ಕಮ್ಯುನಿಸ್ಟ್ ಚೇತನ

ಇತ್ತೀಚೆಗೆ ಬೆಳ್ತಂಗಡಿಯಲ್ಲಿ ನಿಧನ ಹೊಂದಿದ, ಕಾಂ. ರುಕ್ಮಯ ಭಂಡಾರಿ ಆ ಪ್ರದೇಶದಲ್ಲಿ ರೈತ ಚಳುವಳಿ ಹಾಗೂ ಸಿಪಿಐ(ಎಂ) ನ ಬೆಳವಣಿಗೆಗೆ ವಿಶಿಷ್ಟ ಕೊಡುಗೆ ನೀಡಿದವರು. ದಾಳಿ ದಬ್ಬಾಳಿಕೆ ಎದುರಿಸಿ ನಿಂತವರು. ಕೊನೆಗೆ ತನಗಿದ್ದ ಆಸ್ತಿಯನ್ನು ವಿಭಾಗಿಸಿ ಅರ್ಧ ಭಾಗ ಪಕ್ಷಕ್ಕೆ ನೀಡಿದವರು. ಇಂತಹ ಸಂಗಾತಿಯ ಬದುಕು-ಹೋರಾಟ ಸೂಕ್ಷ್ಮವಾಗಿ ಪರಿಚಯಿಸುವ ಬರಹವಿಲ್ಲಿ

ಬೆಳ್ತಂಗಡಿಯ ಎಡ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದು ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಗೂ ಕಾರಣಕರ್ತ ರಾದವರಲ್ಲೊಬ್ಬರಾದ ರುಕ್ಮಯ ಭಂಡಾರಿಯವರು ಇತ್ತೀಚೆಗೆ ನಿಧನರಾದರು. ಇವರು ಬೆಳ್ತಂಗಡಿ ತಾಲೂಕು ಮಚ್ಚಿನ ಗ್ರಾಮದಲ್ಲಿ ಜನಿಸಿ ಬೆಳ್ತಂಗಡಿಯಲ್ಲಿ ಬದುಕಿದರು. ಕ್ಷೌರಿಕ ವೃತ್ತಿ ಇವರದ್ದಾದರೂ ಗೇಣಿಗೆ ಭೂಮಿ ಪಡೆದು ವ್ಯವಸಾಯವನ್ನು ಮಾಡುತ್ತಿದ್ದರು.

ಕಷ್ಟದ ದಿನಗಳು, ಕಿತ್ತು ತಿನ್ನುವ ಬಡತನ ಹದಗೆಟ್ಟಿರುವ ಆರ್ಥಿಕ ಪರಿಸ್ಥಿತಿಯಲ್ಲಿ ಹುಟ್ಟಿದ ಊರನ್ನೂ ಬಿಡಬೇಕಾಯ್ತು. ವಿದ್ಯಾಭ್ಯಾಸ 1ನೇ ತರಗತಿಗೆ ಮುಕ್ತಾಯ. 1947 ರಲ್ಲಿ ಬೆಳ್ತಂಗಡಿಗೆ ಬಂದು ಧೂಮ ಭಂಡಾರಿಯವರ ಸೆಲೂನಿನಲ್ಲಿ ದುಡಿಯಲಾರಂಭಿಸಿದರು. ಇವರ ತಂದೆ ವೆಂಕಪ್ಪ ಭಂಡಾರಿ, ತಾಯಿ ಅಪ್ಪು ಹೆಂಗ್ಸು ಇವರ ಹೆಂಡತಿ ಕಮಲ ನಾಲ್ಕು ಹೆಣ್ಣು, 1 ಗಂಡು ಒಟ್ಟು ಐದು ಮಕ್ಕಳು.

ತಮ್ಮ ಕಸುಬನ್ನು ಮಾಡುವುದರೊಂದಿಗೆ ತನ್ನ ಸುತ್ತ ಮುತ್ತ ನಡೆಯುತ್ತಿರುವ ಶೋಷಣೆ, ದಬ್ಬಾಳಿಕೆ, ಗೇಣಿದಾರರ ಸ್ಥಿತಿ ನೋಡಿ ರಾಜಕೀಯದತ್ತ ಗಮನ



ನೀಡಿದರು. ಆಗ ಬೆಳ್ತಂಗಡಿಯಲ್ಲಿ ರೈತ ಸಂಘ ಬೆಳೆದು ಬರುತ್ತಿದ್ದ ಕಾಲ ಅವರ ಜೊತೆ ಸೇರಿ ಅವಿಭಜಿತ ಕಮ್ಯುನಿಸ್ಟ್ ಪಾರ್ಟಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ರೈತ ಚಳುವಳಿಯಲ್ಲಿ ರಾಮನಾಯ್ಕರ ಜೊತೆ ಹೋರಾಡಿದ ಇವರು ಕಾಂ.ಕೆ.ವಿ.ರಾವ್ ಉಜಿರೆ (ಎಳಚಿತ್ತಾಯರು) ಜೊತೆ ರೈತರ ಚಳುವಳಿಗೆ ಸೇರಿಕೊಂಡರು. ಕಮ್ಯುನಿಸ್ಟ್ ಪಾರ್ಟಿ ವಿಭಜನೆಯಾದಾಗ ಸಿ.ಪಿ.ಐ.(ಎಂ)ನ ಜೊತೆ ಗುರುತಿಸಿಕೊಂಡರು.

1993 ರಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಬೆಳ್ತಂಗಡಿ ತಾಲ್ಲೂಕು ಸಮಿತಿಯ ಉಪಾಧ್ಯಕ್ಷರಾದ ಇವರು 1997 ರಲ್ಲಿ ಅಧ್ಯಕ್ಷರಾಗಿ ತನ್ನ ಜೀವ ಇರುವವರೆಗೂ ಮುಂದುವರೆದು ರೈತ ಕಾರ್ಮಿಕರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಸಿ.ಪಿ.ಐ.(ಎಂ) ನ ಲ್ಯಾಲ ಶಾಖೆಯ ಸಕ್ರಿಯ ಸದಸ್ಯರಾದ ಇವರು ರೈತ ಚಳುವಳಿ ಕಡೆಗೆ ಗಮನ ನೀಡುತ್ತಿದ್ದರು. ಸಭೆ ಮೀಟಿಂಗ್‌ಗಳಿದ್ದರೆ ಮೊದಲು ಬಂದು ಸೇರುವುದು ಕಾಂ: ಬಂಡಾರಿಯವರೇ. ದಿನಾ ಪಾರ್ಟಿ ಕಛೇರಿಗೆ ಬಂದು ಚರ್ಚಿಸದೇ ಇದ್ದಲ್ಲಿ ಅವರಿಗೆ ನಿದ್ದೆ ಬರುತ್ತಿರಲಿಲ್ಲ. ಕೊನೆ ಉಸಿರಿನತನಕ ತಾನು ನಂಬಿದ ಪಾರ್ಟಿಯ ಕೃತ್ಯಗಳಿಗಾಗಿ, ರೈತರಿಗಾಗಿ, ಬೀಡಿ ಕಾರ್ಮಿಕರಿಗಾಗಿ ಹೋರಾಡಿದರು. ಮಾತ್ರವಲ್ಲ ತನಗಿರುವ 0.50 ಎಕ್ರೆ ಜಾಗದಲ್ಲಿ ತನ್ನ ಮಗನಿಗೂ 8 ಸೆಂಟ್ಸ್, ಪಕ್ಷಕ್ಕೂ 8 ಸೆಂಟ್ಸ್ ಸ್ಥಳ ನೀಡಿ ಪಾರ್ಟಿ ಬಗ್ಗೆ, ರೈತ ಕಾರ್ಮಿಕರ ಬಗ್ಗೆ ಅವರಿಗಿರುವ ಕಳಕಳಿ, ನಿಸ್ವಾರ್ಥ ಗುಣದಿಂದ ತಾಲೂಕಿಗೆ ಮಾದರಿಯಾದರು.

1950 ರ ದಶಕದಲ್ಲಿ ಕಮ್ಯುನಿಸ್ಟ್ ಪಕ್ಷದ ಪರ್ವ ಕಾಲ ಕೃಷ್ಣ ಶೆಟ್ಟಿ, ಎಂ.ಎಚ್.ಕೃಷ್ಣಪ್ಪ, ಬಿ.ವಿ.ಕಕ್ಕಿಲ್ಲಾಯ, ಕೆ.ವಿ.ರಾವ್ ಮೊದಲಾದ ನಾಯಕರ ಮಾರ್ಗದರ್ಶನ ಪಡೆದ ಇವರು ದಿವಂಗತ ದೂಮ ಭಂಡಾರಿ, ದಿ. ರಾಮನ್ನಾಕ, ವಾಸುಮೂಲ್ಯ ತಿಮ್ಮಯ್ಯ ಶೆಟ್ಟಿ ಶವಣಾಲು ಮೊದಲಾದವರ ಜೊತೆ ರೈತ ಸಂಘ ಬೆಳೆಸಲು ಕಾರಣಕರ್ತರಾದರು.

1951-52 ರ ಸಮಯದಲ್ಲಿ ಬಿ.ವಿ.ಕಕ್ಕಿಲ್ಲಾಯರ ನೇತೃತ್ವದಲ್ಲಿ ರುಕ್ಮಯ ಭಂಡಾರಿಯವರು ಗೋವಾ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

ರುಕ್ಮಯ ಭಂಡಾರಿಯವರು ತನ್ನದೇ ಅ... ವ್ಯಕ್ತಿತ್ವ ಹೊಂದಿದವರು. ಅನ್ಯಾಯದ ವಿರು... ಹೋರಾಡಲು ಎಂದೂ ಹಿಂಜರಿಯುತ್ತಿರಲಿ... ಹೆದರುತ್ತಿರಲಿಲ್ಲ. ಒಮ್ಮೆ ನಿರ್ಧಾರವಾದರೆ ಅದು... ಗಟ್ಟಿ. ಹಲವು ಸಂದರ್ಭಗಳಲ್ಲಿ ಶ್ರೀಮಂ... ಭೂಮಾಲಿಕರ ವಿರುದ್ಧ ನ್ಯಾಯಾಲಯದ... ಹೋರಾಡಿ ಜಯಶಾಲಿಗಳಾಗಿದ್ದಾರೆ. ಅವ... ಕೊನೆಗೆ ವಾಸ್ತವ್ಯವಿರುವ ಭೂಮಿ ಧರ್ಮಸ... ದವರೊಡನೆ ಹೋರಾಡಿ ನ್ಯಾಯಾಲಯದ... ಜಯಗಳಿಸಿ ಉಳಿದದ್ದಾಗಿದೆ.

ಉಳಿದಂತೆ ಸಮಾಜಸೇವೆಗಳ ಕೆಲಸದ... ಅವರು ಹಿಂದೆ ಬಿದ್ದಿಲ್ಲ. ಶ್ರಮದಾನ ಪಂಚಾಯ್ತಿ... ಉದಾರ ದೇಣಿಗೆ ಎಲ್ಲಾ ನೀಡುತ್ತಿದ್ದು ಇವ... ಚುನಾವಣೆಯಲ್ಲಿ ಸ್ಪರ್ಧಿಸಲು ಇಷ್ಟಪಡುತ್ತಿರಲಿ...

ಇವರ ಜೀವನದ ಗುರಿ, ಧ್ಯೇಯಗಳು ಕಾಮಿ... ವರ್ಗಕ್ಕೆ ಮಾದರಿ ಆಗಲಿ ಅವರು ನೀಡಿದ ಭೂ... ಕಾರ್ಮಿಕವರ್ಗದ ಕೇಂದ್ರವಾಗಿ ಬೆಳೆದು ಬರ... ಬೆಳ್ತಂಗಡಿಯಲ್ಲಿ ಕೆಂಪು ಬಾವುಟ ಕಾರ್ಮಿಕವರ್ಗ... ಕೇಂದ್ರವಾಗಿ ಬೆಳೆದುಬರಲಿ, ಬೆಳ್ತಂಗಡಿಯಲ್ಲಿ ಕೆ... ಬಾವುಟ ನಿತ್ಯ ಹಾರಾಡಲು ಕಾಂ. ರುಕ್ಮ... ಭಂಡಾರಿ ಕಾಂಪೌಂಡು ನೆಲೆ ಆಗಲಿದೆ ಎ... ವಿಶ್ವಾಸ ಇಲ್ಲಿಯ ಸಿಪಿಐ(ಎಂ) ಹಾಗೂ ಇ... ಜನಸಂಘಟನೆಗಳ ಕಾರ್ಯಕರ್ತರಲ್ಲಿದೆ.

ವರದಿ: ಶೇಖರ, ಲಾ...

ವ್ಯಾಟ್ ಎಂದರೇನು ?...

ಪುಟ 3 ರಿಂದ

ಕಷ್ಟವಾದದ್ದಲ್ಲ. ಅದಕ್ಕಾಗಿ ಅನೇಕ ಕಾರಕೂನ... ಇಟ್ಟುಕೊಂಡಿರುತ್ತಾರೆ. ಆದರೆ ತೆ... ತಪ್ಪಿಸುವುದಕ್ಕಾಗುವುದಿಲ್ಲ. ಕೋಟ್ಯಾಂತರ ... ತೆರಿಗೆ ಸಲ್ಲಿಸುವ ಪರಿಸ್ಥಿತಿ ಬರುತ್ತದೆ ಎಂಬ... ಕಷ್ಟ. ಆದ್ದರಿಂದ ದೊಡ್ಡ ವಹಿವಾಟುದಾರರು ... ವ್ಯಾಪಾರಿಗಳನ್ನು ಸೇರಿಸಿಕೊಂಡು ಮು... ನಡೆಸಿದರು. ಈ ಮುಷ್ಕರದ ವಿಶೇಷವೆ... ವ್ಯಾಟ್ ತೆರಿಗೆಯನ್ನು ಜಾರಿಗೆ ತರಬೇಕು. ... ತೀರ್ಮಾನ ಮಾಡಿದ್ದು ಬಿ.ಜೆ.ಪಿ ಕೂ... ಸರ್ಕಾರ. ಅದರ ವಿರುದ್ಧ ವರ್ತಕರನ್ನು ಎತ್ತಿ... ಹೋರಾಟ ಮಾಡುತ್ತಿರುವುದೂ ಬಿಜೆಪಿ ಪಕ್ಷ... ಈ ಮುಷ್ಕರಕ್ಕೆ ಸರ್ಕಾರಗಳ ಪ್ರತಿಕ್ರಿಯೆ ವಿ...

ಈಗ ವ್ಯಾಟ್ ಜಾರಿಗೆ ಸಂಬಂಧಿಸಿ ಪ... ಬಂಗಾಳದ ಹಣಕಾಸು ಮಂತ್ರಿ ಅಸೀಮದ... ಗುಪ್ತರವರ ನೇತೃತ್ವದಲ್ಲಿರುವ ಹಣಕಾಸು ಸಚ... ಸಮಿತಿಯು ಸಣ್ಣ ವ್ಯಾಪಾರಿಗಳಿಗೆ ವಿನಾಯತಿ... ಘೋಷಿಸಿದೆ. 5 ಲಕ್ಷದವರೆಗೆ ವಹಿವಾ... ಇರುವವರಿಗೆ ಪೂರ್ಣ ವಿನಾಯತಿ... ಲಕ್ಷದವರೆಗೆ ವಹಿವಾಟು ಇಡುವವರು... ರಷ್ಟು ಮಾತ್ರ ತೆರಿಗೆ ನೀಡುವುದು... ವಿನಾಯತಿಗಳ ಉದ್ದೇಶ.

ಸೆನ್‌ವ್ಯಾಟ್ ಎಂದರೇನು? ಇತ್ತೀ... ಪವರ್‌ಲೂಂ ಮಾಲಿಕರು ನಡೆಸಿದ ಮುಷ... ಕಾರಣವೇನು?

ಸೆನ್‌ವ್ಯಾಟ್ ಎಂದರೆ ಕೇಂದ್ರ ಸ... ಹಾಕುವ ವ್ಯಾಟ್ ತೆರಿಗೆ (Central ... cenvat) ಎಂದರ್ಥ. ಇತ್ತೀಚಿಗೆ ಕೈಮಗ್ಗ, ಮಿ... ಮಗ್ಗಗಳಿಂದ ಹಿಡಿದು ಉ... ರಫ್ತುದಾರರವರೆಗೂ ಶೇ.10 ರಷ್ಟು ವ... ತೆರಿಗೆಯನ್ನು ಕೇಂದ್ರ ಬಜೆಟ್‌ನಲ್ಲಿ ಹೇರಲಾ... ಎಂಬ ಕಾರಣಕ್ಕೂ ಹಾಗೂ ಅದಕ್ಕಾಗಿ ವ... ಲೆಕ್ಕಪತ್ರ ಇಡಬೇಕಾಗುತ್ತದೆ ಎಂಬ ಕಾರ... ಮುಷ್ಕರ ನಡೆಯಿತು. ಶೇ.10ರಷ್ಟು ತೆರಿಗೆ... ಹೊರಿಸಿದ್ದು ಅನ್ಯಾಯಕರವಾದದ್ದು. ... ಹಿಂತೆಗೆದುಕೊಳ್ಳಬೇಕು. ಅದೇ ಸಂದರ್ಭದ... ಮಾಲೀಕರು ಲೆಕ್ಕಪತ್ರ ಇಡುವ ವ್ಯವಸ... ಕಷ್ಟಕರ. ಈಗ ಕೇಂದ್ರ ಸರ್ಕಾರ ಸಣ್ಣಮಾ... ವಿನಾಯತಿ ಕೊಡುವ ಮಾತನ್ನಾಡಿದೆ.

ಯುದ್ಧವಿರೋಧಿ ವಿಚಾರ ಸಂಕಿರಣ

ಇರಾಕ್ ವಿಷಯವಾಗಿ ವಿಚಾರ ಸಂಕಿರಣವೊಂದು ಏಪ್ರಿಲ್ 21 ರಂದು ತುಮಕೂರಿನಲ್ಲಿ ನಡೆಯಿತು. ಜನಾಂದೋಲನಗಳ ರಾಷ್ಟ್ರೀಯ ಸಮನ್ವಯ ಸಮಿತಿ ಕರ್ನಾಟಕ ತುಮಕೂರು ಜಿಲ್ಲಾ ಘಟಕ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿತು.

ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಮಾತನಾಡಿದ್ದ ಲೇಖಕರಾದ ರಂಜಾನ್ ದರ್ಗಾ ಅಮೇರಿಕಾ ಇರಾಕ್ ಮೇಲಿನ ದಾಳಿಯಿಂದಾಗಿ ನಾಶವಾಗಿರುವ ಇರಾಕ್‌ನ ಪುನರ್ ನಿರ್ಮಾಣಕ್ಕೆ ವಿಶ್ವಸಂಸ್ಥೆ ಯೋಜನೆಯೊಂದನ್ನು ಮಾಡಿದೆ. ಅಂದರೆ ಅಮೇರಿಕಾ ಮಾಡಿರುವಂತಹ ಈ ಯುದ್ಧದ ಪ್ರತಿ ಖರ್ಚನ್ನು ನಾಗರೀಕರಾದ ನಾವು ನೀಡುತ್ತಿದ್ದೇವೆ ಎಂದರು. ಬಡ ರಾಷ್ಟ್ರಗಳ ಸಂಪನ್ಮೂಲವನ್ನು ಸುಲಿಗೆ ಮಾಡುವ ದುರುದ್ದೇಶದಿಂದ ಬುಷ್ ಅತ್ಯಂತ ವ್ಯವಹಾರಿಕ ಯುದ್ಧ ಮಾಡಿದ್ದಾನೆ. ಇದೇ ರೀತಿಯಲ್ಲಿ ಅಮೇರಿಕಾದ ನೀತಿಯನ್ನು ನಾವು ವಿರೋಧಿಸದಿದ್ದರೆ, ಮುಂದಿನ ನಮ್ಮ ಭಾರತವನ್ನು ಆಕ್ರಮಿಸಿಕೊಳ್ಳುವ ಉದ್ದೇಶವನ್ನು ಅಮೇರಿಕಾ ಹೊಂದಿದೆ ಎಂಬುದನ್ನು ನಾವು ಅರಿಯಬೇಕಾಗಿದೆ ಎಂದ ದರ್ಗಾರವರು ಯುದ್ಧದ ವಿಷಯದಲ್ಲಿ ಜನರಿಗೆ ಸತ್ಯ ತಿಳಿಸುವಲ್ಲಿ ಮಾಧ್ಯಮಗಳು ವಿಫಲವಾಗಿವೆ ಎಂದು ತೀವ್ರವಾಗಿ ಖಂಡಿಸಿದರು.

ತುಮಕೂರು ಸ್ನಾತಕೋತ್ತರ ಕೇಂದ್ರದ ಇತಿಹಾಸದ ಪ್ರಾಧ್ಯಾಪಕರಾದ ಡಾ.ವಸುರವರು ಮಾತನಾಡಿ ನಮ್ಮ ದೇಶದಲ್ಲಿ ನಡೆದಂತಹ ಗೋದ್ರಾ ಹತ್ಯಾಕಾಂಡ ಮತ್ತು ನಂತರದ ಘಟನೆಗಳನ್ನು ಗಮನಿಸಿದರೆ ಅಮೇರಿಕಾದ ಬಗ್ಗೆ ಮಾತನಾಡುವ ಯೋಗ್ಯತೆ ನಮಗಿಲ್ಲ ಎಂದೆನಿಸುತ್ತದೆ. ಈ ಜಗತ್ತಿನ ಶಕ್ತಿಯ ಮೇಲೆ ಅಮೇರಿಕಾ ನಿಂತಿದೆಯೇ ಹೊರತು ಅಮೇರಿಕಾದ ಮೇಲೆ ಈ ಜಗತ್ತು ನಿಂತಿಲ್ಲ ಎಂದು ಹೇಳಿದರು.

ಚಿಂತಕರಾದ ಸಿ.ಯತಿರಾಜು ಮಾತನಾಡಿ ಶಸ್ತ್ರಾಸ್ತ್ರಗಳ ಉತ್ಪಾದನೆಯೇ ಅಮೇರಿಕಾದ ಮುಖ್ಯ ಉದ್ದೇಶವಾಗಿದೆ. ಈ ಜಗತ್ತಿನ ಅತಿ ದೊಡ್ಡ ಶತ್ರು ಎಂದರೆ ಜಾರ್ಜ್ ಬುಷ್. ಅಮೇರಿಕಾ ಯುದ್ಧದಲ್ಲಿ ಗೆಲುವನ್ನು ಸಾಧಿಸಿದರೂ ಅದರಲ್ಲಿಯೇ ಅಮೇರಿಕಾದ ಹತ್ತಿರದ ಚಿಕ್ಕ ರಾಷ್ಟ್ರಗಳಾದ ಕ್ಯೂಬಾ ಮತ್ತು ವಿಯೆಟ್ನಾಂ ಬುದ್ಧಿ ಕಲಿಸಿವೆ. ಈ ಹಿನ್ನೆಲೆಯಲ್ಲಿ ನಾವು ಕಾಣುವುದಾಗಲಿ, ಅಮೇರಿಕಾದ ವಿನಾಶಕಾರಿ ಹೆಜ್ಜೆಗಳು ಪ್ರಾರಂಭವಾಗಿವೆ ಎಂದು ಹೇಳಿದರು.

ಹತ್ತು ವರ್ಷಗಳ ಹಿಂದೆ ತೀವ್ರಗೊಂಡ ಜಾಗತೀಕರಣ ಮುಂದಿನ ಹಂತದಲ್ಲಿ ಭಯೋತ್ಪಾದನೆಯಾಗಿದೆ. ಅದರ ಒಂದು ಭಾಗ ಕೋಮುವಾದವೂ ಆಗಿದೆ. ಇದರ ನಂತರದ ಹೆಜ್ಜೆಯೇ ಯುದ್ಧವಾಗಿದೆ ಎಂದು ಪ್ರೊ.ಜಿ.ಹನುಮಂತರವರು ವಿಷಾಧಿಸಿದರು.

ಅಖಿಲಭಾರತ ಶಾಂತಿ ಮತ್ತು ಸೌಹಾರ್ದ ಸಂಘಟನೆಯ ಕಾರ್ಯದರ್ಶಿ ಎಸ್.ಸುರೇಂದ್ರ, ಹಿರಿಯ ಸ್ವಾತಂತ್ರ್ಯ ಹೋರಾಟದ ಸರ್ವೋದಯ ಕಾರ್ಯಕರ್ತ ಸತ್ಯವ್ರತರವರು ಎನ್.ಎ.ಪಿ.ಎಂ ನ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಕಾರ್ಯದರ್ಶಿ ಗಾಯತ್ರಿ, ಜಿಲ್ಲಾ ಸಂಚಾಲಕ ಕೋಟೆ ನಾಗ ಭೂಷಣ್ ಮತ್ತು ಸಾಮೂಹಿಕ ಸಂಘಟನೆಗಳ ಪದಾಧಿಕಾರಿಗಳು, ಚಿಂತಕರು, ಸಾಹಿತಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

'ಪತ್ರಿಕೋದ್ಯಮ - ಕರ್ನಾಟಕ' ವಿಚಾರ ಸಂಕಿರಣ

ಪತ್ರಿಕೋದ್ಯಮ - ಕರ್ನಾಟಕ ಎಂಬ ವಿಷಯವಾಗಿ ವಿಚಾರಸಂಕಿರಣ ಮತ್ತು ಪತ್ರಕರ್ತರ ಸಮಾವೇಶ ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿಯಲ್ಲಿ ನಡೆಯಿತು. ಏಪ್ರಿಲ್ 13 ಮತ್ತು 14 ರಂದು ಇಲ್ಲಿನ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘ ಈ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಹೊಸತು ಮಾಸಿಕದ ಸಂಪಾದಕರಾದ ಡಾ. ಜಿ.ರಾಮಕೃಷ್ಣ ಉದ್ಘಾಟಿಸಿದ ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತರಾದ ಮಹಾಬಲೇಶ್ವರ ಕಾಟ್ರಹಳ್ಳಿ, 'ನಗರವಾಣಿ' ಸಂಪಾದಕ ಸಿ.ಕೇಶವಮೂರ್ತಿ ಭಾಗವಹಿಸಿದ್ದರು. ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಗುಡಿಹಳ್ಳಿ ನಾಗರಾಜ್ ಅಧ್ಯಕ್ಷತೆ ವಹಿಸಿದ್ದರು.

ಬಹು ಮಾಧ್ಯಮ ಧಾರೆಯಲ್ಲಿ ಪತ್ರಿಕೆಗಳ ಅನನ್ಯತೆ, ಸಮಸ್ಯೆ ಮತ್ತು ಹೊಣೆಗಾರಿಕೆ ನಡುವೆ ಗ್ರಾಮೀಣ ವರದಿಗಾರಿಕೆ, ಕೋಮುವಾದ ಮತ್ತು ಮಾಧ್ಯಮ, ಮಾಧ್ಯಮದೊಂದಿಗೆ ಆದರ್ಶಗಳ ಮುಖಾಮುಖಿ ಮತ್ತು ವಾರಪತ್ರಿಕೆಗಳ ಬಹುಮುಖಿ ಆಯಾಮ ಎಂಬ ವಿಷಯಗಳ ಬಗ್ಗೆ ಗೋಷ್ಠಿ ಏರ್ಪಡಿಸಲಾಗಿತ್ತು. ಈ ವಿಷಯಗಳನ್ನು ಗಂಗಾಧರ ಮೊದಲಿಯಾರ್, ರಾಮ ಮನುಗೋಳಿ ಮತ್ತು ಪರುಶುರಾಮ ಕಲಾಲ ಮಂಡಿಸಿದರು. ಹಲವು ಪತ್ರಕರ್ತರು ಸಂವಾದದಲ್ಲಿ ಪಾಲ್ಗೊಂಡಿದ್ದರು.

'ಕೋಮುವಾದ ಮತ್ತು ಮಾಧ್ಯಮ' ವಿಷಯದಲ್ಲಿ ಐಕ್ಯರಂಗ ಸಂಪಾದಕರಾದ ಎಸ್.ವೈ.ಗುರುಶಾಂತ್ ಮಾತನಾಡಿದರು. ಸಮಾರೋಪ ಸಮಾರಂಭದಲ್ಲಿ ಬಂಡಾಯ ಸಾಹಿತಿ ಬಸವರಾಜ ಸೂಳಿಬಾವಿ, ಪೀರ್ ಭಾಷಾ ಇತರರು ಭಾಗವಹಿಸಿದ್ದರು.


ಭಾರತ - ಪಾಕ್ ಮಾತುಕತೆ : ಏಕೀ ಬೆಳವಣಿಗೆ

ವಾಜಪೇಯಿಯವರು ಜಮ್ಮು - ಕಾಶ್ಮೀರಕ್ಕೆ ಭೇಟಿ ನೀಡಿದಾಗ ಪಾಕ್‌ನೊಂದಿಗೆ ಸ್ನೇಹ ಹಸ್ತ ಚಾಚಿದ್ದರು.ಇದೀಗ ಮಾತುಕತೆಗೆ ಉಭಯತ್ರರಲ್ಲಿ ಚಾಲನೆ ಬಂದಿದೆ. ಇದು ಸ್ವಾಗತಾರ್ಹ. ಹಾಗೆಯೇ ಇಂತಹ ದಿಢೀರ್ ಬೆಳವಣಿಗೆಗೆ ಕಾರಣಗಳೇನು? ದೇಶದ - ಕಾಶ್ಮೀರದ ಜನತೆಯ ಒತ್ತಾಸೆಗೋ ಅಥವಾ ಅಮೆರಿಕಾದ ಒತ್ತಡಗಳಿಗೋ?

ಇತ್ತಿಚೆಗೆ ಬಿ.ಜೆ.ಪಿ ವಕ್ತಾರರೊಬ್ಬರು ಸಾರ್ವಜನಿಕವಾಗಿ ಪ್ರಧಾನಮಂತ್ರಿ ವಾಜಪೇಯಿಯವರು ಪಾಕಿಸ್ತಾನಕ್ಕೆ ಪ್ರಯಾಣಿಸುವುದಿಲ್ಲ ಎಂದು ಹೇಳಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿದ ಪಾಕಿಸ್ತಾನದ ಪ್ರಧಾನಮಂತ್ರಿ ಮೀರ್‌ಜಾಫರ್ ಉಲ್ಲಾಖಾನ್ ಜಮಾಲಿ ಪ್ರತಿಕ್ರಿಯಿಸುತ್ತಾ "ಬಿ.ಜೆ.ಪಿ. ವಕ್ತಾರರು ಹೇಳಿರುವುದರ ಬಗ್ಗೆ ನನಗೆ ಏನು ತಿಳಿಯದು. ವಾಜಪೇಯಿಯವರೊಡನೆಯ ಮಾತುಕತೆಯು ಸರ್ಕಾರಗಳ ನಡುವಿನ ಮಾತುಕತೆ ಬಿ.ಜೆ.ಪಿ ವಕ್ತಾರರ ಹೇಳಿಕೆಯು ಭಾರತ ಮತ್ತು ಪಾಕಿಸ್ತಾನದ ನಡುವಿನ ಸಂಬಂಧವನ್ನು ಮತ್ತೆ ಸುಧಾರಿಸಲು ಯಾವ ಅಡಚಣೆಯನ್ನು ಉಂಟುಮಾಡಲಾರದು. ನಾನು ವಾಜಪೇಯಿಯವರೊಡನೆ 20 ನಿಮಿಷ ಮಾತನಾಡಿದ್ದೇನೆ. ಅಲ್ಲೆಲ್ಲೂ ವಾಜಪೇಯಿಯವರು ಪಾಕಿಸ್ತಾನಕ್ಕೆ ಭೇಟಿ ಕೊಡುವುದಿಲ್ಲ ಎಂಬುವುದರ ಸುಳಿವು ಸಿಗಲಿಲ್ಲ'.

ಪ್ರಯತ್ನದ ಹಿಂದೇನು?

ಈ ಎರಡು ಹೇಳಿಕೆಗಳ ವಿಚಾರ ಏನೇ ಇರಲಿ ಎರಡು ದೇಶಗಳ ನಡುವಿನ ಸಂಬಂಧ ಸುಧಾರಣೆಯನ್ನು ಎರಡು ದೇಶದ ಸಾಮಾನ್ಯ ಜನತೆ ಕಾತರದಿಂದ ನಿರೀಕ್ಷಿಸುತ್ತಿದ್ದಾರೆ. ಇದರಿಂದ ದಕ್ಷಿಣ ಏಶಿಯಾ ಮತ್ತು ಜಗತ್ತಿನ ಶಾಂತಿ ಭದ್ರತೆಗೆ ಒಂದು ಉತ್ತಮ ಅವಕಾಶ ಸೃಷ್ಟಿಯಾಗುತ್ತದೆ. ಈದಿಕ್ಕಿನಲ್ಲಿ ನಡೆದರೆ ಜನತೆ ಹೃದಯಪೂರ್ವಕವಾಗಿ ಬೆಂಬಲಿಸುತ್ತಾರೆ. ಇದರಲ್ಲಿನ ಒಳಸಂಚೇನೆಂದರೆ ಈ ರೀತಿಯ ಹೊಸ ರಾಜತಾಂತ್ರಿಕ ಪ್ರಯತ್ನಗಳನ್ನು ಹೇಳುವಾಗ ವಾಜಪೇಯಿಯವರು ಇದರಲ್ಲಿ ಯಾವುದೇ ಶರತ್ತುಗಳನ್ನು ಸೇರಿಸದಿರುವುದು. 4 ದಿನಗಳ ಮೊದಲು ಏಪ್ರಿಲ್ 14 ರಂದು ಗ್ಯಾಂಗ್‌ಟಾಕ್‌ನಲ್ಲಿ ಮಾತನಾಡುತ್ತಾ ವಾಜಪೇಯಿಯವರು ಪಾಕಿಸ್ತಾನದ ಜೊತೆ ಯಾವುದೇ ರೀತಿಯ ಮಾತುಕತೆಗೆ ಶರತ್ತುಗಳನ್ನು ವಿಧಿಸಿದ್ದರು. ಉದಾ: ಗಡಿ ಭಯೋತ್ಪಾದನೆಯನ್ನು ನಿಲ್ಲಿಸುವುದು ಆ ಸಂದರ್ಭದಲ್ಲೇ ಏಪ್ರಿಲ್ 23 ರಂದು ಸಂಸತ್ತಿನಲ್ಲಿ ಹೇಳಿಕೆ ನೀಡುವಾಗ ವಾಜಪೇಯಿಯವರು ಮತ್ತೊಮ್ಮೆ ಶರತ್ತುಗಳನ್ನು ಇಟ್ಟಿದ್ದರು. ಇಂತಹ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳ ಪ್ರಯತ್ನದ ಬಗ್ಗೆ ಅನುಮಾನಗಳೇಳುವುದು ಸಹಜ. ಪಾಕಿಸ್ತಾನದ ಜೊತೆಗಿನ ಎಲ್ಲಾ ವಿವಾದಗಳನ್ನು ಒಮ್ಮೆಲೆ ಇತ್ಯರ್ಥಪಡಿಸಿಕೊಳ್ಳಬೇಕೆ? ಎಂದು ಕಾಶ್ಮೀರಿ ಜನರ ಹಂಬಲವನ್ನರಿತು ಈ ರೀತಿ ಮಾತನಾಡಿದರೋ? ಅಥವಾ ಅಮೇರಿಕಾದ ಒತ್ತಾಯಗಳಿಗೆ ಮಣಿದು ಪಾಕಿಸ್ತಾನದ ಜೊತೆ ಮಾತುಕತೆಗೆ ಪ್ರಯತ್ನಗಳನ್ನು ಆರಂಭಿಸಿದರೋ?



ಪರಿಸ್ಥಿತಿಗಳೇನೆ ಇರಲಿ, ಎರಡೂ ದೇಶಗಳು ಮತ್ತಲ್ಲಿಯ ಜನತೆಯ ಹಿತದೃಷ್ಟಿಯಿಂದ ಮಾತುಕತೆಗಳನ್ನು ಆರಂಭಿಸಲೇಬೇಕು. ಈ ಸಂದರ್ಭದಲ್ಲಿ ಹಲವಾರು ಅಡಚಣೆಗಳನ್ನು ಎದುರಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ಎರಡು ದೇಶಗಳು ರಾಯಬಾರಿಗಳನ್ನು ಹೊಂದಿ, ರಾಜತಾಂತ್ರಿಕ ವ್ಯವಹಾರಗಳನ್ನು ನಡೆಸುತ್ತಿಲ್ಲ. ರಸ್ತೆ, ರೈಲು ಮತ್ತು ವಿಮಾನಯಾನ ಯಾವುದೂ ಚಾಲನೆಯಲ್ಲಿಲ್ಲ. ಕ್ರೀಡಾರಂಗದಲ್ಲಿ ಸಂಬಂಧಗಳನ್ನು ಪುನರ್‌ಸ್ಥಾಪಿಸಬಹುದೆಂದು ಪಾಕಿಸ್ತಾನದ ಪ್ರಧಾನಿಗಳು ಹೇಳಿದ್ದಾರೆ. ಎರಡೂ ದೇಶಗಳ ಹಿತಗಳನ್ನು ರಕ್ಷಿಸುವ ಜವಾಬ್ದಾರಿಯಿಂದ ಗಡಿಗಳನ್ನು ದಾಟಿ ಮಾತುಕತೆಗಳನ್ನು ಆರಂಭಿಸಬೇಕು. ಆಗ್ರಾ ಶೃಂಗದ ಅನುಭವಗಳನ್ನು ಗಮನದಲ್ಲಿಟ್ಟುಕೊಂಡು ಎರಡೂ ದೇಶಗಳು ಸಾಕಷ್ಟು ತಯಾರಿ ನಡೆಸಿಕೊಳ್ಳಬೇಕು. ಎರಡೂ ದೇಶಗಳ ಬಹುಸಂಖ್ಯಾತ ಜನತೆ ಉತ್ತಮ ಪಲಿತಾಂಶಕ್ಕಾಗಿ ನಿರೀಕ್ಷಿಸುತ್ತಿದ್ದಾರೆ.

ಜಮ್ಮು ಕಾಶ್ಮೀರದ ಸಮಸ್ಯೆಗೆ ಸಂಬಂಧಿಸಿ, ಗಡಿಯಾಚೆಗಿನ ಭಯೋತ್ಪಾದನೆಯನ್ನು ನಿಗ್ರಹಿಸಲು ಪಾಕಿಸ್ತಾನದೊಡನೆ ಮಾತನಾಡುವಾಗಲೇ, ಜಮ್ಮು- ಕಾಶ್ಮೀರಿ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ರಾಜಕೀಯ ಪ್ರಕ್ರಿಯೆಯನ್ನು ಆರಂಭಿಸಬೇಕು.

'ಬ್ರಹ್ಮಚಾರಿಗಳಿಗೆ ತೊಂದರೆ ಕೊಡಬೇಡಿ - ನನ್ನ ಮನ ಮಿಡಿಯುತ್ತೆ!'

ಮಧ್ಯಪ್ರದೇಶದಲ್ಲಿ ಒಂದು ಪಟ್ಟಣ. ಅಲ್ಲಿ ಒಬ್ಬಳು ನನ್ನ ಗುಡಿಯೊಂದರಲ್ಲಿ ಬಂದು ಅತ್ಯಂತ ಭಕ್ತಿಯಿಂದ ಒಂದು ಕೇಕ್ ಅರ್ಪಿಸುತ್ತಾಳೆ. ನಾನು ಕೇಕ್ ಹಿಂದೆ ಎಂದೂ ತಿಂದಿರಲಿಲ್ಲ. ನನಗೆ ಭಕ್ತರು ಕೊಡುವ ಕೊಳೆತ ಬಾಳೆಹಣ್ಣು ತಿಂದೂ ತಿಂದೂ ಬೋರಾಗಿತ್ತು. ಕೇಕ್ ತುಂಬಾ ರುಚಿಯಾಗಿತ್ತು. ನಾನು ಸಂತೋಷದಿಂದ ಆಶೀರ್ವಾದ ಮಾಡಿದೆ. ನಿನ್ನ ಕೆಲಸ ಏನಿದ್ದರೂ ಜಯಪ್ರದವಾಗಲಿ. ನನಗೆ ಹೀಗೆ ವೆರೈಟಿ ತಿಂಡಿ ತಂದು ಕೊಡುತ್ತಿರು ಎಂದು ಹೇಳಿದೆ. ಓಕೆ ಎಂದು ಆಕೆ ಸಂತೋಷದಿಂದ ಹೋದಳು.

ಮರುದಿನ ಪೇಪರ್ ಟಿವಿ ನೋಡುತ್ತೇನೆ. ಅದೇ ಸುದ್ದಿ ಎಲ್ಲಾ ಕಡೆ. ಗದ್ದಲವೋ ಗದ್ದಲ. ವಿವಾದವೋ ವಿವಾದ. ಯಾಕಪ್ಪಾ ಅಂತ ನೋಡಿದರೆ ಕೇಕ್ನಲ್ಲಿ ಮೊಟ್ಟೆ ಇರುತ್ತಂತೆ. ಮೊಟ್ಟೆ ದೇವರಿಗೆ ಕೋಡಬಹುದಾ ? ಮೊಟ್ಟೆಯಲ್ಲಿ ಮಾಡಿದ ತಿಂಡಿ ದೇವರ ಗರ್ಭ ಗುಡಿಯೊಳಗೆ ಒಯ್ದರೆ ಮೈಲಿಗೆ ಆಗೋದಿಲ್ವಾ ? ಅಂತೆಲ್ಲಾ ವಿವಾದ. ಆಗಲೇ ಗೊತ್ತಾಗಿದ್ದು ನನ್ನ ಭಕ್ತೆ ಸಾಮಾನ್ಯಳಲ್ಲ. ಮಧ್ಯಪ್ರದೇಶದಲ್ಲಿ ವಿರೋಧ ಪಕ್ಷದ ಅಧ್ಯಕ್ಷೆ ಅಂತ. ಆಕೆ ಚುನಾವಣೆ ಪ್ರಚಾರದ ಶುಭಾರಂಭವನ್ನು ನನಗೆ ಕೇಕ್ ಕೊಟ್ಟು ಮಾಡಿದ್ದಳು. ವಿವಾದ ಎಬ್ಬಿಸಿದ್ದು ಅಲ್ಲಿನ ಆಡಳಿತ ಪಕ್ಷವಂತೆ.

ಯಾಕಪ್ಪಾ ನನ್ನನ್ನು ಇಂತಹ ವಿವಾದದ ಕಡೆಗೆ ಎಳೆದಳಲ್ಲಾ ಅಂತ ಬೇಜಾರಾಯ್ತು. ಆದರೂ ಕೇಕ್ ತಿಂದು ಆಶೀರ್ವಾದ ಮಾಡಿಯಾಗಿದೆಯಲ್ಲ, ಏನು ಮಾಡುವುದು ಅಂತ ಸುಮ್ಮನಿದ್ದೆ. ನನ್ನ ಭಕ್ತೆ ಅದೇ ದಿನ ನನ್ನ ಬಳಿ ಬಂದು ಗೋಳೋ ಎಂದು ಅತ್ತಳು. ಕೇಕ್ನಲ್ಲಿ ಖಂಡಿತ ಮೊಟ್ಟೆ ಇರಲಿಲ್ಲ, ಕೇಕ್ ಶುದ್ಧ ಶ್ರೀಖಂಡದಲ್ಲಿ ಮಾಡಿದ್ದು ಅಂತ ನನ್ನ-ಬೇರೆಲ್ಲಾ ದೇವರ ಪ್ರಮಾಣ ಮಾಡಿ ಹೇಳಿದಳು. ನಾನು ಆ ರೀತಿ ಪೇಪರ್ ಟಿವಿಗೆ ಹೇಳಿಕೆ ಕೊಡಬೇಕು. ಲೇಖನ ಬರೀಬೇಕು ಅಂತ ಗೋಗರೆದಳು. ನನಗೆ ಶ್ರೀರಾಮ ಸೀತಾಮಾತೆಯನ್ನು ಶಂಕಿಸಿ ಕಾಡಿಗೆ ಕಳಿಸಿದ್ದು ನೆನಪಾಗಿ ಅತ್ತು ಬಿಟ್ಟೆ. ಹಾಗೇ ಮಾತಾಡುತ್ತಿರುವಾಗ, ಆಕೆ ನನ್ನಂತೆ ಬ್ರಹ್ಮಚಾರಿ ಅಂತ ಗೊತ್ತಾಯಿತು. ಆಗ ನನಗೆ ಇನ್ನಷ್ಟು ದುಃಖವಾಯಿತು. ನನಗೆ ಬ್ರಹ್ಮಚಾರಿಗಳ ಕಷ್ಟ ಗೊತ್ತು.

> *ನಾವು ಮೇನಲ್ಲಿ ಹೊಸ ಸ್ವರೂಪದಲ್ಲಿ ಐಕ್ಯರಂಗ ತರಬೇಕು ಎಂಬ ತರಾತುರಿಯಲ್ಲಿ ಇದ್ದಾಗ ಆಂಜನೇಯರ ಈ ಮನಮಿಡಿಯುವ ಲೇಖನ ನಮಗೆ ತಲುಪಿದೆ. ಯಾವ ಕಾಲಂನಲ್ಲಿ ಇದನ್ನು ಪ್ರಕಟಿಸುವುದು ಎಂಬ ಸಂಧಿಗ್ಧದಲ್ಲಿ ನಾವು ಬಿದ್ದೆವು. 'ನನ್ನ ಮನ ಮಿಡಿದ ಘಟನೆ'ಎಂಬ ಕಾಲಂಗೆ ಯಾವುದೇ ಲೇಖನ ಬಾರದ್ದರಿಂದ, ಅಲ್ಲೇ ಪ್ರಕಟಿಸುವಾ ಎಂದುಕೊಂಡೆವು. ಮುಂದಿನ ಸಂಚಿಕೆಯಿಂದ ನಮ್ಮನ್ನು ಈ ಫಜೀತಿಗೆ ಒಳಮಾಡುವುದಿಲ್ಲ ಎಂಬ ಭರವಸೆಯೊಂದಿಗೆ - ಹೊಸ ಕಾಲಂಗಳ ವಿಭಾಗ*

ಕೇಕ್ನಲ್ಲಿ ಮೊಟ್ಟೆ ಇತ್ತೋ ಇಲ್ಲವೋ ಗೊತ್ತಿಲ್ಲ. ಕೇಕ್ ಚೆನ್ನಾಗಿತ್ತು ಅಂತ ಅಷ್ಟೇ ಹೇಳಬಲ್ಲೆ. ಭಕ್ತಿಯಿಂದ ಏನು ಕೊಟ್ಟರು ಪವಿತ್ರವೇ. ದೇವರಿಗೆ ಇಷ್ಟವಾದ ಮೇಲೆ ಮೈಲಿಗೆ ಪ್ರಶ್ನೆ ಇಲ್ಲ. ಅದೂ ಅಲ್ಲದೆ ನಾನು ಬ್ರಾಹ್ಮಣನೂ ಅಲ್ಲ, ಶುದ್ಧ ಶಾಖಾಹಾರಿಯೂ ಅಲ್ಲ. ಅದರ ಬಗ್ಗೆ ವಿವಾದ-ರಾಜಕೀಯ ಬೇಡ ಅಂತ ಅಷ್ಟೇ ಹೇಳಬಲ್ಲೆ. ರಾಜಕೀಯ ವಿಷಯಗಳು ಬೇಕಾದಷ್ಟಿವೆ. ಅದರ ಬಗ್ಗೆ ಚರ್ಚೆ ಮಾಡಿ. ಇನ್ನೊಂದು ವಿಷಯ ಮಾತ್ರ ಖಡಾಖಂಡಿತವಾಗಿ ಹೇಳ್ತೇನೆ. ಬ್ರಹ್ಮಚಾರಿಗಳಿಗೆ ತೊಂದರೆ ಕೊಡಬೇಡಿ. ನನ್ನ ಮನ ಮಿಡಿಯುತ್ತೆ. ಈ ನನ್ನ ಭಕ್ತೆ ಬಗ್ಗೆ ಮಾತ್ರ ಹೇಳ್ತಾ ಇಲ್ಲ. ಆಕೆನೇ ಹೇಳ್ತಾ ಇದ್ಲು, ಆಕೆಯ ಸ್ನೇಹಿತ ಯಾರೋ ಆಚಾರ್ಯ ಅಂತೆ. ಆತನೂ ಬ್ರಹ್ಮಚಾರಿ ಅಂತೆ. ಆತನಿಗೂ ಬಹಳ ತೊಂದರೆ ಕೊಡ್ತಾ ಇದ್ದಾರಂತೆ. ಅದೂ ಆತನದೇ ಪಕ್ಷದವರಂತೆ. ಅಷ್ಟೇ ಅಲ್ಲ. ಪ್ರಧಾನಿನೂ ಬ್ರಹ್ಮಚಾರಿ ಅಂತೆ. ಆತನಿಗೂ ಎಲ್ಲಾ ಪಕ್ಷದವರು (ಆತನ ಪಕ್ಷ ಸೇರಿ) ತೊಂದರೆ ಕೊಡ್ತಾ ಇದ್ದಾರಂತೆ. ನಾನು ಒಂದೇ ಪಕ್ಷದವರ ಪರ ವಹಿಸ್ತಾ ಇದ್ದೇನೆ ಅಂದುಕೋಬೇಡಿ. ಉತ್ತರ ಪ್ರದೇಶದ ಮುಖ್ಯ ಮಂತ್ರಿಯೂ ಬ್ರಹ್ಮಚಾರಿ ಅಂತೆ. ಆಕೆಗೂ ಬಹಳ ತೊಂದರೆ ಕೊಡ್ತಾ ಇದ್ದಾರಂತೆ.

ಬಹಳ ಜನ ನನ್ನ ಬಳಿ ಹೇಳಿದ್ದಾರೆ. ನಿನ್ನ ಭಕ್ತರು ಅಂತ ಹೇಳಿ ಕೊಳ್ಳುವವರು ದೇಶದ ತುಂಬಾ ರಕ್ತ ಹರಿಸಿದ್ದಾರೆ ಅಂತ. ಅದು ನನಗೆ ಗೊತ್ತು. ನನಗೂ ಇದರಿಂದ ಬಹಳ ನೋವಾಗಿದೆ. ಶ್ರೀ ರಾಮರಿಗೂ ಈ ಬಗ್ಗೆ ಹೇಳಿ ನೋಡಿದೆ 'ಬಾಸ್! ಈ ಬಗ್ಗೆ ಏನಾದ್ರೂ ಮಾಡ್ಬೇಕು. ಈ ರೀತಿ ನಮ್ಮ ಹೆಸರಿನಲ್ಲಿ ರಾಜಕೀಯ ಮಾಡಲು ಬಿಡಬಾರದು' ಅಂತ. ಆದರೆ ಶ್ರೀರಾಮ ಏನು ಹೇಳಿದರು ಗೊತ್ತೆ! 'ಸುಮ್ನಿರಯ್ಯಾ! ನನ್ನನ್ನು ಪುನಃ ಭರತಖಂಡದ ರಾಜ ಮಾಡ್ತಾರೆ ಅಂತ ಹೇಳಿದ್ದಾರೆ ಕಣಯ್ಯಾ. ನಾನು ರಾಜ ಆಗಬೇಕಾದ್ರೆ ರಾಜಕೀಯ ಮಾಡದೆ ಆಗುತ್ತಾ' ಅಂದು ಬಿಡೋದೆ? ಬಾಸ್ ಶ್ರೀರಾಮ ಹೀಗೆ ಹೇಳಿದ ಮೇಲೆ ನಾನು ಏನು ಮಾಡಲಿ ಹೇಳಿ ?

ನಿಮ್ಮ ಪತ್ರಿಕೆಯವರು ದೇವರ ಹೆಸರು ಹೇಳಿ ರಾಜಕೀಯ ಮಾಡಲ್ಲಂತೆ. ನೀವೆ ಸ್ವಲ್ಪ ಶ್ರೀ ರಾಮನಿಗೆ ಬುದ್ಧಿ ಹೇಳಿ. ಅಷ್ಟೇ ಅಲ್ಲ. ನೀವು ಯಾವ ಅಲ್ಪಸಂಖ್ಯಾತರಿಗೆ ತೊಂದರೆ ಆದ್ರೂ ಅವರ



ಪರವಾಗಿ, ಹೋರಾಟ ಮಾಡ್ತೀರಂತೆ. ಬ್ರಹ್ಮಚಾರಿಗಳೂ ಒಂದು ರೀತಿಯಲ್ಲಿ ಅಲ್ಪಸಂಖ್ಯಾತರೇ ತಾನೇ ? ಅದ್ದರಿಂದ ದಯವಿಟ್ಟು ನನ್ನ ಈ ಲೇಖನ ಪ್ರಕಟಿಸಿ.

ಈ ಮೂಲಕ ಇಡೀ ದೇಶದ ಜನತೆಗೆ ಮನವಿ ಮಾಡ್ತಾ ಇದ್ದೇನೆ.

ದಯವಿಟ್ಟು ಬ್ರಹ್ಮಚಾರಿಗಳಿಗೆ ತೊಂದರೆ ಕೊಡಬೇಡಿ - ನನ್ನ ಮನ ಮಿಡಿಯುತ್ತೆ !

– ಆಂಜನೇಯ.

ಅಮೂಲ್ಯವಾದ ಪ್ರಾಕೃತಿಕ ಸಂಪನ್ಮೂಲಗಳನ್ನು ಒಡಲಲ್ಲಿ ಹುದುಗಿಸಿಕೊಂಡ ಕೋಲಾರ ಜಿಲ್ಲೆ ನೀರಿನ ತೀವ್ರ ತೆರನಾದ ಅಭಾವಕ್ಕೆ ಈಡಾಗಿದೆ. ಕೃಷಿ ಪ್ರಾಧಾನ್ಯ ಜಿಲ್ಲೆಯ ಜನ ತತ್ತರಿಸುತ್ತಿದ್ದಾರೆ. ಆಂತರಿಕ ಜಲ ಸಂಪನ್ಮೂಲವೂ ಬತ್ತುತ್ತಿರುವ ಹಿನ್ನೆಲೆಯಲ್ಲಿ ಶಾಶ್ವತ ನೀರಾವರಿ ಯೋಜನೆಗಾಗಿ ಜನಾಂದೋಲನ ಆರಂಭಗೊಂಡಿದೆ. ಕೃಷ್ಣ ಕಣಿವೆಯ ಬಿ ಸ್ಕೀಂ ನೀರಿನ ಬಳಕೆ, ಪರಮಶಿವಯ್ಯ ವರದಿಯ ಅನುಷ್ಠಾನದ ವಾಸ್ತವಿಕ ಆಳ ಅಧ್ಯಯನವು ಅತ್ಯಗತ್ಯವಾಗಿದೆ. (ಹಲವು ಜಿಲ್ಲೆಗಳ ಪ್ರಶ್ನೆಯೂ ಅಡಗಿದೆ) ಬರಗಾಲದ ಬಂಗಾರದ ನಾಡಿಗೆ ನೀರು ಹರಿಸುವ ಹಲವು ಸಾಧ್ಯತೆಗಳ ಕುರಿತ ವರದಿಯಿಲ್ಲಿದೆ.

ನೀರು ನೀರು.....ಕೊ

ಕರ್ನಾಟಕ ರಾಜ್ಯದ ಅತ್ಯಂತ ಹಿಂದುಳಿದ ಜಿಲ್ಲೆಗಳಲ್ಲಿ ಒಂದಾಗಿರುವ ಕೋಲಾರ, ದೇಶಕ್ಕೆ ಮತ್ತು ರಾಜ್ಯಕ್ಕೆ ಹಲವಾರು ಚರಿತ್ರಾರ್ಹ ಕೊಡುಗೆಗಳನ್ನು ಕೊಟ್ಟಿದೆ. ತಾನು ಹಸಿದು ಇತರರಿಗೆ ಅನ್ನ ಕೊಟ್ಟಿದೆ. ಬಡತನವೆಂಬ ಬೆಂಕಿ ಉಂಡೆಯನ್ನು ತನ್ನ ಒಡಲಲ್ಲಿಟ್ಟುಕೊಂಡು ದೇಶದ ಒಡಲನ್ನು ಚಿನ್ನದಿಂದ ತುಂಬಿದೆ, ರಾಜ್ಯಕ್ಕೆ ಕ್ಷೀರ ಪ್ರವಾಹವನ್ನು ಹರಿಸಿ ತನ್ನ ಗರ್ಭದಲ್ಲಿ ನೀರಿಲ್ಲದೆ ಬರಡಾಗಿದೆ. ಜಗತ್ತಿಗೆ ರೇಷ್ಮೆಯ ಹೊಳಪನ್ನು ನೀಡಿ ತನ್ನ ಭವಿಷ್ಯವನ್ನು ಕಪ್ಪಾಗಿಸಿಕೊಂಡಿದೆ. ರಾಜ್ಯಕ್ಕೆ ಮೊದಲ ಮುಖ್ಯಮಂತ್ರಿಯನ್ನು ನೀಡಿ ಇಂದು ಅನಾಥ ಪ್ರಜ್ಞೆಯನ್ನು ಅನುಭವಿಸುತ್ತಿದೆ. ದೇಶಕ್ಕೆ ಅಸಾಮಾನ್ಯ ಮುತ್ಸದ್ದಿ, ಅಭಿವೃದ್ಧಿಯ ಹರಿಕಾರ ಮತ್ತು ಖ್ಯಾತ ಮೇಧಾವಿ ಸರ್.ಎಂ.ವಿಶ್ವೇಶ್ವರಯ್ಯನವರಂತಹ ಭಾರತ ರತ್ನವನ್ನೇ ನೀಡಿದ ಜಿಲ್ಲೆ ಇಂದು ದೂರ ದೃಷ್ಟಿಯ ನೇತಾರರಿಲ್ಲದೆ ಕೊರಗುತ್ತಿದೆ. ಮಾಸ್ತಿಯಂತಹ ಸಾಹಿತ್ಯ ದಿಗ್ಗಜಗಳನ್ನು ನೀಡಿಯೂ ಬೌದ್ಧಿಕ ದಿವಾಳಿತನವನ್ನು ಅನುಭವಿಸುತ್ತಿದೆ. ಆದರೆ ಇಂದು ಕೋಲಾರ ಜಿಲ್ಲೆ ತನ್ನ ಅಸ್ತಿತ್ವವನ್ನೇ ಕಳೆದುಕೊಂಡು ಮರಳುಗಾಡಾಗುವ ಗಂಭೀರ ಆತಂಕವನ್ನು ಎದುರಿಸುತ್ತಿದೆ. ನಿರಂತರ ಬರಗಾಲಕ್ಕೆ ಸಿಕ್ಕಿ ಕುಡಿಯುವ ನೀರಿಗೂ ಪರದಾಡುವ ಸ್ಥಿತಿ ಇಂದು ಜಿಲ್ಲೆಯ ಜೀವಂತ ಸಮಸ್ಯೆಯಾಗಿದೆ.

ಜಿಲ್ಲೆಯ ಬಹುಭಾಗದ ಜನರ ಜೀವನ ಅವಲಂಬಿತವಾಗಿರುವುದು ಕೃಷಿಯ ಮೇಲೆ. ಕೃಷಿಗೆ ಮೂಲಾಧಾರವಾಗಿರುವ ನೀರು ಈ ಜಿಲ್ಲೆಗೆ ಇಲ್ಲವಾಗುತ್ತಿದೆ. ಇಡೀ ರಾಜ್ಯದಲ್ಲಿ ಅತಿ ಕಡಿಮೆ ನೀರಾವರಿ ಪ್ರದೇಶವಿರುವ ಜಿಲ್ಲೆಗಳಲ್ಲಿ ಕೋಲಾರ ಜಿಲ್ಲೆಯೂ ಒಂದು. ಇಲ್ಲಿ ನದಿ ನಾಲೆಗಳಿಲ್ಲದ ಕಾರಣ ಕೆರೆ, ತೆರೆದ ಬಾವಿ ಮತ್ತು ಕೊಳವೆ ಬಾವಿಗಳ ನೀರಿನ ಮೇಲೆ ಆಧಾರಿತವಾಗಿದೆ. ಪ್ರಕೃತಿಯಲ್ಲಾಗುತ್ತಿರುವ ಬದಲಾವಣೆಗಳಿಂದಾಗಿ ಹಾಗೂ ಭೂಆಕ್ರಮಣಗಳಿಂದಾಗಿ ಕೆರೆಗಳು ತುಂಬುವುದು ಅಪರೂಪವಾಗಿದೆ ಮತ್ತು ಬಾವಿಗಳು ಬತ್ತಿಹೋಗತೊಡಗಿವೆ. ಆದ್ದರಿಂದ ನೀರಿಗಾಗಿ ಅಂತರ್ಜಲವನ್ನು ಅವಲಂಬಿಸುವುದು ಅನಿವಾರ್ಯವಾಗಿದೆ. 1980 ರ ದಶಕದಲ್ಲಿ ಕೃಷಿಗಾಗಿ ಕೊಳವೆ ಬಾವಿಗಳನ್ನು ಕೊರೆಯುವುದು ಪ್ರಾರಂಭವಾಯಿತು. ಇದರಿಂದಾಗಿ ಭೂಮಿಯಲ್ಲಿನ ಅಂತರ್ಜಲ ಮಟ್ಟ ತೀವ್ರ ಕುಸಿತಕ್ಕೆ ಒಳಗಾಗಿ ಈಗ 500 ರಿಂದ 700 ಅಡಿಗಳಷ್ಟು ಆಳಕ್ಕೆ ಹೋದರೂ ನೀರು ಸಿಗದಂತಹ ಪರಿಸ್ಥಿತಿ ಉಂಟಾಗಿದೆ. ಇದರಿಂದಾಗಿ ಜಿಲ್ಲೆಯ ಕೃಷಿ ಪರಿಸ್ಥಿತಿ ಮೇಲೆ ಹಲವಾರು ತೀವ್ರತರವಾದ ಪರಿಣಾಮಗಳುಂಟಾಗುತ್ತಿವೆ. ಒಂದು ಕಡೆ ಅಷ್ಟು ಆಳದಿಂದ ನೀರನ್ನು ಭೂಮಿಯಿಂದ ಹೊರತೆಗೆದು ವ್ಯವಸಾಯ ಮಾಡಬೇಕಾದರೆ ಕನಿಷ್ಟ 1 ಲಕ್ಷ ರೂಪಾಯಿಗಳ ಖರ್ಚು, ಇದು ಕೆಲವರಿಗೆ ಮಾತ್ರ ಸಾಧ್ಯ. ಹಾಗಾಗಿ ನೀರಾವರಿ ಕೃಷಿ ಕಡಿಮೆಯಾಗಿ ಕೃಷಿ ಉತ್ಪಾದನೆ ಕುಸಿದಿದೆ. 1985 ರಲ್ಲಿ ಸರ್ಕಾರ ನಡೆಸಿರುವ ಉಪಗ್ರಹ (ಸ್ಯಾಟಲೈಟ್) ಸರ್ವೆ ವರದಿಯ ಪ್ರಕಾರ ಈಗ ಕೊಳವೆ ಬಾವಿಗಳಿಂದ ತೆಗೆಯುತ್ತಿರುವ ಪ್ರಮಾಣದಲ್ಲಿ ನೀರನ್ನು ಇನ್ನು 20 ವರ್ಷಗಳ ಕಾಲ ತೆಗೆದರೆ ಇಡೀ ಜಿಲ್ಲೆಯ ಬಹುಭಾಗ ಮರು ಭೂಮಿಯಂತಾಗುವ ಎಲ್ಲಾ ಲಕ್ಷಣಗಳಿವೆ ಎಂದು ತಿಳಿಸಿದೆ. ಇಂತಹ ನೀರನ್ನು ಕುಡಿಯುವುದು ಅಪಾಯಕಾರಿ ಎಂದು ಬಾವಿಸಲಾಗಿದೆ.

ಜಿ.ವಿ.



ಜಿಲ್ಲೆಯ ಸಮಗ್ರ ಅಭಿವೃದ್ಧಿ ಮತ್ತು ಶಾಶ್ವತ ನೀರಾವರಿ ಯೋಜನೆಗೆ ಆಗ್ರಹಿಸಿ ನಿರ್ಣಯ ಕೈಗೊಂಡ ಸಿಪಿಐ(ಎಂ) 16ನೇ ಜಿಲ್ಲಾ ಸಮ್ಮೇಳನದ ಬಹಿರಂಗ ಸಭೆಯ ಒಂದು ದೃಶ್ಯ

ನಾವು ಕುಡಿಯುತ್ತಿರುವ ನೀರೆಲ್ಲಾ ವಿಷ! ಭೂಮಿಯ ಹೆಚ್ಚು ಆಳದಿಂದ ನೀರು ತೆಗೆದಂತೆಲ್ಲಾ ಅದರಲ್ಲಿ ಕೆಲವು ಅಪಾಯಕಾರಿ ಲವಣಗಳು ಹೆಚ್ಚಾಗಿರುತ್ತವೆ. ಜಿಲ್ಲೆಯ ಕುಡಿಯುವ ನೀರಿನಲ್ಲಿ ಫ್ಲೋರೈಡ್, ರಂಜಕ ಮತ್ತು ಗಂಧಕ ಲವಣಗಳು ತುಂಬಿವೆ. ನೀರಿನಲ್ಲಿ ಈ ಲವಣಗಳು ಇರಬೇಕಾಗಿರುವುದು ಅವಶ್ಯವಾದರೂ ಇವುಗಳ ಪ್ರಮಾಣ ಶೇ.1 ಕ್ಕಿಂತ ಹೆಚ್ಚು ಇರಬಾರದು. ಆದರೆ ಇವುಗಳ ಪ್ರಮಾಣ ಅಪಾಯಕಾರಿ ಮಟ್ಟ ತಲುಪಿದೆ. ಗೌರಿಬಿದನೂರು, ಗುಡಿಬಂಡೆ, ಬಾಗೇಪಲ್ಲಿ, ಶಿಡ್ಲಘಟ್ಟದ ಉತ್ತರಭಾಗ, ಚಿಂತಾಮಣಿ, ಶ್ರೀನಿವಾಸಪುರದ ಉತ್ತರಭಾಗ ಮತ್ತು ಮುಳಬಾಗಿಲಿನ ಉತ್ತರಭಾಗದಲ್ಲಿ ಫ್ಲೋರೈಡ್ ಅಂಶ ಶೇ.4.6 ಇದೆ. ಇದು ಫ್ಲೋರೊಸಿಸ್ ಎಂಬ ಮಾರಕ ಕಾಯಿಲೆಗೆ ಎಡೆ ಮಾಡಿಕೊಟ್ಟು ಮನುಷ್ಯನ ದೇಹದಲ್ಲಿರುವ ಮೂಳೆಗಳನ್ನು ತಿಂದುಹಾಕುವುದಲ್ಲದೆ ಕೀಲುನೋವು, ಹಲ್ಲುಗಳ ಕ್ಷಯ ಮುಂತಾದ ಗುಣಪಡಿಸಲಾಗದ ಕಾಯಿಲೆಗಳು

ನೀರಿಗಾಗಿ ಹೋರಾಟ..... ನಡೆದು ಬಂದ ದಾರಿ

ಜಿಲ್ಲೆಯ ನೀರಿನ ಜ್ವಲಂತ ಸಮಸ್ಯೆ ಬಗ್ಗೆ ಜನರಲ್ಲಿ ಅರಿವು ಮೂಡಿಸಿ ಜಿಲ್ಲೆಗೆ ಶಾಶ್ವತ ನೀರಾವರಿ ಯೋಜನೆಗಳ ಅನುಷ್ಠಾನಕ್ಕಾಗಿ ಹೋರಾಡಲು ಜನತೆಯನ್ನು ಅಣಿಗೊಳಿಸಲು ಸಿಪಿಐ(ಎಂ) ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಕಳೆದ ವರ್ಷದಿಂದ ನಿರಂತರವಾಗಿ ಶ್ರಮಿಸುತ್ತಾ ಬಂದಿವೆ.

ಕಳೆದ ವರ್ಷ ಮೇ 27 ರಿಂದ 30ರವರೆಗೆ ಚಿಕ್ಕಬಳ್ಳಾಪುರದಲ್ಲಿ ನಡೆದ ಎಸ್.ಎಫ್.ಐ.ನ ಅಧ್ಯಯನ ಶಿಬಿರದ ಭಾಗವಾಗಿ ಕೋಲಾರ ಜಿಲ್ಲೆಯ ಶಾಶ್ವತ ನೀರಾವರಿ ಯೋಜನೆಗಳು ಎಂಬ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಈ ವಿಚಾರ ಸಂಕಿರಣದಲ್ಲಿ ಜನಪ್ರತಿನಿಧಿಗಳು, ಎಲ್ಲಾ ರಾಜಕೀಯ ಪಕ್ಷಗಳ ಹಿರಿಯ ಮುಖಂಡರುಗಳು ಮತ್ತು ಚಿಕ್ಕಬಳ್ಳಾಪುರ ಉಪ ವಿಭಾಗದ ಸಾವಿರಾರು ಜನ ಭಾಗವಹಿಸಿದ್ದರು. ಈ ಸಂಕಿರಣ ಕೇಂದ್ರ ಬಿಂದುವಾದ ನೀರಾವರಿ ತಜ್ಞ ಡಾ. ಪರಮಶಿವಯ್ಯನವರು ಜಿಲ್ಲೆಯ ಕುಡಿಯುವ ಮತ್ತು ಕೃಷಿ ನೀರಿನ ಸ್ಥಿತಿ ಗತಿ ಮತ್ತು ಈ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಮಾರ್ಗಗಳನ್ನು ಸೂಚಿಸುತ್ತಾ ಈ ನಿಟ್ಟಿನಲ್ಲಿ ಸಿಪಿಐ(ಎಂ) ಪ್ರಯತ್ನಗಳನ್ನು ಶ್ಲಾಘಿಸಿದರು.


ಜಿಲ್ಲೆಯ ಉತ್ತರ ಭಾಗದ ಕುಡಿಯುವ ನೀರಿನಲ್ಲಿ ಫ್ಲೋರೈಡ್, ದಕ್ಷಿಣ ಮತ್ತು ಮಧ್ಯ ಭಾಗದಲ್ಲಿ ನೈಟ್ರೇಟ್ ಸಲ್ಫೇಟ್‌ಗಳ ಇರುವಿಕೆಯಿಂದ ಜನತೆ ಅನೇಕ ಕಾಯಿಲೆಗಳಿಗೆ ತುತ್ತಾಗುತ್ತಿದ್ದು, ಶುದ್ಧ ಕುಡಿಯುವ ನೀರು ಪಡೆಯಲು ಮತ್ತು ಜಿಲ್ಲೆಯ ಏಕೈಕ ಆರ್ಥಿಕ ಶಕ್ತಿಯಾದ ಕೃಷಿಗೆ ಶಾಶ್ವತ ನೀರಾವರಿ ಯೋಜನೆಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಸಲುವಾಗಿ ಕಳೆದ ವರ್ಷ ಆಗಸ್ಟ್ 1 ರಿಂದ 15 ರವರೆಗೆ ಡಿ.ವೈ.ಎಫ್.ಐ. ನೇತೃತ್ವದಲ್ಲಿ ಜಿಲ್ಲೆಯಾದ್ಯಂತ ಜಾಥಾಗಳನ್ನು ಸಂಘಟಿಸಲಾಗಿತ್ತು ಮತ್ತು ಇದರ ಸಮಾರೋಪ ಸಮಾರಂಭವು ಸಾವಿರಾರು ಜನರ ಸಮ್ಮುಖದಲ್ಲಿ 56 ನೇ ಸ್ವಾತಂತ್ರೋತ್ಸವ ದಿನದಂದು ಕೋಲಾರದಲ್ಲಿ ಜರುಗಿತು. ಈ ಜಾಥಾಗಳ ಫಲವಾಗಿ ಜಿಲ್ಲೆಯ ಜನತೆಗೆ ಸಮಸ್ಯೆ ಅರಿವಾಗಿ ಈ ಸಮಸ್ಯೆಗೆ ಪರಿಹಾರ ಪಡೆಯಲೇಬೇಕು ಎಂಬ ದೃಢ ಸಂಕಲ್ಪದೊಂದಿಗೆ ಎಲ್ಲಾ ಹೋರಾಟಗಳಿಗೂ ಸ್ಪಂದಿಸುತ್ತಿದ್ದಾರೆ.

ಜಿಲ್ಲೆಗೆ ಶಾಶ್ವತ ನೀರಾವರಿ ಯೋಜನೆಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಸರ್ಕಾರದ ಮೇಲೆ ಒತ್ತಡ ಹೇರಲು ಹಾಗೂ ಹೋರಾಟದ ನಾಯಕತ್ವ ವಹಿಸಲು ಜಿಲ್ಲಾಮಟ್ಟದಲ್ಲಿ ಒಂದು ಸಮಾವೇಶ ಏರ್ಪಡಿಸಿ, ಜಿಲ್ಲೆಯ ಎಲ್ಲಾ ರಾಜಕೀಯ ಪಕ್ಷಗಳ ಮತ್ತು ಪ್ರಗತಿಪರ ಸಂಘಟನೆಗಳ ಮುಖಂಡರನ್ನೊಳಗೊಂಡ ಜಿಲ್ಲಾ ಸಮಿತಿ ರಚಿಸಲಾಯಿತು. ಈ ಹೋರಾಟ ಸಮಿತಿಯು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಸಮಾವೇಶಗಳನ್ನು ನಡೆಸಿ ತಾಲ್ಲೂಕು ಮಟ್ಟದ ಸಮಿತಿಗಳನ್ನು ರಚಿಸಿತು. ಇದರ ಫಲವಾಗಿ ಜಿಲ್ಲೆಯ ಎಲ್ಲಾ ರಾಜಕೀಯ ಪಕ್ಷಗಳ ನೇತೃತ್ವದಲ್ಲಿ ಇದೇ ಜನವರಿ 17 ರಂದು ಜಿಲ್ಲೆಗೆ ಶಾಶ್ವತ ನೀರಾವರಿ ಯೋಜನೆಗಳಿಗಾಗಿ ಒತ್ತಾಯಿಸಿ ಬೃಹತ್ ರ್‍ಯಾಲಿ ಮತ್ತು ಸಮಾವೇಶ ಸಂಘಟಿಸಲಾಗಿತ್ತು. ಈ ರ್‍ಯಾಲಿಯಲ್ಲಿ 25 ಸಾವಿರ ಜನರು ಪಾಲ್ಗೊಂಡಿದ್ದು ಇದೊಂದು ಐತಿಹಾಸಿಕ ದಾಖಲೆ. ಅಂದು ನಡೆದ ಸಮಾವೇಶದಲ್ಲಿ ಜಿಲ್ಲೆಯ ಉಸ್ತುವಾರಿ ಸಚಿವರು, ಬಹುತೇಕ ಜನ ಪ್ರತಿನಿಧಿಗಳು, ಮಾಜಿ ಜನಪ್ರತಿನಿಧಿಗಳು, ಪ್ರಗತಿಪರರೂ ಭಾಗವಹಿಸಿ ಜಿಲ್ಲೆಯ ಜನತೆಗೆ ಕುಡಿಯುವ ಮತ್ತು ಕೃಷಿ ನೀರಿಗಾಗಿ ಯಾವುದೇ ರೀತಿಯ ತ್ಯಾಗಕ್ಕೂ ಸಿದ್ಧರಾಗುವಂತೆ ಕರೆಕೊಟ್ಟಿರುತ್ತಾರೆ. ಅಂದಿನ ರ್‍ಯಾಲಿ ಮತ್ತು ಸಮಾವೇಶದಲ್ಲಿ ಭಾಗವಹಿಸಿದ್ದ ಪ್ರತಿಯೊಬ್ಬರದೂ ಒಂದೇ ಉವಾಚ "ನೀರಿಗಾಗಿ ಮಡಿಯಲೂ ಸಿದ್ಧ".

ಈ ಐತಿಹಾಸಿಕ ಸಮಾವೇಶದಿಂದ ಸ್ಫೂರ್ತಿ ಪಡೆದ ಜಿಲ್ಲೆಯ ಪ್ರತಿ ಪ್ರಜೆಯೂ ಜಿಲ್ಲೆಗೆ ಶಾಶ್ವತ ನೀರಾವರಿ ಯೋಜನೆಗಳನ್ನು ಪಡೆಯುವವರೆಗೂ ವಿರಮಿಸುವುದಿಲ್ಲ, ಯಾವುದೇ ಹೋರಾಟ, ತ್ಯಾಗಕ್ಕೂ ಸಿದ್ಧನಾಗಿದ್ದಾನೆ.

ಜಿಲ್ಲೆಯ ನೀರಿನ ಕೂಗನ್ನು ನೇರವಾಗಿ ಸರ್ಕಾರಕ್ಕೆ ಮುಟ್ಟಿಸಲು ಬರುವ ಮೇ 27 ರಂದು 20 ಸಾವಿರ ಜನರು ಜಿಲ್ಲೆಯಿಂದ ವಿಧಾನ ಸೌಧದವರೆಗೂ ಕಾಲ್ನಡಿಗೆ ಜಾಥ ನಡೆಸಲಿದ್ದಾರೆ. ■

'ಜಿಲ್ಲೆಯ ಸಮಗ್ರ ಅಭಿವೃದ್ಧಿ'ಗಾಗಿ ನಡೆದ ಡಿವೈಎಫ್ಐ ನ ವಿಚಾರಸಂಕಿರಣದಲ್ಲಿ ಪ್ರೊ. ಬರಗೂರು ರಾಮಚಂದ್ರಪ್ಪ, ಜಿ.ವಿ.ಶ್ರೀರಾಮರೆಡ್ಡಿ, ಜ್ಯೋತಿರೆಡ್ಡಿ, ವಿಧಾನ ಪರಿಷತ್ ಸದಸ್ಯರಾದ ಸುದರ್ಶನ್



ರ ಜಿಲ್ಲೆಯ ಕೂಗು



ಬರುತ್ತವೆ. ಇನ್ನು ಜಿಲ್ಲೆಯ
ದಕ್ಷಿಣಭಾಗದಲ್ಲಿನ ನೀರಿನಲ್ಲಿ ರಂಜಕ
ಮತ್ತು ಗಂಧಕಗಳ ಅಂಶಗಳು
ಾಗಾಗಿ ಕುಡಿಯುತ್ತಿರುವ ನೀರು ನಿಧಾನ
. ಈ ಅಪಾಯವನ್ನು ತಪ್ಪಿಸಬೇಕಾದರೆ
ದೇ ಮಾರ್ಗ ಭೂಮಿಯ ಮೇಲಿನ
ಯುವುದು. ನದಿ ನಾಲೆಗಳಿಲ್ಲದ ಮತ್ತು
ತ್ತಿ ಹೋಗಿರುವ ಈ ಸಂದರ್ಭದಲ್ಲಿ ಆ
ಗೆ ಪಡೆಯುವುದು? ಇಂದು ಕೋಲಾರ
ಕುಡಿಯಲು ಶುದ್ಧ ನೀರಿಲ್ಲದ
ು ಪರಿಸ್ಥಿತಿ ಎದುರಿಸುತ್ತಿದೆ. ಇದಕ್ಕೆ
ಹಾರ ಬೇಕು.

ಅಂಚಿನಲ್ಲಿ ಕೃಷಿ


ು ಜೀವನಾಡಿಯಾಗಿರುವ ಕೃಷಿ ಇಂದು
ಅಂಚಿನಲ್ಲಿದೆ. ಕೆರೆಗಳು ಬತ್ತಿಹೋಗಿವೆ.
ಇಲ್ಲದೆ ಲಕ್ಷಾಂತರ ರೂ.ಗಳನ್ನು ಖರ್ಚು
ವೆ ಬಾವಿ ಕೊರೆಸಿ ನೀರು ಹಾಯಿಸಿ ಬೆಳೆ
ೈತರ ಸಂಖ್ಯೆ ಎಷ್ಟು? ಕೇವಲ ಶೇ. 3
ುಳಿದವರು ಇದ್ದ ಒಂದು ಅಥವಾ
ಭೂಮಿಯನ್ನು ಮಾರಿಕೊಂಡು ಕೃಷಿ
ಗುವ ಪರಿಸ್ಥಿತಿ ಉಂಟಾಗಿದೆ. ಇನ್ನು
ರೂಪಾಯಿಗಳ ಸಾಲ ಮಾಡಿ ಕೊಳವೆ
ಬೆಳೆ ತೆಗೆದರೆ ಕೇಂದ್ರ ಮತ್ತು ರಾಜ್ಯ
ಅನುಸರಿಸುತ್ತಿರುವ ಕೃಷಿ ವಿರೋಧಿ
ಂದಾಗಿ ಪ್ರಮುಖವಾಗಿ ಡಬ್ಲ್ಯು.ಟಿ.ಒ.
ದ ನಂತರ ಕೃಷಿ ಉತ್ಪನ್ನಗಳ ಬೆಲೆಗಳು
ಕುಸಿದು ರೈತರು
ೀಡಾಗುತ್ತಿದ್ದಾರೆ. ಇದರ ಜೊತೆಗೆ
ಬಾವಿಗಳಿಂದ ನೀರನ್ನು
ಬೇಕಾದಷ್ಟೆ ಹೇರಳವಾದ ವಿದ್ಯುಚ್ಛಕ್ತಿ
ದ್ದು ವಿದ್ಯುಚ್ಛಕ್ತಿ ರಂಗದಲ್ಲಿ ಸರ್ಕಾರ
ರುವ ಧೋರಣೆಗಳಿಂದಾಗಿ ವಿದ್ಯುಚ್ಛಕ್ತಿ
ಗಿ ಬೆಳೆದ ಉತ್ಪನ್ನಗಳನ್ನು ಮಾರಾಟ
ವಿದ್ಯುಚ್ಛಕ್ತಿಯ ಬಿಲ್ ಪಾವತಿಸಲು
ಾಗದ ಪರಿಸ್ಥಿತಿ ನಿರ್ಮಾಣವಾಗಿದೆ.
ೀ ಜೀವನಾಡಿಯಾಗಿರುವ ಈ
ಕೃಷಿ ಯೋಗ್ಯವಾದ ಭೂಮಿ ಮತ್ತು
ರಾವರಿಗೆ ಒಳಪಟ್ಟಿರುವ ಭೂಮಿಯ
ಳನ್ನು ಗಮನಿಸಿದರೆ ಪರಿಸ್ಥಿತಿಯ
ಅರಿವಾಗುತ್ತದೆ. ನೀರ ಕಡಿಮೆ
ಒಳಪಟ್ಟಿರುವ ಭೂಮಿಯಲ್ಲಿ
ಾಗುತ್ತಿರುವುದರಿಂದ ಜಿಲ್ಲೆಯಲ್ಲಿನ
ಸ್ಥಿತಿಗತಿಗಳ ಮೇಲೆ ಗಂಭೀರವಾದ

ಪರಿಣಾಮ ಬಿದ್ದು ಜಿಲ್ಲೆಯು ಆರ್ಥಿಕವಾಗಿ ಇನ್ನಷ್ಟು ಹಿಂದುಳಿಯುವುದು ಖಚಿತ. ಜಿಲ್ಲೆಯ ಜನತೆಯ ಆರ್ಥಿಕವಾಗಿ ಹಿಂದುಳಿದರೆ ಅದು ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿಯುವುದು ಅನಿವಾರ್ಯವಾಗುತ್ತದೆ.

ಉದಾರೀಕರಣ ನೀತಿಗಳಿಂದಾಗಿ ಗಂಭೀರವಾದ ಹೊಡೆತಕ್ಕೆ ಸಿಕ್ಕಿವೆ. ಇದರಿಂದಾಗಿ ರೈತರ ಜೀವನ ದಿನೇ ದಿನೇ ಹದಗೆಡುತ್ತಿದೆ. ಇದಕ್ಕೆ ಪರಿಹಾರವೇನು? ದಾರಿ ಯಾವುದು?

ಡಾ. ಪರಮಶಿವಯ್ಯನವರು ಕಣಿವೆಯ ಭದ್ರಾ ಮೇಲ್ದಂಡೆಯಿಂದ ಲಭ್ಯವಿರುವ 76.39 ಟಿ.ಎಂ.ಸಿ ನೀರನ್ನು, ಪೂರ್ವ ಮತ್ತು ಉತ್ತರ ಪೂರ್ವ ಭಾಗಗಳಿಂದ ಬರಪೀಡಿತ ಜಿಲ್ಲೆಗಳಿಗೆ ಹರಿಸುವ ಯೋಜನೆಯನ್ನು ಕೊಟ್ಟಿದ್ದಾರೆ.

ಕೃಷ್ಣಾ ಕಣಿವೆಯಲ್ಲಿನ ನೀರಿನಲ್ಲಿ ನಮಗೆ ಭಾಗವಿಲ್ಲವೆ? ಸಾಮಾನ್ಯವಾಗಿ ನಮ್ಮ ಜಿಲ್ಲೆಯ ಜನರು ಕಾವೇರಿ ನದಿ ನಮಗೆ ಹತ್ತಿರವಲ್ಲವೆ? ಕಾವೇರಿಯಿಂದಲೇ ನಮಗೆ ನೀರನ್ನು ಕೊಡಬಹುದಲ್ಲವೆ, ಕೃಷ್ಣಾ ನದಿ ಮತ್ತು ನೇತ್ರಾವತಿ ಪಶ್ಚಿಮ ಘಟ್ಟಗಳು ಎಲ್ಲಿವೆ? ಅಲ್ಲಿಂದ ನೀರು ಬರುವುದು ಸಾಧ್ಯವೇ? ಎಂಬ ಹಲವಾರು ಪ್ರಶ್ನೆಗಳು ಮತ್ತು ಸಂಶಯಗಳನ್ನು ವ್ಯಕ್ತಪಡಿಸುತ್ತಾರೆ. ಇಂದಿನ ವೈಜ್ಞಾನಿಕ ಯುಗದಲ್ಲಿ ಯಾವುದೂ ಅಸಾಧ್ಯವಲ್ಲ, ರಾಜಕೀಯ ಇಚ್ಛಾಶಕ್ತಿಯೊಂದಿದ್ದರೆ ಇದು ಸಾಧ್ಯವಿದೆ. ಮೂಲತಃ ನಮ್ಮ ಜಿಲ್ಲೆ ಕಾವೇರಿ ನದಿ ಕಣಿವೆಗೆ ಸೇರಿಲ್ಲ. ಎರಡನೆಯದು ಕಾವೇರಿ ನದಿ ಕಣಿವೆಯಲ್ಲಿ ಹೆಚ್ಚುವರಿ ನೀರಿನ ಲಭ್ಯವಿಲ್ಲ, ಹಾಗಾಗಿ ಕೋಲಾರ ಜಿಲ್ಲೆಗೆ ಕಾವೇರಿ ನದಿ ನೀರು ಬರಲು ಸಾಧ್ಯವಿಲ್ಲ. ನಮ್ಮ ಜಿಲ್ಲೆ ಕೃಷ್ಣಾ ಕಣಿವೆಗೆ ಸೇರುವುದರಿಂದ ಅಲ್ಲಿನ ನೀರನ್ನು ಪಡೆಯಲು ನಾವು ಅರ್ಹರಾಗಿದ್ದೇವೆ ಮತ್ತು ಕೇಳಲು ನಮಗೆ ಹಕ್ಕಿದೆ. 1976 ರಲ್ಲಿ ಬಚಾವತ್ ತೀರ್ಪಿನಿಂದ ಕರ್ನಾಟಕದ ಪಾಲು 734 ಟಿ.ಎಂ.ಸಿ ಇದರಲ್ಲಿ ಉಳಿಕೆ 5 ಟಿ.ಎಂ.ಸಿ ನೀರನ್ನು ಚೆನ್ನೈ ನಗರಕ್ಕೆ ಕುಡಿಯಲು ಕೊಡಲಾಗಿದೆ. ಈಗಲಾದರೂ ನಮ್ಮ ಜಿಲ್ಲೆಯೂ ಸೇರಿ ಈ ಎಲ್ಲಾ ಏಳು ಜಿಲ್ಲೆಗಳ ಜನರು ಕೃಷ್ಣಾ ಕಣಿವೆಯಲ್ಲಿನ ನೀರನ್ನು ಕೇಳಿ ಪಡೆಯಬೇಕಾಗಿದೆ. ಕೃಷ್ಣಾ ಕಣಿವೆಯಿಂದ 76.36 ಟಿ.ಎಂ.ಸಿ ಪಶ್ಚಿಮ ಘಟ್ಟಗಳಿಂದ 168.46 ಟಿ.ಎಂ.ಸಿ ಒಟ್ಟು 244.85 ಟಿ.ಎಂ.ಸಿ ನೀರು ಏಳು ಜಿಲ್ಲೆಗಳಿಗೆ ಹಾಯಿಸಲು ಸಾಧ್ಯವಿದೆ. ಈ ಯೋಜನೆ ಜಾರಿಗೆ ಬಂದರೆ ಕೋಲಾರ ಜಿಲ್ಲೆ ಕನಿಷ್ಠ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ.


ಸಮುದ್ರ ಸೇರುತ್ತಿರುವ ಪಶ್ಚಿಮ ಘಟ್ಟದ ನೀರು.

ನಮ್ಮ ಜಿಲ್ಲೆಯಲ್ಲಿ ಒಟ್ಟು 5,72,115 ಹೆಕ್ಟೇರ್ ಕೃಷಿ ಯೋಗ್ಯ ಭೂಮಿಯಿದ್ದು ಇದರಲ್ಲಿ ಕೆರೆ, ತೆರೆದ ಬಾವಿ, ಕೊಳವೆ ಬಾವಿಗಳಿಂದ ನೀರಾವರಿ ಆಗುತ್ತಿರುವ ಒಟ್ಟು ಭೂಮಿ 63,375 ಹೆಕ್ಟೇರ್ ಅಂದರೆ ಜಿಲ್ಲೆಯಲ್ಲಿ ನೀರಾವರಿಗೆ ಒಳಪಟ್ಟಿರುವ ಭೂಮಿ ಅತಿ ಕಡಿಮೆ. ಅಂತರ್ಜಲ ಕಡಿಮೆಯಾಗುತ್ತಿರುವ ಈ ಸಂದರ್ಭದಲ್ಲಿ ಮುಂಬರುವ ದಿನಗಳಲ್ಲಿ ನೀರಾವರಿಗೆ ಒಳಪಡುವ ಕೃಷಿ ಯೋಗ್ಯವಾದ ಭೂಮಿ ಕಡಿಮೆಯಾಗಿ ಇಡೀ ಜಿಲ್ಲೆಯ ಆರ್ಥಿಕ ಪರಿಸ್ಥಿತಿ ಗಂಭೀರವಾಗಿ ಜಿಲ್ಲೆ ಜನಜೀವನ ಅಧೋಗತಿಯಾಗುತ್ತದೆ.

ಒಂದು ಕಡೆ ಕೃಷಿ ನೀರಿನ ಕೊರತೆ ಇನ್ನೊಂದು ಕಡೆ ಕುಡಿಯುವ ನೀರಿಗೆ ಹಾಹಾಕಾರ, ಇದೆಲ್ಲಕ್ಕಿಂತ ಮುಖ್ಯವಾಗಿ ಅಂತರ್ಜಲ ನೀರಿನ ಮಟ್ಟ ಕುಸಿತ ಈ ಮೂರು ಗಂಭೀರ ಸಮಸ್ಯೆಗಳಿಂದ ಇಡೀ ಜಿಲ್ಲೆ ಅವಸಾನದ ಅಂಚಿಗೆ ಹೋಗುವುದರಲ್ಲಿ ಯಾವುದೇ ಸಂಶಯವಿಲ್ಲ. ಹಾಗಾದರೆ ಮುಂದಿನ ದಾರಿ ಯಾವುದು?

ಹೋರಾಟ ಒಂದೇ ದಾರಿ

ಕೋಲಾರ ಜಿಲ್ಲೆ ಹಲವಾರು ಪ್ರಗತಿಪರ ಚಳುವಳಿಗಳಿಗೆ ಮತ್ತು ಚರಿತ್ರಾರ್ಹ ಹೋರಾಟಗಳಿಗೆ ನೆಲೆಗಟ್ಟನ್ನು ಕೊಟ್ಟಿದೆ. 1952 ರಲ್ಲಿ ನಡೆದ ಜೋಡಿ ಇನಾಂತಿ ರದ್ದತಿಯ ಹೋರಾಟ ಜಿಲ್ಲೆಯಲ್ಲಿ ಪ್ರಾರಂಭವಾಗಿ ಇಡೀ ರಾಜ್ಯದಲ್ಲಿ ವ್ಯಾಪಿಸಿ ಕಡೆಗೆ ರೈತರಿಗೆ ಭೂಮಿಯನ್ನು ಕೊಡುವಂತಹ ಗೇಣಿ ಕಾಯ್ದೆಯನ್ನು ರಾಜ್ಯದಲ್ಲಿ ತರಲು ಸಾಧ್ಯವಾಯಿತು ಮತ್ತು ಈ ಹೋರಾಟ ಶಿವಮೊಗ್ಗ ಜಿಲ್ಲೆಯಲ್ಲಿ ನಡೆದ ಕಾಗೋಡು ಸತ್ಯಾಗ್ರಹಕ್ಕೆ ಸ್ಫೂರ್ತಿಯನ್ನು ನೀಡಿತು. 1972-73 ರಲ್ಲಿ ನಡೆದ ಭೂಗ್ರಹಣ ಚಳುವಳಿಯು ರಾಜ್ಯದಾದ್ಯಂತ ವ್ಯಾಪಿಸಿ ಲಕ್ಷಾಂತರ ಎಕರೆ ಭೂಮಿ ಭೂಹೀನರಿಗೆ ದೊರೆಯುವಂತಾಯಿತು. ಇದರ ಜೊತೆಗೆ ಅನೇಕ ಪ್ರಗತಿಪರ ಸಂಘಟನೆಗಳು ನಡೆಸಿದ ಪ್ರಗತಿಪರ ಹೋರಾಟಗಳು ಇಡೀ ರಾಜ್ಯಕ್ಕೆ ಹೋರಾಟಗಳ ಸ್ಫೂರ್ತಿಯನ್ನು ನೀಡಿದೆ. ಹಾಗಾಗಿ ಇದು ನಮ್ಮ ಜಿಲ್ಲೆಯ ಅಸ್ತಿತ್ವದ ಪ್ರಶ್ನೆಯಾದ ಕಾರಣ ಇಂದು ಅಳಿವು ಉಳಿವಿನ ಹೋರಾಟವನ್ನು ನಡೆಸಬೇಕಾಗಿದೆ.



ನೀರು ಇಂದು ಕೋಲಾರ ಜಿಲ್ಲೆಯ ಕೂಗು. ಈ ಕೂಗು ಆಡಳಿತ ನಡೆಸುವ ಪ್ರಭುಗಳ ಕಿವಿಗೆ ತಲುಪಬೇಕಾಗಿದೆ. ಈ ಯೋಜನೆ ಜಾರಿಯಾಗಬೇಕಾದರೆ ಕನಿಷ್ಠ 15 ಸಾವಿರ ಕೋಟಿ ರೂ.ಗಳು ಬೇಕಾಗುತ್ತದೆ. ಒಂದು ರಾಜ್ಯಸರ್ಕಾರಕ್ಕೆ ಇದು ದೊಡ್ಡ ಮೊತ್ತವೇನೂ ಅಲ್ಲ. ಆದರೆ ಇದಕ್ಕೆ ಬಲಿಷ್ಠ ರಾಜಕೀಯ ಇಚ್ಛಾ ಶಕ್ತಿ ಇರಬೇಕಾಗುತ್ತದೆ. ಈ ರಾಜಕೀಯ ಇಚ್ಛಾ ಶಕ್ತಿಯು ಸರ್ಕಾರಗಳಿಗೆ ಬರಬೇಕಾದರೆ ಬಲಿಷ್ಠವಾದ ಕೂಗನ್ನು ಹಾಕಬೇಕಾಗುತ್ತದೆ. ಕಿವುಡು ಸರ್ಕಾರಗಳಿಗೆ ಕೇಳಿಸಬೇಕಾದರೆ ಸ್ವಲ್ಪ ಜೋರಾಗಿ ಕೂಗು ಹಾಕಬೇಕು. ಆದ್ದರಿಂದ ಜಿಲ್ಲೆಯ ಸಮಸ್ತ ಜನರೂ ಯಾವುದೇ ಬೇಧ ಭಾವವನ್ನು ಇಟ್ಟುಕೊಳ್ಳದೇ ಚರಿತ್ರಾರ್ಹವಾದ ಮತ್ತು ಮುಂದಿನ ಪೀಳಿಗೆಗೆ ಕೊಡುಗೆ ಆಗಬಹುದಾದಂತಹ ಈ ಹೋರಾಟದಲ್ಲಿ ಭಾಗಿಯಾಗಿ ಹೋರಾಟವನ್ನು ಯಶಸ್ಸುಗೊಳಿಸಬೇಕಾಗಿದೆ.

ಹಲವು ಸಲಹೆ ಸೂಚನೆಗಳು

ಜಿಲ್ಲೆಯಲ್ಲಿನ ಕೃಷಿ ಮತ್ತು ಶುದ್ಧ ಕುಡಿಯುವ ನೀರಿಗೆ ಇರುವ ಮಾರ್ಗಗಳು ಮತ್ತು ಪರಿಹಾರಗಳ ಬಗ್ಗೆ ಹಲವಾರು ಸೂಚನೆಗಳು ಮತ್ತು ಸಲಹೆಗಳು ಕೇಳಿಬರುತ್ತಿವೆ. ಇವುಗಳ ಸಾಧ್ಯಾಸಾಧ್ಯತೆಗಳನ್ನು ನಾವು ಪರಿಶೀಲಿಸಬೇಕಾಗಿದೆ. ಈಗಾಗಲೇ ಕರ್ನಾಟಕ ಸರ್ಕಾರದ ನಿವೃತ್ತ ಇಂಜಿನಿಯರ್ ಮತ್ತು ನೀರಾವರಿ ತಜ್ಞ ಡಾ.ಪರಮಶಿವಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದ್ದು ಅವರು ದಿನಾಂಕ 13-03-2001 ರಂದು ಒಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಆ ವರದಿಯ ಪ್ರಕಾರ ಮಳೆ ಬಂದಾಗ ಪಶ್ಚಿಮ ಘಟ್ಟಗಳಲ್ಲಿ ಬಿದ್ದ ನೀರು ನೇತ್ರಾವತಿ ಮತ್ತು ಇತರ ನದಿಗಳ ಮೂಲಕ ಅರಬ್ಬಿ ಸಮುದ್ರಕ್ಕೆ ವ್ಯರ್ಥವಾಗಿ ಹರಿದು ಹೋಗುವ 446-62 ಟಿ.ಎಂ.ಸಿ ನೀರಿನಲ್ಲಿ 168.46 ಟಿ.ಎಂ.ಸಿ ನೀರನ್ನು ಗಾರ್ಲ್ಯಾಂಡ್ ಕೆನಾಲ್‌ಗಳ ಮೂಲಕ ಪೂರ್ವಕ್ಕೆ ಹರಿಸಿದರೆ ನಿರಂತರ ಬರಗಾಲಕ್ಕೆ ತುತ್ತಾಗುತ್ತಿರುವ ಮಧ್ಯ ಕರ್ನಾಟಕದ ಏಳು ಜಿಲ್ಲೆಗಳಿಗೆ ಮತ್ತು ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ಸಹ ಒದಗಿಸಬಹುದು. ಆ ಏಳು ಜಿಲ್ಲೆಗಳ ಪೈಕಿ ಕೋಲಾರ ಜಿಲ್ಲೆಯು ಒಂದಾಗಿದೆ. ಉಳಿದ ಜಿಲ್ಲೆಗಳಾದ ಬೆಂಗಳೂರು ಗ್ರಾಮಾಂತರ, ತುಮಕೂರು, ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ, ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕುಗಳಿಗೆ ಕುಡಿಯುವ ನೀರು ಮತ್ತು ಅಂತರ್ಜಲ ಹೆಚ್ಚಿಸುವುದರೊಂದಿಗೆ ಆ ನೀರನ್ನು ಕೃಷಿಗೂ ಉಪಯೋಗಿಸಬಹುದಾಗಿದೆ. ಆ ವರದಿಯನ್ನು ಸರ್ಕಾರ ತಾತ್ವಿಕವಾಗಿ ಒಪ್ಪಿ 2001-02ನೇ ಸಾಲಿನ ಆಯವ್ಯಯದಲ್ಲಿ ಇದನ್ನು 5 ಕೋಟಿಗಳಿಗೆ ಇಳಿಸಲಾಗಿದೆ. ಈಗ ಲಭ್ಯವಾಗಿರುವ ಮಾಹಿತಿಯ ಪ್ರಕಾರ ಸರ್ವೆ ಮಾಡಲು ಟೆಂಡರ್ ಫಾರಂಗಳನ್ನು ಆಹ್ವಾನಿಸಲಾಗಿದೆ.

ಇರಾಕ್ ಮೇಲೆ ಅಮೇರಿಕನ್ ಅತಿಕ್ರಮಣ ಮತ್ತು ಯುದ್ಧದಿಂದ ಜಗತ್ತು ಕರಾಳ ಯುಗಕ್ಕೆ ಅಡಿ ಇಡುತ್ತಿದೆ. ಸೋವಿಯತ್ ಒಕ್ಕೂಟ ಮತ್ತು ಸಮಾಜವಾದಿ ಬಣ ನಿರ್ಣಾಯಕ ಶಕ್ತಿಯಾಗಿಲ್ಲದಿರುವುದು ಇದಕ್ಕೆ ಮುಖ್ಯ ಕಾರಣ. ಆದರೆ ಸಮಾಜವಾದಿ ಬಣ ನಿರ್ಣಾಯಕ ಶಕ್ತಿಯಾಗಿದ್ದಾಗ (1945 ರಿಂದ 1990) ಪರಿಸ್ಥಿತಿ ಹೀಗಿತ್ತು? ಆ ಅವಧಿಯಲ್ಲಿ ಅಮೇರಿಕಾದ ಸಾಮ್ರಾಜ್ಯಶಾಹಿ ಅತಿಕ್ರಮಣದ ಮೇಲೊಂದು ನೋಟ ಬೀರಿದರೆ, ಭಯವಾಗುತ್ತದೆ. ಇನ್ನು ಮುಂದಿನ ಪರಿಸ್ಥಿತಿ ಹೇಗಿರಬಹುದು ಅಂತ. ಯಾವುದೇ ದೇಶದ ಜನ ತಮ್ಮ ಸಂಪನ್ಮೂಲಗಳ ಮೇಲೆ ಹಕ್ಕು ಸಾಧಿಸಿದಾಗ, ತಮಗೆ ಬೇಕಾದ ಸ್ವತಂತ್ರ ಸಾಮಾಜಿಕ ವ್ಯವಸ್ಥೆ ರೂಪಿಸಲು ಪ್ರಯತ್ನಿಸಿದಾಗ, ಅಮೇರಿಕಾದ ಯಜಮಾನಿಕೆ ಒಪ್ಪದ ಸರ್ಕಾರ ಸ್ಥಾಪಿಸಿದಾಗ, ಸ್ವತಂತ್ರ ಬೆಳವಣಿಗೆ ಬಯಸಿದಾಗಲೆಲ್ಲಾ ಅಮೆರಿಕಾ ಆ ಜನತೆಯ ಮೇಲೆ ಯುದ್ಧ ಹೂಡಿದೆ. ಅಲ್ಲಿ ನರಮೇಧ ಮಾಡಿಯಾದರೂ ಸರ್ಕಾರ, ವ್ಯವಸ್ಥೆ ಬದಲಾಯಿಸಿದೆ. ಕೆಲವು ಬಾರಿ ವಿಫಲವಾಗಿದೆ. ಹಲವು ಬಾರಿ ಸಫಲವಾಗಿದೆ. ಅಮೇರಿಕಾದ ಈ ಅತಿಕ್ರಮಣಗಳ ಚರಿತ್ರೆಯನ್ನು ತಿಳಕೊಳ್ಳುವುದು ಅಗತ್ಯ. ಮುಂದಿನ ಅವಧಿಯಲ್ಲಿ ಅದಕ್ಕೆ ಪ್ರತಿರೋಧ ಒಡ್ಡಿ ಸೋಲಿಸಲು ಅಂತಹ ಒಂದು ಹಿನ್ನೋಟ ಇಲ್ಲಿದೆ.

ಅಮೇರಿಕನ್ ಸಾಮ್ರಾಜ್ಯಶಾಹಿಯ ಯುದ್ಧ ನರಬಲಿಗಳ ಶತಕ

ಅಮೇರಿಕದ ಯುದ್ಧಕೋರತನ, ಅತಿಕ್ರಮಣಕಾರಿ ನೀತಿ, ಜನತೆಯ ಸಾರ್ವಭೌಮತ್ವ ಹೊಸಕಿ ಹಾಕುವ ಜಾಯಮಾನ ಹೊಸದಲ್ಲ. ನೂರು ವರ್ಷಗಳ ಹಿಂದೆ ಸ್ಪೈನ್ ಮೇಲೆ ಯುದ್ಧ ಹೂಡಿ ಫಿಲಿಫೈನ್ಸ್ ಮತ್ತು ಕ್ಯೂಬಾವನ್ನು ಕಸಿದುಕೊಂಡು, ತನ್ನ ವಸಾಹತುಗಳನ್ನಾಗಿ ಮಾಡಿಕೊಂಡಿತ್ತು. ಪಿಲಿಪ್ಪೈನ್ಸ್‌ನಲ್ಲಿ ಸ್ಪೈನ್‌ನ್ನು ಸೋಲಿಸಲು ಅಲ್ಲಿನ ಗೆರಿಲ್ಲಾ ಸ್ವಾತಂತ್ರ ಹೋರಾಟಗಾರರನ್ನು ಬಳಸಿ, ಅವರಿಗೆ ಆಮೇಲೆ ಮೋಸಮಾಡಿತು. ಗೆರಿಲ್ಲಾ ಹೋರಾಟಗಾರರು ತಮ್ಮ ಸ್ವಾತಂತ್ರ್ಯ ಹೋರಾಟವನ್ನು ಅಮೇರಿಕನ್ನರ ವಿರುದ್ಧ ತಿರುಗಿಸಿದಾಗ ಅದನ್ನು ಅತ್ಯಂತ ಕ್ರೂರ ರೀತಿಯಲ್ಲಿ ಹತ್ತಿಕ್ಕಲಾಯಿತು. 70 ಸಾವಿರಕ್ಕೂ ಹೆಚ್ಚು ಅಮೇರಿಕನ್ ಸೈನಿಕರು ಮೂರು ವರ್ಷಗಳ ಕಾಲ ಯುದ್ಧದ ನಂತರ ಮಾತ್ರವೇ ಅದು ಸಾಧ್ಯವಾಯಿತು. ಆದರೆ ಇದಕ್ಕೆ ಎರಡು ಲಕ್ಷ ಫಿಲಿಪ್ಪೈನ್‌ಗಳು ಬಲಿಯಾದರು.


ಒಂದೇ ದಿನದಲ್ಲಿ ಒಂದುವರೆ ಲಕ್ಷ ನರಬಲಿಯಿಂದ ಸೂಪರ್ ಪವರ್

ಅಮೇರಿಕದ ಸೂಪರ್ ಪವರ್ ಆಗಿ ಕಾಲಿರಿಸಿದ್ದೇ ಅದ್ವಿತೀಯ ಭೀಕರ ನರಮೇಧದಿಂದ. ಹಿರೋಸಿಮಾ, ನಾಗಸಾಕಿ ಮೇಲೆ ಅಣುಬಾಂಬು ಹಾಕಿ ಒಂದುವರೆ ಲಕ್ಷ ಜನ ಒಂದೇ ದಿನದಲ್ಲಿ ಸುಟ್ಟು ಬೂದಿಯಾದರು. ಲಕ್ಷಾಂತರ ಜನ ಆಮೇಲೆ ಈಗಿನವರೆಗೂ ಅದರ ಪರಿಣಾಮದಿಂದ ನರಳುತ್ತಿದ್ದಾರೆ. ಇಂದಿಗೂ ನಿಜವಾದ ನರಮೇಧದ ಶಸ್ತ್ರಾಸ್ತ್ರವನ್ನು ಬಳಸಿದ ಏಕಮಾತ್ರ ದೇಶ ಅಮೇರಿಕಾ. ಎರಡನೇ ಮಹಾಯುದ್ಧದ ಅಂತ್ಯ ಮತ್ತು ಯುರೋಪಿನಲ್ಲಿ ಮತ್ತು ಏಶ್ಯಾದಲ್ಲಿ ಸಮಾಜವಾದಿ ಬಣದ ಉದಯದಿಂದ ಉತ್ಸಾಹಿತವಾದ ಮೂರನೇ ಜಗತ್ತಿನ ದೇಶಗಳು ರಾಷ್ಟ್ರೀಯ ಸ್ವಾತಂತ್ರ್ಯದ ಹೋರಾಟ ಹತ್ತಿಕ್ಕಲು ಅಮೇರಿಕಾ ಹಲವು ಬಾರಿ ಈ ನರಮೇಧಗಳನ್ನು ಪುನಃ ಮಾಡಿತು. ನೇರವಾಗಿ ಮಿಲಿಟರಿಯಾಗಿ ಅತಿಕ್ರಮಣಮಾಡಿತು.

ಕೋರಿಯಾ ವಿಯಟ್ನಾಮ್‌ನಲ್ಲಿ ಸೋಲು

ಕೋರಿಯಾ ಯುದ್ಧ ಅಮೇರಿಕ ನಡೆಸಿದ ಯುದ್ಧಗಳಲ್ಲಿ ಅತ್ಯಂತ ಕ್ರೂರವಾದದ್ದು. ಅತ್ಯಂತ ಹೆಚ್ಚಿನ ನರಬಲಿ ತೆಗೆದುಕೊಂಡದ್ದು. 10 ಲಕ್ಷದಿಂದ 30 ಲಕ್ಷ ಜನ ಅಮೇರಿಕಾದ ಯುದ್ಧಕೋರತನಕ್ಕೆ ಬಲಿಯಾದರೂ ಕೋರಿಯಾದಲ್ಲಿ ಕಮ್ಯುನಿಸ್ಟರು ಅಧಿಕಾರಕ್ಕೆ ಬರುವುದನ್ನು ತಡೆಯಲು ಅಮೇರಿಕಾ ಯಾವುದಕ್ಕೂ ಹೇಸಲಿಲ್ಲ. ಆದರೆ ಅದನ್ನು ಪೂರ್ಣ ತಡೆಯುವುದು ಸಾಧ್ಯವಾಗಲಿಲ್ಲ. ಕೋರಿಯಾವನ್ನು ವಿಭಜಿಸಿ ಒಂದು ಭಾಗವನ್ನು ತನ್ನ ವಸಾಹತುವಿನಂತೆ ಮಾಡುವುದರಲ್ಲಿ ಮಾತ್ರ ಸಾಧ್ಯವಾಯಿತು. 1950-53ರವರೆಗೆ ನಡೆದ ಕೋರಿಯಾ ಯುದ್ಧ ಮೊದಲ ಚಾರಿತ್ರಿಕ ಅಮೇರಿಕನ್ ಸೋಲು ಸಹ. ಇಡೀ ದಕ್ಷಿಣ ಪೂರ್ವ ಏಶ್ಯಾ (ಇಂಡೋ-ಚೀನಾವೆಂದು ಕರೆಯಲಾಗುವ ಪ್ರದೇಶ)ದಲ್ಲಿ





ಕಮ್ಯುನಿಸಂನ ವಿಜಯ ತಡೆಯಲು ಈ ಪ್ರದೇಶದ ಹೆಚ್ಚುಕಡಿಮೆ ಎಲ್ಲಾ ದೇಶಗಳಲ್ಲಿ ಯುದ್ಧ ಹೂಡಿದ, ಸರ್ಕಾರಗಳನ್ನು ಬದಲಾಯಿಸಿತು. ನರಬಲಿ ನಡೆಸಿತು 1965 ರಿಂದ 1974ರ ವರೆಗೆ ನಡೆದ ವಿಯೆಟ್ನಾಂ ಮೇಲಿನ ಯುದ್ಧ ಎರಡುವರೆಯಿಂದ ಮೂರುವರೆ ಲಕ್ಷ ವಿಯೆಟ್ನಾಂ ಜನರನ್ನು ಬಲಿತೆಗೆದುಕೊಂಡು ವಿಯೆಟ್ನಾಮನ್ನು ಸೋಲಿಸಲು ಎರಡನೇ ಮಹಾಯುದ್ಧದಲ್ಲಿ ಬಳಸಿದ್ದಕ್ಕೂ ಹೆಚ್ಚಿನ ಬಾಂಬುಗಳನ್ನು ಬಳಸಿದರು. ಅಣ್ವಸ್ತ್ರ ಬಿಟ್ಟು ಉಳಿದೆಲ್ಲಾ ಅಸ್ತ್ರ ಗಳನ್ನು ಬಳಸಿತು. ಆದರೂ ಸೋಲಾಯಿತು. ಇದೇ ರೀತಿಯಲ್ಲಿ ಕಾಂಬೋಡಿಯಾದಲ್ಲಿ 1955ರಿಂದ 1975ರವರೆಗೆ ಹಲವು ಬಾರಿ ಮಧ್ಯ ಪ್ರವೇಶ ಮಾಡಿ 10 ರಿಂದ 20 ಲಕ್ಷ ಜನರ ಬಲಿ ತೆಗೆದುಕೊಂಡಿತು. ಲಾವೋಸ್‌ನಲ್ಲಿ 5 ಲಕ್ಷ ಜನರ (1957 ರಿಂದ 1973) ಬಲಿ ತೆಗೆದುಕೊಂಡಿತು. ಇಂಡೋನೇಶ್ಯಾದಲ್ಲಿ ಸುಕಾರ್ನೋರವರ ಸ್ವತಂತ್ರ ನೀತಿಯಿಂದ ಕುಪಿತವಾದರೂ, 1965ರ ವರೆಗೆ ತಮ್ಮ ಕೈಗೊಂಬೆ ಸರ್ಕಾರ ಸ್ಥಾಪಿಸಲು ಅಮೇರಿಕ ಸೋತಿತು.

ಆದರೆ 1966ರಲ್ಲಿ ಪ್ರಜಾಪ್ರಭುತ್ವ ಕೊನೆಯಾಗಿಸಿ ಜನರಲ್ ಸುಹಾರ್ತೋ ಎಂಬ ಮಿಲಿಟರಿ ಸರ್ವಾಧಿಕಾರಿಯನ್ನು ಅಧಿಕಾರಕ್ಕೆ ತರಲು ಸಫಲವಾಯಿತು. ಇದನ್ನು ಸಾಧಿಸಲು, ಇಂಡೋನೇಶ್ಯಾದಲ್ಲಿ ಆಗಿನ ಅತ್ಯಂತ ದೊಡ್ಡ ರಾಜಕೀಯ ಶಕ್ತಿಯಾಗಿದ್ದ ಕಮ್ಯುನಿಸ್ಟರ ರಕ್ತದ ಹೊಳೆ ಹರಿಸಿದರು. ಸಿಐಎ ಮತ್ತು ಜನರಲ್ ಸುಹಾರ್ತೋರ ಸೈನ್ಯ ಲಕ್ಷಕ್ಕೂ ಹೆಚ್ಚು ಕಮ್ಯುನಿಸ್ಟರು ಸೇರಿದಂತೆ 10 ಲಕ್ಷದಷ್ಟು ಕಮ್ಯುನಿಸ್ಟ್ ಮತ್ತು ಅವರ ಒಡನಾಡಿಗಳ ಕಗ್ಗೊಲೆ ಮಾಡಿದರು. ಕೆಲವು ವಾರಗಳ ಅವಧಿಯಲ್ಲಿ ಇದು ಜಗತ್ತಿನಲ್ಲೇ ಅತ್ಯಂತ ದೊಡ್ಡ ಕಗ್ಗೊಲೆ ಎಂದು ಕುಪ್ರಸಿದ್ಧವಾಗಿದೆ.

ಹಿತ್ತಲಲ್ಲೂ ರಕ್ತದ ಹೊಳೆ

ಅಮೇರಿಕದ ಮಧ್ಯಪ್ರವೇಶ, ಯುದ್ಧಕೋರತನಕ್ಕೆ ಬಲಿಯಾದದ್ದು ಏಶ್ಯಾ ಮಾತ್ರವಲ್ಲ, ದಕ್ಷಿಣ ಅಮೇರಿಕಾವನ್ನು ಅಮೇರಿಕ ಯಾವಾಗಲೂ ತನ್ನ ಹಿತ್ತಲು ಎಂದು ಪರಿಗಣಿಸಿತ್ತು. ಸೂಪರ್ ಪವರನ್ನು ಅದರ ಹಿತ್ತಲಲ್ಲಿ ಸವಾಲು ಹಾಕಿದವರಿಗೆ ಭಾರಿ ಶಿಕ್ಷೆಕಾದಿತ್ತು. ಕ್ಯೂಬಾದ ಕ್ರಾಂತಿಯಿಂದ ಬೆದರಿದ್ದ ಅಮೇರಿಕಾದ ಆಳುವ ವರ್ಗ, ಇನ್ನಾವ ದೇಶವನ್ನು ಆ ದಾರಿಯಲ್ಲಿ ಹೋಗಲು ಬಿಡುವುದಿಲ್ಲ ಎಂದು ಪಣ ತೊಟ್ಟಿತ್ತು. ಗ್ವಾಟೆಮಾಲಾದಲ್ಲಿ 1950ರಿಂದ ಕೊಲಂಬಿಯಾದಲ್ಲಿ 1960ರಿಂದ, ಎಲ್. ಸಾಲ್ವಡೋರ್‌ನಲ್ಲಿ 1980ರಿಂದ ಈಗಿನ ವರೆಗೂ ಕಗ್ಗೊಲೆ ಮುಂದುವರೆದಿದೆ. ಗ್ವಾಟೆಮಾಲಾದಲ್ಲಿ ಎರಡು ಲಕ್ಷ ಕೊಲಂಬಿಯಾದಲ್ಲಿ 67 ಸಾವಿರ, ಎಲ್. ಸಾಲ್ವಡೋರ್‌ನಲ್ಲಿ 75 ಸಾವಿರ ಜನರ ಕಗ್ಗೊಲೆಯಾಗಿದೆ. ಕೊಲೆಗಡುಕರು ಸಿಐಎ ಮತ್ತು ಅದರಿಂದ ತರಬೇತಿ ಧನ ಶಸ್ತ್ರಸ್ತ್ರ ಸಹಾಯ ಪಡೆದ ಸ್ಥಳೀಯ ಸರ್ವಾಧಿಕಾರಿ ಶಕ್ತಿಗಳು. ಆದರೂ ಇದುವರೆಗೆ ಪ್ರಗತಿಪರ ಶಕ್ತಿಗಳನ್ನು ಪೂರ್ಣವಾಗಿ ದಮನ ಮಾಡಲಾಗಿಲ್ಲ.



ಆಫ್ರಿಕಾದಲ್ಲೂ ಜನತೆಯನ್ನು ಸ್ವತಂತ್ರ ಹಾದಿಯಲ್ಲಿ ಹೋಗಲು ಬಿಟ್ಟಿಲ್ಲ. ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ವ್ಯವಸ್ಥೆಯನ್ನು ದಶಕಗಳ ಕಾಲ ಕಾಪಾಡುವುದರಲ್ಲಿ ಅಮೇರಿಕಾದ ಪಾತ್ರವೂ ಇದೆ. ಕಾಂಗೋದಲ್ಲಿ ಪಾಟ್ರಿಕ್ ಲೂಮುಂಬಾನ ಕೊಲೆ ಸಿಐಎನ ನೇರ ಕೈವಾಡ ಇತ್ತು. ಇತ್ತೀಚೆಗೆ ಸೋಮಾಲಿಯಾದಲ್ಲಿ ಸರ್ವಾಧಿಕಾರಿಯಿಂದ ಜನರನ್ನು ರಕ್ಷಿಸುವ ಹಸಿದ ಜನರಿಗೆ ಆಹಾರ ಒದಗಿಸುವ ಮಾನವೀಯ ಕೆಲಸದಲ್ಲಿ ಅಮೇರಿಕ 10 ಸಾವಿರ ನಾಗರಿಕರ ರಕ್ತ ಹರಿಸಿತು. ಲಿಬ್ಯಾದಲ್ಲಿ ಪದೇ ಪದೇ ಮಧ್ಯಪ್ರವೇಶ ನಡೆಸಲು ಪ್ರಯತ್ನಿಸಿದೆ. ಅರಬ್ ಜಗತ್ತಿನಲ್ಲಂತೂ ತೈಲದಿಂದಾಗಿ ಮೊದಲಿಂದಲೂ ತನ್ನ ನೇರ ಹತೋಟಿಯಲ್ಲಿಡಲು ಪ್ರಯತ್ನಿಸಿದೆ.

1953ರಲ್ಲಿ ಇರಾನ್‌ನಲ್ಲಿ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಪ್ರಧಾನಮಂತ್ರಿಯನ್ನು ಕ್ಷಿಪ್ರಕ್ರಾಂತಿ ಮಾಡಿ ಕಿತ್ತೊಗೆಯಿತು. 1963ರಲ್ಲಿ ಇರಾಕ್‌ನ ನಾಯಕನನ್ನು ಕೊಲೆಮಾಡಿತು. ಕೊಲ್ಲಿ ದೇಶಗಳಲ್ಲಿ




ಪ್ರಜಾಪ್ರಭುತ್ವ ಬರದೆ, ಕೈಗೊಂಬೆ ಶೇಕ್‌ಗ[ಳು] ಆಳುವಂತೆ ಹಣದ ಹೊಳೆ ಹರಿಸಿತು. ಪ್ಯಾಲೆಸ್ತೈನ್ ದುರಂತ ಕಥೆ, ಇಸ್ರೇಲನ್ನು ಪ್ರಾದೇಶಿಕ ಸೂಪರ್ ಪವರ್ ಮಾಡುವುದರಲ್ಲಿ ಅಮೇರಿಕಾ[ದ] ಪಾತ್ರವಂತೂ ಎಲ್ಲರಿಗೂ ಗೊತ್ತಿದ್ದದ್ದೇ.

ಯುರೋಪಿನಲ್ಲಿ...

ಯುರೋಪಿನಲ್ಲೂ ಅಮೇರಿಕ ಎರಡ[ನೇ] ಮಹಾಯುದ್ಧ ನಂತರ ಜನ ತಮ್ಮ ಭವಿಷ್ಯವ[ನ್ನು] ತಮ್ಮ ಕೈಗೆ ತೆಗೆದುಕೊಳ್ಳದ[ಂತೆ] ಎಚ್ಚರವಹಿಸಿದೆ. 1947-4[8] ಚುನಾವಣೆಗಳಲ್ಲಿ ಕಮ್ಯುನಿ[ಸ್ಟ್] ಪಕ್ಷಗಳು ಅಧಿಕಾರಕ್ಕೆ ಬರ[ದಂತೆ] ಫ್ರಾನ್ಸ್ ಮತ್ತು ಇಟಲಿ[ಯ] ರಾಜಕೀಯದಲ್ಲಿ ನೇ[ರ] ಮಧ್ಯಪ್ರವೇಶಮಾಡಿತು. 70[ರ] ದಶಕದ ವರೆವಿಗೂ ಇಂತ[ಹ] ಪ್ರಯತ್ನ ಮುಂದುವರೆಸಿ[ತು]. ಯುರೋಪಿನಲ್ಲಿ 1966ರ[ಲ್ಲಿ] ಗ್ರೀಸ್‌ನಲ್ಲಿ ಮಿಲಿಟರಿ ಕ್ಷಿಪ್ರ ಕ್ರಾಂತಿ ಮತ್ತು ಆ ಮೇ[ಲೆ] ನಡೆದ ದಮನ ಚಕ್ರದಲ್ಲಿ 10 ಸಾವಿರ ಜನರ ಕಗ್ಗೊ[ಲೆ] ಯಲ್ಲಿ ಅಮೇರಿಕಾದ ಪಾತ್ರ ಈಗ ಬಹಿರಂಗ ಸ[ತ್ಯ].

ಸಮಾಜವಾದಿ ದೇಶಗಳಲ್ಲಿ ಸರ್ಕಾರ, ವ್ಯ[ವಸ್ಥೆ] ಬದಲಾಯಿಸಲು ಅಮೇರಿಕಾ ಪಟ್ಟ ಶ್ರ[ಮ] ಅಷ್ಟಿಷ್ಟಲ್ಲ. ಆಂತರಿಕ ದಂಗೆ ಎಬ್ಬಿಸಲು ಪ್ರಯತ್ನಗಳನ್ನು ಮಾಡಲಾಯಿತು. ಇತ್ತೀ[ಚೆಗೆ] ಯುಗೋಸ್ಲೋವಿಯದಲ್ಲಿ ಜನಾಂಗೀ[ಯ] ಆಂತಕಲಹ ಹಟ್ಟುಹಾಕಿ ಮತ್ತು ಅದರ ಮೇ[ಲೆ] ನಡೆಸಿದ ದಾಳಿಯಲ್ಲಿ ಎರಡುವರೆ ಲಕ್ಷಕ್ಕೂ ಹೆ[ಚ್ಚು] ಜನ ಬಲಿಯಾದರು. ಅಫಘಾನಿಸ್ತಾನ[ದಲ್ಲಿ] 1979ರಿಂದ ಈವರೆಗೆ ಮುಸ್ಲಿ[ಂ] ಮೂಲಭೂತವಾದಿಗಳನ್ನು ಬಳಸಿ ಅಮೇ[ರಿಕ] ನಡೆಸಿದ ಯಾದವೀ ಕಲಹದಲ್ಲಿ 10 ಲಕ್ಷಕ್ಕೂ ಹೆ[ಚ್ಚು] ಜನ ಬಲಿಯಾಗಿದ್ದಾರೆ.

ಅಮೇರಿಕಾದ ಸಾಮ್ರಾಜ್ಯಶಾಹಿ ಸ್ವರೂ[ಪ], ಯುದ್ಧಕೋರತನ, ಜನವಿರೋಧಿ ಇವೆಲ್ಲದರಿಂದ ಸ್ಪಷ್ಟ.



ಹೇಳುವ ಕಥೆ


ಅಮೆರಿಕ : ನಿರುದ್ಯೋಗ ಭತ್ಯೆ ಕಳೆದುಕೊಂಡ 1 ದಶಲಕ್ಷ ಜನ

ಅಮೆರಿಕದ ಕಾಂಗ್ರೆಸ್ ಈ ಭತ್ಯೆಗಳ ಮುಂದುವರಿಕೆಗೆ ಸ[ಹಿ] ಹಾಕದೇ ಇರುವುದರಿಂದ ಒಂದು ದಶಲಕ್ಷ ಜನ ನಿರುದ್ಯೋಗ ಭತ್ಯೆಯ ಅನುಕೂ[ಲ] ಕಳೆದುಕೊಳ್ಳುತ್ತಿದ್ದಾರೆ.

ಜೊ ಅನ್ನೆ ಹರ್ಲ್ಸ್‌ಟನ್ ಎಂಬಾಕೆಯ ಉದಾಹರಣೆ ತೆಗೆದುಕೊಳ್ಳಿ. ಈಕೆ ಸ್ನಾತಕೋ[ತ್ತರ] ಪದವೀಧರೆ. ಶಿಕ್ಷಣ ಕ್ಷೇತ್ರದಲ್ಲಿ ಈಕೆಗೆ ಅನುಭವವೂ ಇದೆ. ಆದರೆ ಕಳೆದ ಆರು ತಿಂಗಳಿ[ನಿಂದ] ಈಕೆಗೆ ಉದ್ಯೋಗ ಸಿಗುತ್ತಿಲ್ಲ.

ಅಮೆರಿಕದಲ್ಲಿ ದೇಶಿ ಭದ್ರತೆಗಾಗಿ ಹಣ ಖರ್ಚು ಮಾಡಬೇಕಾಗಿರುವುದರಿಂದ ತಮಗೆ [ಈ] ಪರಿಸ್ಥಿತಿ ಎನ್ನುತ್ತಾರೆ ಈಕೆ. "ಅವರಿಗೆ ಭದ್ರತೆಗಾಗಿ ಹಣ ಬೇಕಾದರೆ ನಮಗೆಲ್ಲ ಉದ್ಯೋಗ ದೊ[ರಕಿ] ನಾವು ತೆರಿಗೆ ಕೊಡುವಂತಾಗಬೇಕು" ಎನ್ನುವುದು ಈಕೆಯ ವಾದ.

ಹೇಗಿದೆ ನೋಡಿ ಅಮೇರಿಕನ್ನರ ಪರಿಸ್ಥಿತಿ.



ಕುರುಡು ಕಾಂಚಾಣ

ಕೆ.ಎಸ್.ಮಣಿ

ಬಡವರಿಗೆ ಉಪವಾಸ ಒಳ್ಳೆಯದು!!!

ಯಾರು ಈ ಉಪದೇಶ ಮಾಡಿದವರು ಎಂದಿರಾ? ಯಾರೂ ನೇರವಾಗಿ ಮಾಡಿಲ್ಲ. ಆದರೆ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಇಂತಹ ದ್ವೊಂದು ಒಳಧೋರಣೆಯನ್ನಂತೂ ಇಟ್ಟುಕೊಂಡಿದೆ. ಏನು ವಿಷಯ ಎಂದಿರಾ?

ಮಳೆ ಇಲ್ಲದೆ ಬರ ಬಂದದ್ದು ಗೊತ್ತಲ್ಲ. ಈಗ ಅಂದಾಜಿನ ಪ್ರಕಾರ ಈ ಸಾಲಿನಲ್ಲಿ ಆಹಾರ ಧಾನ್ಯಗಳ ಉತ್ಪಾದನೆ 28 ದಶಲಕ್ಷ ಟನ್ನುಗಳಷ್ಟು ಕಡಿಮೆ ಆಗಲಿದೆಯಂತೆ. ಕಳೆದ ವರ್ಷದಲ್ಲಿ 212 ದಶಲಕ್ಷ ಟನ್‌ಗಳಷ್ಟು ಆಹಾರ ಧಾನ್ಯ ಉತ್ಪಾದನೆಯಾಯಿತು. ಈ ಸಾರಿ ಅದು 184 ದಶಲಕ್ಷ ಟನ್ನುಗಳಿಗೆ ಇಳಿಯಲಿದೆ. ಈ ಸರ್ಕಾರ ಮಂಡಿಸಿದ ಬಜೆಟ್ ನೋಡಿ. ಬರ ಪರಿಹಾರಕ್ಕೆ ಹಣ ತೆಗೆದಿರಿಸುವ ಗೋಜಿಗೆ ಹೋಗಿಲ್ಲ. ಬೆಲೆಗಳು ದಿನದಿಂದ ದಿನಕ್ಕೆ ಗಗನಕ್ಕೇರುತ್ತ ಹೋದರೆ ಉಪವಾಸ ಬೀಳುವವರಾರು? ದೇಶದ ಬಡಜನತೆ. ಬಿಜೆಪಿಗೇನು ಚಿಂತೆ. ಅಯೋಧ್ಯಾ, ಮಥುರಾ ಇತ್ಯಾದಿ, ಇತ್ಯಾದಿ ಅಂದರಾಯಿತಲ್ಲವೇ?

ರಾಮನ ಭಕ್ತರು ರಾಮನಿಂದ ದೇಶ ಸುಭಿಕ್ಷಗೊಳಿಸುವುದನ್ನು ಕಲಿತು ಬಡವರ ಹೊಟ್ಟೆಗೆ ಹಿಟ್ಟು ಕಾಣಿಸುವುದನ್ನು ಕಲಿತಿದ್ದರೆ? ಬದಲಿಗೆ ಬಡವರ ರಕ್ತ ಹರಿಸುವುದನ್ನು ಅವರು ಕಲಿತಿದ್ದಾರೆ ಅಲ್ಲವೇ?

ಸಣ್ಣ ಉದ್ದಿಮೆಗಳಿಗೆ ಸ್ವರ್ಗದ ದಾರಿ

ಸ್ವರ್ಗದ ದಾರಿ ಎಂದರೆ ಗೊತ್ತಲ್ಲ. ಸಾಯುವ ದಾರಿ ಎಂದೇ ಅದರ ಅರ್ಥ. ಉದಾರೀಕರಣದ ಈ ದಿನಗಳಲ್ಲಿ ಸಣ್ಣ ಉದ್ದಿಮೆಗಳಿಗೆ ಸಿಗುತ್ತಿದ್ದ ನೆರವುಗಳೆಲ್ಲ ಬತ್ತಿ ಹೋಗಿ ಸಾಯುವುದೊಂದೇ ದಾರಿ ಎಂಬಂತಹ ಪರಿಸ್ಥಿತಿ ಮೂಡಿದೆ.

ಹಾಗೆ ಸಣ್ಣ ಉದ್ದಿಮೆಗಳು ಕಡಿಮೆ ಹೂಡಿಕೆಯಲ್ಲಿ ಹೆಚ್ಚು ಉತ್ಪಾದನೆ ಮಾಡುತ್ತವೆ. ಹೆಚ್ಚು ಜನರಿಗೆ ಉದ್ಯೋಗ ನೀಡುತ್ತವೆ. ಆದ್ದರಿಂದಲೇ ಭಾರತದಂತಹ ದೇಶದ ಆರ್ಥಿಕದಲ್ಲಿ ಅವುಗಳಿಗೆ ಆದ್ಯತೆ ನೀಡಬೇಕಾಗಿರುವುದು. ಇಂದು ಈ ಆದ್ಯತೆ ಇಲ್ಲ.

ಅಂತರ್ರಾಷ್ಟ್ರೀಯ ವ್ಯಾಪಾರ ಮಾಲೀಕರ ಸಮೀಕ್ಷೆಯೊಂದರ ಪ್ರಕಾರ ಭಾರತದ ಶೇ 51 ರಷ್ಟು ಕಂಪನಿಗಳು ಹಣಕಾಸು ಬಂಡವಾಳ ವಿಲೀನ, ಮಾರಾಟವನ್ನು ಬಯಸುತ್ತವೆ. ಅಂದರೆ ವ್ಯವಹಾರ ಮುಂದುವರಿಸಲು ಹಣ ಬೇಕು. ಹಣಕಾಸು ಮೂಲಗಳೇ ಇಲ್ಲ. ದೊಡ್ಡ ಕಂಪನಿಗಳೊಂದಿಗೆ ವಿಲೀನದ ದಾರಿಯನ್ನು ಅವು ಹಿಡಿಯಬಹುದು. ದೊಡ್ಡ ಕಂಪನಿಗಳು ಇವುಗಳ ಆಸ್ತಿಗಳಿಗೆ ಮೂರುಕಾಸಿನ ಬೆಲೆ ಕಟ್ಟಿ ವಿಲೀನಗೊಳಿಸಿಕೊಳ್ಳುತ್ತವೆ ಅಥವಾ ಕೊಂಡುಕೊಳ್ಳುತ್ತವೆ.

ಇದರಿಂದ ಆಗುವ ಪರಿಣಾಮಗಳೇನು ಎಂದಿರಾ? ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಾರೆ. ಬೀದಿ ಪಾಲಾಗುತ್ತಾರೆ. ನಿರುದ್ಯೋಗ, ಬಡತನ ಮತ್ತು ಅವುಗಳಿಂದ ಬರುವ ಸಮಸ್ಯೆಗಳೆಲ್ಲ ಹೆಚ್ಚಾಗುತ್ತಾ ಹೋಗುತ್ತವೆ. ಹಲವು ಮಾಲೀಕರು ಬೀದಿಪಾಲಾಗುತ್ತಾರೆ!!

ಹೇಗಿದೆ ಸ್ವರ್ಗದ ದಾರಿ!

ಜಾಗತೀಕರಣ

ಆಕರಣ ಈಕರಣ ಉದಾರೀಕರಣ ,
ಮತ್ತೊಮ್ಮೆ ಭಾರತದ ಸ್ವಾತಂತ್ರ್ಯ ಹರಣ
ಹಿಡಿಯುತ್ತ ಬುಷ್ ಎಂಬ ಅಹಂಕಾರಿ ಚರಣ
ಮಾಡಿದವರು ಸರ್ವತ್ರ ಅಮೇರಿಕಿಕರಣ

ವಿಚಾರಿ

ಉದ್ಯೋಗಗಳನ್ನು ಹೊಸಕಿ....

ಭಾರತದ ಪ್ರಧಾನಮಂತ್ರಿಗಳು ಪ್ರತಿವರ್ಷ ಒಂದುಕೋಟಿ ಉದ್ಯೋಗ ಸೃಷ್ಟಿಸುವ ಮಾತನಾಡಿ ಚಪ್ಪಾಳೆ ಗಿಟ್ಟಿಸಿಕೊಂಡಿದ್ದಾರೆ.

ಕೇಂದ್ರದ ಕಾರ್ಮಿಕ ಖಾತೆಯ ರಾಜ್ಯಸಚಿವರು ಮಾರ್ಚ್ 6 ರಂದು ರಾಜ್ಯಸಭೆಯಲ್ಲಿ ನೀಡಿದ ಹೇಳಿಕೆಯ ಪ್ರಕಾರ

- 31.03.02 ರ ವೇಳೆಗೆ ಸಾರ್ವಜನಿಕಗ ಉದ್ದಿಮೆಗಳ 4.33 ಲಕ್ಷ ಜನ ಸ್ವಯಂ ನಿವೃತ್ತಿ ಹೊಂದಿದ್ದಾರೆ.
- 1998 ರಿಂದ 2002 ರವರೆಗೆ59104 ಕಾರ್ಮಿಕರು ಉದ್ದಿಮೆ ಮುಚ್ಚಿದ್ದರಿಂದ ಉದ್ಯೋಗ ಕಳೆದುಕೊಂಡಿದ್ದಾರೆ.
- ಕೆಲಸದಿಂದ ಕಿತ್ತುಹಾಕಿದ ಕಾರಣದಿಂದ 14406 ಜನ ಕೆಲಸ ಕಳೆದುಕೊಂಡಿದ್ದಾರೆ.
- ಕಳೆದೈದು ವರ್ಷಗಳಲ್ಲಿ ಕಾರ್ಖಾನೆಗಳಿಗೆ -ಬೀಗ ಹಾಕಿದ್ದರಿಂದ 165487 ಜನ ಕೆಲಸ ಕಳೆದುಕೊಂಡಿದ್ದಾರೆ.

ಇವು ವರದಿಯಾದ ಅಂಕಿಗಳಿಂದ ತಿಳಿದು ಬರುವುದು ವರದಿಯಾಗದೇ ಉಳಿದ ಕೆಲಸಗಳು ಇದಕ್ಕಿಂತ ಹಲವು ಪಟ್ಟು ಇರುತ್ತದೆ ಅಲ್ಲವೇ? ಅತ್ತ ಒಂದು ಕೋಟಿ ಕೆಲಸಗಳನ್ನು ನಿಜವಾಗಿ ಸರ್ಕಾರ ಸೃಷ್ಟಿಸುವುದಿಲ್ಲ. ಇತ್ತ ಇರುವ ಕೆಲಸಗಳೂ ಕಳೆದು ಹೋಗುತ್ತಿವೆ!!

ಕಮ್ಯುನಿಸ್ಟ್ ಚೀನಾ ಬಂಡವಾಳಶಾಹಿ ಭಾರತಕ್ಕಿಂತ ಮುಂದಿದೆಯೇ?

ಹೌದೆನ್ನುತ್ತದೆ ವಿಶ್ವಬ್ಯಾಂಕಿನ ವರದಿಯೊಂದು. ಭಾರತ ಮತ್ತು ಬ್ರೆಜಿಲ್‌ಗಳಿಗೆ ಹೋಲಿಸಿದರೆ ಚೀನಾಕ್ಕೆ ಹತ್ತು ಪಟ್ಟು ಹೆಚ್ಚು ವಿದೇಶಿ ಹೂಡಿಕೆ ಹರಿದು ಬರುತ್ತದೆ. ಭಾರತದಲ್ಲಿ ಉದಾರೀಕರಣ ಪ್ರಾರಂಭವಾದದ್ದೇ ಹೆಚ್ಚು ವಿದೇಶಿ ಹೂಡಿಕೆ ಹರಿದುಬರಲೆಂದು.

ಇತ್ತೀಚೆಗೆ ನಮ್ಮ ಸಾಫ್ಟ್‌ವೇರ್ ದಿಗ್ಗಜ ಶ್ರೀ ನಾರಾಯಣ ಮೂರ್ತಿಯವರು ಚೀನಾ ಏನೂ ಪ್ರಯೋಜನವಿಲ್ಲೆಂದು ಹೇಳಿದ್ದರು.

ವಿಶ್ವಬ್ಯಾಂಕಿನ ಈ ವರದಿಯು ಪ್ರಕಾರ ಭಾರತದಲ್ಲಿ ದಿವಾಳಿಕೋರತನದ ಒಂದು ಪ್ರಕರಣ ಪರಿಹರಿಸಲು 4115 ದಿನಗಳು ಅಂದರೆ ನಾಲ್ಕು ವರ್ಷ ಮೂರು ತಿಂಗಳಿಗೂ ಹೆಚ್ಚು ಕಾಲ ಬೇಕಾಗುತ್ತದಂತೆ. ಚೀನಾದಲ್ಲಿ ಇದು 955 ದಿನಗಳಲ್ಲಿ ಪರಿಹರಿಸಲ್ಪಡುತ್ತದೆ. ಬ್ರೆಜಿಲ್ (ನಮ್ಮಂತೆ ಒಂದು ಅಭಿವೃದ್ಧಿಶೀಲ ದೇಶ-ಅಮೆರಿಕ ಖಂಡದ್ದು)ನಲ್ಲಿ ಇಂತಹ ಪ್ರಕರಣ ಪರಿಹರಿಸಲು 3650 ದಿನಗಳು ಬೇಕಾಗುತ್ತದಂತೆ.

ಈ ದಿವಾಳಿಖೋರತನದ ಘೋಷಣೆಯ ಪ್ರಕರಣ ಬಂಡವಾಳಶಾಹಿ ಪದ್ಧತಿಯ ದೊಡ್ಡ ಮೋಸದ ಪ್ರಕರಣಗಳೂ ಆಗಿರಬಹುದು. ಯಾಕೆಂದರೆ ಒಂದು ಕಂಪನಿ ತಾನು ದಿವಾಳಿಯಾಗಿದ್ದೇನೆಂದು ಘೋಷಿಸಿಕೊಂಡು ಅದನ್ನು ಸಂಬಂಧಪಟ್ಟ ಅಧಿಕಾರಿಗಳು ದೃಢೀಕರಿಸಿರೆ ಆ ಕಂಪನಿ ಯಾರ್‍ಯಾರಿಗೆ ಎಷ್ಟೆಷ್ಟು ಕೊಡಬೇಕಾಗಿತ್ತೋ ಅವರಿಗೆ ಆ ಹಣ ಕೊಡಬೇಕಾದದ್ದಿಲ್ಲ. ಅವರಿಗೆಲ್ಲ ಪಂಗನಾಮಗಳು ಮಾತ್ರ.

ಆದ್ದರಿಂದ ಈ ಪ್ರಕರಣ ನಿಕಾಲಿ ಮಾಡುವುದು ಬಹಳ ಕಠಿಣ. ಇಂತಹ ಪ್ರಕರಣಗಳನ್ನು ಚೀನಾ ಸಮರ್ಥವಾಗಿ ಅಂದರೆ ಬಂಡವಾಳಶಾಹಿ ದೇಶಗಳಿಗಿಂತ ಪರಿಣಾಮಕಾರಿಯಾಗಿ ಬಗೆಹರಿಸುತ್ತದೆ. ಕಮ್ಯುನಿಸ್ಟ್ ಚೀನಾ ಬಂಡವಾಳಶಾಹಿ ಭಾರತಕ್ಕಿಂತ ಮುಂದಿದೆ ಎಂಬ ಬಗ್ಗೆ ಪ್ರತ್ಯೇಕ ದೃಢೀಕರಣ ಪತ್ರಬೇಕೆ?

ಶೇರು ಮಾರಾಟಕ್ಕೆ ತೀವ್ರ ವಿರೋಧ


ಅತ್ಯಂತ ಲಾಭದಾಯಕ ಸಾರ್ವಜನಿಕ ತೈಲ ಉದ್ದಿಮೆಗಳಾದ ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿ. (ಹೆಚ್‌ಪಿಸಿಎಲ್), ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿ(ಬಿಪಿಸಿಎಲ್) ಗಳ ಖಾಸಗೀಕರಣ (ಅಂದರೆ ಶೇರು ಮಾರಾಟ) ಲೋಕಸಭೆಯಲ್ಲಿ ದೊಡ್ಡ ಗಲಾಟೆಗೆ ಕಾರಣವಾಯಿತು.

ಎನ್‌ಡಿಎ ಅಂಗ ಪಕ್ಷಗಳಾದ ಶಿವಸೇನೆಯೂ ವಿರೋಧ ಪಕ್ಷಗಳ ಜೊತೆ ಸೇರಿ ಈ ಕ್ರಮವನ್ನು ವಿರೋಧಿಸಿತು. ಸಿಪಿಐ(ಎಂ) ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳ ಸದಸ್ಯರು ಈ ಕ್ರಮಗಳ ವಿರುದ್ಧ ತೀವ್ರ ತರಹದ ಪ್ರತಿಭಟನೆ ತೋರಿಸಿದರು. ಈ ವಿಷಯದಲ್ಲಿ ಪಾರ್ಲಿಮೆಂಟಿನ ಅನುಮತಿಯನ್ನು ಪಡೆಯಲೇಬೇಕೆಂದು ಅವರು ಸರ್ಕಾರವನ್ನು ಒತ್ತಾಯಿಸಿದರು.

'ದೇಶದ ಮಾರಾಟವನ್ನು ನಿಲ್ಲಿಸಿ' ಎಂಬ ಘೋಷಣೆಯೊಂದಿಗೆ ಪ್ರತಿಭಟಿಸಿದ ಈ ಸದಸ್ಯರ ಮಾತನ್ನು ಸರ್ಕಾರ ಕೇಳಲೇ ಬೇಕಾಯಿತು. ಮುನ್ನೂರಕ್ಕೂ ಹೆಚ್ಚು ಸದಸ್ಯರು ಈ ಕ್ರಮದ ವಿರುದ್ಧವಿರುವುದು ಸ್ಪಷ್ಟವಾಗಿ ಕಂಡುಬಂತು.

ಸದ್ಯಕ್ಕೆ ಈ ನಿರ್ಧಾರವನ್ನು ಮುಂದೂಡಿರುವಂತೆ ಕಾಣುತ್ತಿದ್ದರೂ ಎನ್‌ಡಿಎ ಸರ್ಕಾರ ಒಳಗಿಂದಲೇ ತಂತ್ರ ಹೂಡುತ್ತದೆ ಎಂಬುದು ಗೊತ್ತಿರುವ ವಿಚಾರ.

ಆಂಡರ್ಸನ್ ಬೀದಿ, ಲಂಡನಿನಲ್ಲಿ



ಜಿಟಿ ಜಿಟಿ ಎಂದು
ಮಳೆ ಸುರಿದಿತ್ತು ಹೊರಗೆ,
ಕೊರೆದಿತ್ತು ಚಳಿಯು
ನಡುಗಿತ್ತು ಇಳೆಯು.
ಮುಗಿಲನ್ನು ತಬ್ಬಿತ್ತು ಮಬ್ಬು,
ಹೆಪ್ಪುಗಟ್ಟಿತ್ತು
ಒರಗಿಕೊಂಡಲ್ಲಿಯೆ -ಥೇಮ್ಸ್ ಹೊಳೆಯು

"ಇಲ್ಲೇ ಇರು ಜೆನಿ. ಬೆಚ್ಚಗೆ ಹೊದ್ದುಕೊ
ಮಕ್ಕಳನು ಬಿಡಬೇಡ ಎಲ್ಲು ಹೊರಗೆ
ಒರಗಿದಲ್ಲೆ ತುಸು ಎದೆಯನ್ನು ಕಾಸಿಕೊ
ಹಿತವಾಗಬಹುದೀ ಅಸಾಧ್ಯ ಚಳಿಗೆ"

"ಲಕ್ಷ್ಯವಿರಲಿ ಹೆಲೆನೆ. ಬೇಗನೆ ಬರುವೆನು"
"ಕಾರ್ಲ್. ಇಂಥ ಮಳೆಯಲ್ಲೇ ಹೋಗಬೇಕೆ"?
" ಹೌದಮ್ಮ ಹೌದು ಮನೆಯೊಂದು ಬೇಕಲ್ಲ
ಬಿಸಿನೀರು ಕಾಸು. ಮಕ್ಕಳನು - ಜೋಕೆ"
ಹೊಳೆವ ಕಣ್ಣುಗಳು ಪೊದೆಹುಬ್ಬು ಕುರು
ಚಲುಗಡ್ಡ ಧೀರನಡೆ ಕಂಚುಧ್ವನಿಯು
ಮರುಕವೆ ಮರೆತಂಥ ಮಳೆಯಲ್ಲಿ ಕೇಳಿ
ದರು. "ಬಾಡಿಗೆಗೆ ಉಂಟೆ ಮನೆಯು"?

ಮುಚ್ಚಿರುವ ಕದ ಕಿಡಕಿ ಕಂಡಲ್ಲಿ ನಿಂತರು.
'ಬಾಡಿಗೆಗೆ ಉಂಟೆ ಮನೆಯು?'
'ನಾಲ್ಕು ಮಕ್ಕಳ ನಮ್ಮ ಸಂಸಾರ' ಕೆಂದಾಗ
ಉದುರಿದವು ನಾಲ್ಕುದನಿಯು
4, ಅಂಡರ್ಸನ ಬೀದಿ, ಲಂಡನದಲ್ಲಿ
ಕೂಗಿದರಮೀನರು, ಗುಂಪಿನೆದುರು
"ಹಾಸಿಗೆಗಳು ಬೇಕೆ? ದುಪ್ಪಟಗಳು ಬೇಕೆ?
1ನೇ ಸವಾಲ್ ಬೇಗ ಬೇಡಬಹುದು"

ಐದುವರ್ಷದ ಜೆನಿ, ತಾಯಿಗೆ ಅಂದಳು.
"ಹಾಸಿಗೆಗಳನ್ನೇಕೆ ಕೊಟ್ಟೆ ಅಮ್ಮ?"
ನಾವೆಲ್ಲ ಮಲಗುವದೆಲ್ಲೀಗ? ಅಯ್ಯೊ"
ದುಪ್ಪಟ್ಟಿಗಳನ್ನೂ ಹೊತ್ತು ತಂದರಲ್ಲ.

ಬೇಲೀಫನನ್ನೇ ಕೈ ಹಿಡಿದು ಕೇಳಿದಳು.
ಲಾವುರೆ "ಅಮ್ಮನಿಗೆ ಎದೆಯ ನೋವು.
ಎಡ್ಗರಗೆ ಕಾಯಿಲೆ, ನಮಗೆಲ್ಲ ಚಳಿಯಲ್ಲಿ
ದುಪ್ಪಟಿಯು ಬೇಡವೆ? ಹೇಳಿ ನೀವು"

ಕೂಗಿದರಮೀನರು. "ತೊಟ್ಟಿಲವು ಬೇಕೇನು?
ಗಟ್ಟಿ ಅಳಹತ್ತಿದರು ಮಕ್ಕಳೆಲ್ಲ
ಹೆನ್‌ರಿಚ್ ಮಲಗುವದು ಎಲ್ಲಮ್ಮ ಇನ್ನೂ.
ಲಾಲಿಯ ಹಾಡುಗಳು ಅವನಿಗಿಲ್ಲ"

"ಗೊಂಬೆಗಳು ಬೇಕೆ? ಉಡುಪುಗಳು ಬೇಕೆ?
1ನೇ ಸವಾಲ್, ಬೇಗ ಬೇಡಬಹುದು.
ಜೆನಿ ಅತ್ತಳು. ಲಾವುರ ಅತ್ತಳು.
ಬಾಡಿಗೆಯ ಹಣಕಿವೂ ಸಾಲದಿಹುದು

ನೆರೆದ ಜನರೆಲ್ಲ ತಮ್ಮೊಳಗೆ ನುಡಿದರು.
"ಯಾರೋ ಪಾಪ. ಕಾರ್ಲಮಾರ್ಕ್ಸನಂತೆ!
ಬಾಡಿಗೆ ಹಣಕ್ಕೆ ಈ ಬವಣೆ ಕಾನೂನಿಗೆ
ಗೊಂಬೆಗಳು. ಕಾಯಿಲೆ ಎಂಬುದುಂಟೆ?"

ಹೆಲೆನ ಜೆನಿಯ ಎದೆಯನ್ನು ಕಾಸಿದಳು.
ಸಂತೈಸಿದಳು. ಅಳುವ ಮಕ್ಕಳನ್ನು
ಇದ್ದುಬಿದ್ದುದ ಮಾರಿ. ಲೆಸ್ಟರ ಸ್ಕ್ವೇರಿನಲಿ
ಆಶ್ರಯಿಸಿದರು ಚಿಕ್ಕ ಹೋಟೆಲನ್ನು

ಕಾರ್ಲಮಾರ್ಕ್ಸ ಅಂದರು. "ಋಣವಂತು ತೀರಿತು.
ಗಾಯಗಳು ಮಾತ್ರವೇ ಉಳಿದವಲ್ಲ.
ನೆಲೆಯಿಲ್ಲದವರೆಲ್ಲ ಒಂದಾಗಿ. ನೆಲವೆಲ್ಲ
ನೆಲೆಯಾಗಿ ಬಾಳ್ವದಿನ ದೂರವಿಲ್ಲ"

ಸು.ರಂ.ಎಕ್ಕುಂಡಿ

(ಕಥನ ಕವನಗಳ ಸಂಕಲದಿಂದ)

ಪ್ರಕಾಶನ :ಕನ್ನಡ ಅಭಿವೃದ್ಧಿ ಪ್ರಾಧಿಕಾರ

(ಬಂಡವಾಳ ಗ್ರಂಥದ ರಚನೆಗೆ ಕಾರಣವಾಗಿದ್ದುದು ಲಂಡನ್ನಿನ ಆಂಡರ್‌ಸನ್ ಬೀದಿಯಲ್ಲಿ. ಹೊಟ್ಟೆ ತಿನ್ನುವ ಬಡತನ, ರೋಗದಿಂದ ನರಳುವ [illegible] [illegible] ಮೇ 5,1818 ಕಾರ್ಲ್ ಮಾರ್ಕ್ಸ್ ಜನ್ಮ ದಿನದ ಸ್ಮರಣೆಯಲ್ಲಿ.)

ಜಗದ ತುಂಬಾ ಕೆಂಪು ಅರಳಿ ನಿಂತ ಮೇ ದಿನ

ಸಾಮೂಹಿಕ ರಚನೆಯ ಅಸ್ತ್ರಗಳ ದಿನ (Day of Weapons of Mass Construction) - ಇದು ಬ್ರಿಟಿಶ್ ಕಾರ್ಮಿಕರ ಈ ವರ್ಷದ ಮೇ ದಿನದ ಘೋಷಣೆಯಾಗಿತ್ತು. ಇರಾಕ ಸಾಮೂಹಿಕ ನಾಶದ ಅಸ್ತ್ರಗಳ ನಾಶಕಾ ಗಿ ಯುದ್ಧ ಎಂಬ ಅಮೆರಿಕದ ಹುಸಿ ಘೋಷಣೆಗೆ ಅಣಕ ಮಾಡುವ ಘೋಷಣೆ. ಯುದ್ಧದಾಹಿ ಸಾಮ್ರಾಜ್ಯಶಾಹಿಗಳ ಅಜೆಂಡಾ ತಿರಸ ರಿಸಿ, ಬದಲಿ ಅಜೆಂಡಾ ಇಡುವ ಕಾರ್ಮಿಕರ ಕೆಚ್ಚು ಈ ವರ್ಷದ ಮೇ ದಿನದ ಪ್ರದರ್ಶನಗಳಲ್ಲಿ ಕಂಡು ಬಂತು. ಸಾಮೂಹಿಕ ರಚನೆಯ ಅಜೆಂಡಾ ಸಮಾಜದ ಮುಂದೆ ಇಡುವಲ್ಲಿ ತಡೆಯೊಡ್ಡುವ ಆಳುವ ವರ್ಗದ ವಿರೋಧ ನಾಶ ಮಾಡುವ ಅಸ್ತ್ರಗಳಾಗಿದ್ದವು - ಈ ವರ್ಷದ ಮೇ ದಿನದ ಪ್ರದರ್ಶನಗಳು. ಇದೇ ರೀತಿಯ ಘೋಷಣೆಗಳು ಬೇರೆಡೆಯಲ್ಲೂ ಕಂಡು ಬಂದವು. ಉದ್ಯೋಗ ಬೇಕು ಬಾಂಬು ಬೇಡ ಎಂಬುದು ಗ್ರೀಸ್ ಕಾರ್ಮಿಕರ ಕೇಂದ್ರ ಘೋಷಣೆಯಾಗಿತ್ತು. ಶಾಂತಿ ಮತ್ತು ಉದ್ಯೋಗಕಾ ಗಿ ಸ್ಪಾನಿಷ್ ಕಾರ್ಮಿಕರ ಮೇ ದಿನದ ಒಕ್ಕೊ ರಲಿನ ಕೂಗಾಗಿತ್ತು. ಕಾರ್ಮಿಕರು ಜಗದ ತುಂಬಾ ಸಂಘಟನೆ ಮತ್ತು ಹೋರಾಟದ ಅಸ್ತ್ರಗಳನ್ನು ಕೈಗೆತ್ತಿಕೊಂಡದ್ದು ಕಂಡು ಬಂತು. ಈ ವರ್ಷದ ಮೇ ದಿನದ ಹಬ್ಬವನ್ನು ಕಾರ್ಮಿಕರು ಆಚರಿಸಿದ ಬಗ್ಗೆ ಒಂದು ಫೋಟೊ ವರದಿ.

ಮೇ ದಿನ 2003 - ಸಾಮೂಹಿಕ ರಚನೆಯ ಅಸ್ತ್ರಗಳ ದಿನ




ಕ್ಯೂಬಾ, ದ. ಕೊರಿಯಾ, ಮೆಕ್ಸಿಕೊ, ಗ್ರೀಸ್ ಮತ್ತು ಸ್ಪೈನ್ ಗಳಲ್ಲಿ ಅತ್ಯಂತ ದೊಡ್ಡ ಪ್ರದರ್ಶನಗಳು ನಡೆದವು. ಗ್ರೀಸ್‌ನಲ್ಲಿ ಸಾವಿರಾರರು ಕಾರ್ಮಿಕರು ಭಾಗವಹಿಸಿದ ಮೆರವಣಿಗೆ ಅಮೆರಿಕನ್ ರಾಯಭಾರ ಕಚೇರಿಯತ್ತ ನಡೆದು, ಅಲ್ಲಿ ಪ್ರದರ್ಶನ ನಡೆಸಿತು. ದ. ಕೊರಿಯಾ ಮತ್ತು ಗ್ರೀಸ್ ನಲ್ಲಿ ವೇತನ ಕಡಿತವಿಲ್ಲದೆ ೩೫ ಗಂಟೆಗಳ ವಾರ ಜಾರಿಗೆ ತರುವ ಘೋಷಣೆಯನ್ನೂ ಹಾಕಲಾಯಿತು. ಜರ್ಮನಿಯ ರಾಜಧಾನಿ ಬರ್ಲಿನ್ ನಲ್ಲಿ ೫೬ ಪ್ರತ್ಯೇಕ ಪ್ರದರ್ಶನಗಳು ನಡೆದವು. ಅಮೆರಿಕದ ಯುದ್ಧದಾಹಿ ನೀತಿ ಖಂಡಿಸುವುದರ ಜತೆಗೆ , ಸರ್ಕಾರದ ಕಾರ್ಮಿಕರ ಸವಲತ್ತುಗಳನ್ನು ಕಡಿತ ಮಾಡುವ ನೀತಿಗಳನ್ನು ಖಂಡಿಸಲಾಯಿತು. ರ್‍ಯಾಲಿಯೊಂದರಲ್ಲಿ ದೇಶದ ಭವಿಷ್ಯತ್ತಿಗಾಗಿ ತ್ಯಾಗ ಅಗತ್ಯ ಎಂಬ ಆಳುವ ವರ್ಗದ ಹಳೆಯ ಡೈಲಾಗು ಹಾಕಿದ ಸೋಶಲಿಸ್ಟ್ ಛಾನ್ಸಲರ್ ವಿರುದ್ದ ಕಾರ್ಮಿಕರು ಗಟ್ಟಿಯಾಗಿ ಕೂಗು ಹಾಕಿ ಪ್ರತಿಭಟಿಸಿದರು. ಫ್ರಾನ್ಸ ಮತ್ತು ಆಸ್ಟ್ರಿಯಾ ಗಳಲ್ಲಿ ಪೆನ್ಶನ್ ಪದ್ಧತಿಯಲ್ಲಿ ಕಾರ್ಮಿಕ-ವಿರೋಧಿ ಬದಲಾವಣೆಗಳಿಗೆ ವಿರೋಧ ವ್ಯಕ್ತಪಡಿಸಲಾಯಿತು. ಇಟಲಿ, ಪೋರ್ಚುಗಲ್ ಮತ್ತು ಪೋಲೆಂಡುಗಳಲ್ಲಿ ಹೆಚ್ಚುತ್ತಿರುವ ನಿರುದ್ಯೋಗದ ಬಗ್ಗೆ ಪ್ರತಿಭಟನೆ ರ್‍ಯಾಲಿಗಳಲ್ಲಿ ವ್ಯಕ್ತವಾಯಿತು. ಯುದ್ಧದ ನೆಪದಲ್ಲಿ ಉದ್ಯೋಗ ಮತ್ತು ಸವಲತ್ತುಗಳಲ್ಲಿ ಕಡಿತ ಮಾಡುವ ಪ್ರವೃತ್ತಿಯನ್ನು ಎಲ್ಲಾ ಕಡೆ ಟೀಕಿಸಲಾಯಿತು. ಬಲ್ಗೇರಿಯಾದಲ್ಲಿ ಸಾವಿರಾರು ಎಡಪಂಥಿಯ ಟ್ರೇಡ್ ಯೂನಿಯನ್ ಸದಸ್ಯರಾದ ಕಾರ್ಮಿಕರು, ಜನತೆಯ ಜೀವನ ಮಟ್ಟದ ದುರ್ಭರ ಮಾಡಿರುವ ಸರ್ಕಾರ ರಾಜೀನಾಮೆ ಕೊಡಬೇಕೆಂದು ಒತ್ತಾಯಿಸಿದರು. ಜೆಕೊಸ್ಲೊವಾಕಿಯಾದಲ್ಲಿ ಸಾವಿರಾರು ಕಾರ್ಮಿಕರು, ನಾಟೋ ಯುದ್ಧ ಕೂಟದಿಂದ ಜೆಕೊಸ್ಲೊವಾಕಿಯಾ ಹೊರಬರಬೇಕೆಂದು ಒತ್ತಾಯಿಸಿದರು. ಬ್ರಿಟನ್ ನಲ್ಲಿ ರ್‍ಯಾಲಿಗಳಲ್ಲದೆ, ತೈಲ ಮತ್ತು ಮಿಲಿಟರಿ ಕಂಪನಿಗಳ ಕಚೇರಿಗಳ ಮುಂದೆ ಪಿಕೆಟಿಂಗ್ ಮಾಡಲಾಯಿತು. ರಶ್ಯಾದ ಹಲವಾರು ಕಡೆ ಎಡಪಂಥೀಯ ಮತ್ತು ಆಳುವ ಪಕ್ಷದ ಸಂಬಂಧ ಇರುವ ಯೂನಿಯನ್ ಗಳ ಸದಸ್ಯರಾದ ಸಾವಿರಾರರು ಕಾರ್ಮಿಕರು ಪ್ರತ್ಯೇಕ ಮೆರವಣಿಗೆಗಳಲ್ಲಿ ಭಾಗವಹಿಸಿದರು. ಇಂಡೋನೇಶಿಯಾದಲ್ಲಿ ಅಧ್ಯಕ್ಷರ ಅರಮನೆ ಮುಂದೆ ಭಾರೀ ಪ್ರದರ್ಶನದಲ್ಲಿ ಕನಿಷ್ಟ ಕೂಲಿ ಹೆಚ್ಚಿಸುವ, ಮೇ ದಿನ ದಂದು ರಜಾ ಘೋಷಿಸಲು ಒತ್ತಾಯಿಸಲಾಯಿತು. ಕೆಲವು ಅರಾಜಕತಾವಾದಿ ಮತ್ತು ಉಗ್ರಪಂಥೀಯ ಗುಂಪುಗಳು (ಇವುಗಳಲ್ಲಿ ಕೆಲವು ಸರ್ಕಾರೀ ಕುಮ್ಮಕಿ ನವು ಇವೆ) ಹಿಂಸಾಚಾರಕೆ ಇಳಿಯುವುದು, ಇದನ್ನು ನೆಪ ಮಾಡಿ ಪ್ರದರ್ಶನಗಳ ಮೇಲೆ ದಾಳಿ ಮಾಡುವುದು ಇತ್ತೀಚಿನ ದಿನಗಳಲ್ಲಿ ಸಾಮಾನ್ಯವಾಗಿದೆ. ಈ ಬಾರಿಯೂ ಬರ್ಲಿನ್ ಮುಂತಾದ ಕಡೆ ಇಂತಹ ಘಟನೆಗಳು ನಡೆದವು. ತುರ್ಕಿಯ ನಗರಗಳಲ್ಲಿ ಪ್ರದರ್ಶನಗಳ ಮೇಲೆ ಇದ್ದ ನಿಷೇಧಗಳ ಬಗ್ಗೆ ಕಾರ್ಮಿಕರು ಪ್ರತಿಭಟಿಸಿದಾಗ ಘರ್ಷಣೆಗಳು ನಡೆದವು.














"ಎಲ್ಲಾ ದೇಶಗಳ ಕಾರ್ಮಿಕವರ್ಗದ ಹೋರಾಟಗಳ ಸಂಬಂಧ ವಿವರಿಸಬೇಕು"

ಮೇ ದಿನದ ಬಗ್ಗೆ ಲೆನಿನ್ ಮೇ 1,1900 ರಂದು

"... ಎಂಟು ಗಂಟೆಯ ದುಡಿಯುವ ದಿನದ ಬೇಡಿಕೆ ಎಲ್ಲಾ ಕಾರ್ಮಿಕ ವರ್ಗದ ಬೇಡಿಕೆ. ಇದು ಕೆಲವು ಮಾಲಿಕರೆದುರು ಕೆಲವು ಕಾರ್ಮಿಕರು ಇಟ್ಟಿರುವ ಬೇಡಿಕೆಯಲ್ಲ. ಸದ್ಯದ ಸಮಸ್ತ ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಯ ಪ್ರತಿನಿಧಿಗಳಾದ ಪ್ರಭುತ್ವದ ಅಧಿಕಾರಿಗಳ ಸಮಸ್ತ ಬಂಡವಾಳಶಾಹೀ ವರ್ಗದ ಉತ್ಪಾದನಾ ಸಾಧನಗಳ ಒಡೆಯರ ಎದುರು ಇಟ್ಟಿರುವ ಬೇಡಿಕೆಯಿದು. ಇದು ಅಂತರಾಷ್ಟ್ರೀಯ ಸಮಾಜವಾದೀ ಆಂದೋಲನದೊಂದಿಗೆ ಐಕ್ಯವಾಗುವ ಒಂದು ಘೋಷಣೆ. ಕಾರ್ಮಿಕರು ಈ ಬೇಡಿಕೆಯನ್ನು ಪುಕ್ಕಟೆ ರೈಲು ಟಿಕೇಟು, ಕಾವಲುಗಾರನ ವಜಾ ಮುಂತಾದ ಬೇಡಿಕೆಯ ಮಟ್ಟಕ್ಕೆ ಇಳಿಸದಂತೆ ಮಾಡಬೇಕಾದರೆ ಅವರು ಈ ವ್ಯತ್ಯಾಸವನ್ನು ಅರ್ಥ ಮಾಡಿಕೊಳ್ಳುವಂತೆ ಮಾಡಬೇಕು. ವರ್ಷವಿಡೀ ಕಾರ್ಮಿಕರು ಒಂದೆಡೆ ಒಮ್ಮೆ ಇನ್ನೊಂದೆಡೆ ಇನ್ನೊಮ್ಮೆ ವಿಧ-ವಿಧವಾದ ಭಾಗಶಃ ಬೇಡಿಕೆಗಳನ್ನು ತಮ್ಮ ಮಾಲೀಕರ ಮುಂದಿಟ್ಟು ಅದಕ್ಕಾಗಿ ಹೋರಾಡುತ್ತಾರೆ. ಕಾರ್ಮಿಕರಿಗೆ ಈ ಹೋರಾಟಗಳಲ್ಲಿ ನೆರವು ನೀಡುವಾಗ ಸಮಾಜವಾದಿಗಳು ಸದಾ ಈ ಹೋರಾಟಗಳಿಗೂ ಎಲ್ಲಾ ದೇಶಗಳ ಕಾರ್ಮಿಕ ವರ್ಗದ ವಿಮೋಚನಾ ಹೋರಾಟಗಳಿಗೂ ಇರುವ ಸಂಬಂಧವನ್ನು ವಿವರಿಸಬೇಕು. ಮತ್ತು ಮೇ ದಿನ, ತಾವು ಈ ಸಂಬಂಧವನ್ನು ಅರಿತುಕೊಂಡಿದ್ದೇವೆ ಎಂದು ಕಾರ್ಮಿಕರು ಘೋಷಿಸುವ ಹಾಗೂ ದೃಢ ನಿರ್ಧಾರದಿಂದ ಈ ಹೋರಾಟದಲ್ಲಿ ಸೇರಿಕೊಳ್ಳುತ್ತೇವೆ ಎಂದು ಸಾರುವ ದಿನವಾಗಬೇಕು.

ಕರ್ನಾಟಕದಲ್ಲಿ ಮೇ ದಿನ...






ಜೋಸ್ ಮಾರ್ಟಿ ಕ್ಯೂಬಾದ ಸ್ವಾತಂತ್ರ್ಯ ಹರಿಕಾರ

ಇತಿಹಾಸದ ಪುಟಗಳಿಂದ

ಅಪ್ರತಿಮ ಕ್ರಾಂತಿಕಾರಿ, ಕ್ಯೂಬಾದ ಸ್ವಾತಂತ್ರ್ಯ ಹೋರಾಟದ ಹರಿಕಾರ, ಜೋಸ್ ಮಾರ್ಟಿಯವರ ಜನ್ಮದ 150ನೇ ವಾರ್ಷಿಕೋತ್ಸವ ಈಗ ವಿಶ್ವದಾದ್ಯಂತ ಆಚರಿಸಲಾಗುತ್ತಿದೆ. ಸಾಮ್ರಾಜ್ಯಶಾಹಿಯ ವಿರುದ್ಧ ನಾಡಿನ ವಿಮೋಚನೆಗಾಗಿ ಹುತಾತ್ಮನಾದ ಮಾರ್ಟಿಯವರ ಜೀವನ-ಕೊಡುಗೆಗಳತ್ತ ...

ಕ್ಯೂಬಾದ ಸ್ವಾತಂತ್ರ್ಯ ವೀರ ಜೋಸ್ ...ರ್ಟಿಯವರ ಜನ್ಮದ 150ನೇ ...ರ್ಷಿಕೋತ್ಸವವನ್ನು ಈಗ ಆಚರಿಸಲಾಗುತ್ತಿದೆ. ...ವರಿ 28, 1853ರಂದು ಕ್ಯೂಬಾದ ರಾಜಧಾನಿ ...ವಾನಾದಲ್ಲಿ ಬಡ ಸ್ಪಾನಿಷ್ ವಲಸಿಗ ...ಟುಂಬದಲ್ಲಿ ಜನಿಸಿ ಸ್ಪಾನಿಷ್ ...ಸಾಹತುಶಾಹಿಯಿಂದ, ಒಟ್ಟಾರೆಯಾಗಿ ...ಮ್ರಾಜ್ಯಶಾಹಿಯಿಂದ ಕ್ಯೂಬಾದ ವಿಮೋಚನೆಯ ...ಸು ಕಂಡು ಅದನ್ನು ಸಾಕಾರಗೊಳಿಸುವಲ್ಲಿ ಮೇ ..., 1895ರಂದು 43ನೇ ವಯಸ್ಸಿನಲ್ಲಿಯೇ ...ಣಾರ್ಪಣೆ ಮಾಡಿದ ಜೋಸ್ ಜೂಲಿಯನ್ ...ರ್ಟಿ ವೈ ಪೆರೇರ್ಝ್ ಕೇವಲ ಸ್ವಾತಂತ್ರ್ಯ ...ೋರಾಟದ ಸೇನಾನಿಯಷ್ಟೇ ಅಲ್ಲ ಒಬ್ಬ ಕವಿ, ...ತ್ರಕರ್ತ, ಬೋಧಕ ಹಾಗೂ ಇಡೀ ಲ್ಯಾಟಿನ್ ...ಮೆರಿಕನ್ ಸಂಸ್ಕೃತಿಯ ಪ್ರತೀಕವೂ ಆಗಿದ್ದರು. ...ಲಕನಾಗಿರುವಾಗಲೇ ಕ್ಯೂಬಾದ ತೋಟಗಳಲ್ಲಿ ...ಯ ಗುಲಾಮರನ್ನು ನಡೆಸಿಕೊಳ್ಳುತ್ತಿದ್ದ ರೀತಿ ...ವರಲ್ಲಿ ಅಘಾತವುಂಟುಮಾಡಿತ್ತು. 16 ...ರ್ಷವಾದಾಗಲೇ ಸ್ವಾತಂತ್ರ್ಯಪರ ಪತ್ರಿಕೆ 'ಲಾ ...ತ್ರಿಯಾ ಲಿಬ್ರೆ' ಪ್ರಕಟಿಸಿದ್ದಕ್ಕಾಗಿ ಆತನಿಗೆ 6 ...ರ್ಷಗಳ ಕಠಿಣ ಶಿಕ್ಷೆಯಾಗಿತ್ತು. 3 ವರ್ಷಗಳ ...ತರ ಆತನನ್ನು ಸ್ಪೇನಿಗೆ ಗಡಿಪಾರು ...ಡಲಾಯಿತು. ಅಲ್ಲಿ ಅವರು ತತ್ವಶಾಸ್ತ್ರ ಹಾಗೂ ಕಾನೂನಿನ ಪದವಿ ಪಡೆದರು. ಅಧ್ಯಾಪಕನಾಗಿ, ಪತ್ರಕರ್ತನಾಗಿ ಫ್ರಾನ್ಸ್, ಗ್ವಾಟೆಮಾಲಾ, ಮೆಕ್ಸಿಕೋದಲ್ಲಿ ವ್ಯಾಪಕವಾಗಿ ತಿರುಗಾಡಿದ ಮಾರ್ಟಿ ತನ್ನ ಬರವಣಿಗೆಗಳು, ಕವನಗಳು, ಕಥೆಗಳ ಮೂಲಕ ಲ್ಯಾಟಿನ್ ಅಮೆರಿಕದಾದ್ಯಂತ ಪ್ರಖ್ಯಾತರಾದರು, ತಮ್ಮ ರಾಜಕೀಯ ಪ್ರಬಂಧಗಳ ಮೂಲಕ ಅವರು ಕ್ಯೂಬಾದ ಸ್ವಾತಂತ್ರ್ಯದ ಹರಿಕಾರರಾದರು.

1878ರಲ್ಲಿ ಮಾರ್ಟಿ ಮತ್ತು ಅವರ ಪತ್ನಿ ಕ್ಯೂಬಾಕ್ಕೆ ಹಿಂದಿರುಗಿದರು. ವಸಾಹತುಶಾಹಿಗಳು ಮತ್ತು ಸ್ವಾತಂತ್ರ್ಯ ಹೋರಾಟಗಾರರ ನಡುವಿನ ಒಂದು ಒಪ್ಪಂದದ ಪ್ರಕಾರ ಎಲ್ಲಾ ರಾಜಕೀಯ ಗಡಿಪಾರಾದವರ ಶಿಕ್ಷೆ ರದ್ದಾಯಿತು. ಆದರೆ ಈ ಒಪ್ಪಂದ ಕ್ಯೂಬನ್ನರಿಗೇನೂ ಕೊಡಲಿಲ್ಲ. ಮತ್ತೆ 1879ರಲ್ಲಿ ಸ್ಪಾನಿಷ್ ಸರ್ಕಾರದ ವಿರುದ್ಧ ಪಿತೂರಿ ಹೂಡಿದ ಆಪಾದನೆಯ ಮೇಲೆ ಮಾರ್ಟಿಯವರನ್ನು ಗಡಿಪಾರು ಮಾಡಲಾಯಿತು. ಮಾರ್ಟಿ ವೆನೆಜುವೆಲಾದಲ್ಲಿ ಸ್ವಲ್ಪ ಸಮಯವಿದ್ದನಂತರ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ನ್ಯೂಯಾರ್ಕ್‌ನಲ್ಲಿ ನೆಲೆಸಿದರು. ಸುಮಾರಾಗಿ ತನ್ನ ಜೀವನದ ಕೊನೆಯವರೆಗೂ ಇಲ್ಲಿಂದಲೇ ಅವರು ಹೋರಾಟ ನಡೆಸಿದರು.



ಅಮೆರಿಕಾದಲ್ಲಿ ಅವರು ಒಬ್ಬ ಚಿಂತಕರಾಗಿ, ಪತ್ರಕರ್ತನಾಗಿ ಹಾಗೂ ರಾಜಕಾರಣಿಯಾಗಿ ಪ್ರಸಿದ್ಧರಾದರು. ಲ್ಯಾಟಿನ್ ಅಮೆರಿಕಾದ ಹಲವು ರಾಷ್ಟ್ರೀಯವಾದಿ ಪತ್ರಿಕೆಗಳಿಗೆ ಅವರು ನಿಯಮಿತವಾಗಿ ಲೇಖನಗಳನ್ನು ಬರೆದರು. ಲ್ಯಾಟಿನ್ ಅಮೇರಿಕಾದ ಹಲವು ದೇಶಗಳ ರಾಜತಾಂತ್ರಿಕ ಪ್ರತಿನಿಧಿಯಾಗಿ ಅಮೇರಿಕಾದ ವಿದೇಶಾಂಗ ನೀತಿಯುನ್ನು ಉತ್ಸಾಹದಿಂದ ನೋಡುವ ಅವಕಾಶವೂ ದೊರೆಯಿತು. ಇದರಿಂದಾಗಿಯೇ ಅವರು 'ಅಮೇರಿಕಾ ಇತರ ದೇಶಗಳು ಅನುಸರಿಸಬಹುದಾದ ಮಾದರಿಯಲ್ಲ' ಎಂದು ಸ್ಪಷ್ಟವಾಗಿ ಸಾರಿದರು. "ನಾನು ರಕ್ಕಸನ ಹೊಟ್ಟೆಯೊಳಗೆ ಬದುಕಿದ್ದೇನೆ. ಅದರ ಅಂತರ್ಯವೆಲ್ಲಾ ನನಗೆ ಗೊತ್ತು" ಎಂದಿದ್ದರು ಅವರು. ಸ್ಪಾನಿಷ್ ವಸಾಹತುಶಾಹಿಯ ವಿರುದ್ಧ ಹೋರಾಟದಲ್ಲಿ ಅಮೆರಿಕನ್ ಸಹಾಯ ಪಡೆಯಬೇಕು ಎಂದು ಅಮೇರಿಕಾದಲ್ಲಿದ್ದ ಶ್ರೀಮಂತ ಕ್ಯೂಬನ್ ವಲಸಿಗರ ನಡುವಿನ ಅಭಿಪ್ರಾಯವನ್ನು ಅವರು ಬಲವಾಗಿ ವಿರೋಧಿಸಿದರು. "ಒಮ್ಮೆ ಅಮೇರಿಕನ್ ಮಿಲಿಟರಿ ಕ್ಯೂಬಾಕ್ಕೆ ಬಂತೆಂದರೆ ಅದನ್ನು ಹೊರದಬ್ಬುವರಾರು? ಎಂದು ಅವರು ಪ್ರಶ್ನಿಸಿದರು. ನಿಮ್ಮ ಮಕ್ಕಳನ್ನು ಅಮೆರಿಕಾದಲ್ಲಿ ಶಿಕ್ಷಣ ಪಡೆಯಲು ಕಳಿಸಬೇಡಿ, ಏಕೆಂದರೆ ಅಮೆರಿಕನ್ ಸಂಪತ್ತು ಆ ಮಕ್ಕಳು ತಮ್ಮ ದೇಶೀ ಮೌಲ್ಯಗಳನ್ನು, ತಮ್ಮ ಜನಗಳನ್ನು ನಿಕೃಷ್ಟವಾಗಿ ಕಾಣುವಂತೆ ಮಾಡುತ್ತದೆ ಎಂದು ಅವರು ಎಲ್ಲಾ ಲ್ಯಾಟಿನ್ ಅಮೆರಿಕನ್ನರನ್ನು ಎಚ್ಚರಿಸಿದರು.

ಕ್ಯೂಬಾದ ವಿಮೋಚನಾ ಹೋರಾಟವನ್ನು ಕಾರ್ಮಿಕ ವರ್ಗ ಮಾತ್ರವೇ ಕಟ್ಟಲು ಸಾಧ್ಯ ಎಂದು ನಂಬಿದ್ದ ಅವರು ಅಮೇರಿಕಾದಲ್ಲಿ ಕ್ಯೂಬಾದಿಂದ ವಲಸೆ ಬಂದ ಕರಿಯ ಕಾರ್ಮಿಕರ ನಡುವೆಯೇ ಹೆಚ್ಚು ಕೆಲಸ ಮಾಡಿದರು. 1890ರಲ್ಲಿ ರಫೆಲ್ ಸೆರಾ ಎಂಬ ಕ್ಯೂಬನ್ ನಿಗ್ರೋ ವಲಸಿಗ 'ಲಾ ಲೀಗಾ' ಎಂಬ ಸಂಘಟನೆಯನ್ನು ಆರಂಭಿಸಲು ಮಾರ್ಟಿ ನೆರವಾದರು. ಇದು ಕ್ಯೂಬನ್ ಕ್ರಾಂತಿಕಾರಿ ಆಂದೋಲನದಲ್ಲಿ ಒಂದು ಪ್ರಮುಖ ಬೆಳವಣಿಗೆಯಾಗಿತ್ತು. ಕ್ಯೂಬಾದ ನವಸಮಾಜ ಬಡವರಿಗಾಗಿ ಇರಬೇಕಾಗಿದ್ದರಿಂದ ಕ್ಯೂಬನ್ ಕ್ರಾಂತಿ ಬಡವರನ್ನೇ ಆದರಿಸಬೇಕು ಎಂದು ಅವರು ಹೇಳುತ್ತಿದ್ದರು. ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿದ್ದ ಕ್ಯೂಬನ್ ವಲಸಿಗರ ಸಂಪೂರ್ಣ ಐಕ್ಯತೆ ಜೋಸ್ ಮಾರ್ಟಿಯವರ ಅತ್ಯಂತ ಪ್ರಮುಖ ಸಾಧನೆ ಇದರಲ್ಲಿ ಅವರು ಕ್ಯೂಬನ್ ಕಾರ್ಮಿಕರ ಅವರ ಸಮಾಜವಾದಿ ಮುಖಂಡರ ನೆರವು ಪಡೆದು ಕ್ಯೂಬನ್ ಕ್ರಾಂತಿಕಾರಿ ಪಕ್ಷದ ರಚನೆಗೆ ಕಾರಣಕರ್ತರಾದರು. ಇದೊಂದು ಕ್ಯೂಬನ್ ಸ್ವಾತಂತ್ರ್ಯ ಹೋರಾಟದ ವಿಶಾಲ ವೇದಿಕೆಯಾಗಿದ್ದು ಕ್ಯೂಬನ್ ಕ್ರಾಂತಿಕಾರಿ ಆಂದೋಲನದಲ್ಲಿ ಇನ್ನೊಂದು ಪ್ರಮುಖ ಬೆಳವಣಿಗೆಯಾಗಿತ್ತು. 1892ರಲ್ಲಿ ಜೋಸ್ ಮಾರ್ಟಿ ಕ್ರಾಂತಿಕಾರಿ ಉದ್ದೇಶಗಳಿಗಾಗಿ 'ಲಾ ಪತ್ರಿಯಾ' ಎಂಬ ಪತ್ರಿಕೆಯನ್ನು ಆರಂಭಿಸಿದರು.

1894ರ ಮಾರ್ಚ್ ವೇಳೆಗೆ ಜೋಸ್ ಮಾರ್ಟಿ ತಕ್ಷಣವೇ ಸ್ವಾತಂತ್ರ್ಯ ಕಾರ್ಯಾಚರಣೆ ಆರಂಭಿಸಬೇಕು ಎಂದು ಪ್ರತಿಪಾದಿಸಲಾರಂಭಿಸಿದರು. ಕ್ಯೂಬಾ ಕ್ರಾಂತಿ ದೇಶವನ್ನು ಸ್ಪೇನ್ ವಸಾಹತುಶಾಹಿಯಿಂದ ವಿಮೋಚನೆಗೊಳಿಸುವ ಮೊದಲೇ ಅಮೆರಿಕನ್ ಸಾಮ್ರಾಜ್ಯಶಾಹಿ ಶಕ್ತಿಗಳು ಅದನ್ನು ಕಬಳಿಸಿ ಬಿಡಬಹುದು ಎಂಬ ಭಯ ಅವರಿಗಿತ್ತು. ಅಮೆರಿಕಾದಿಂದಲೇ ಅವರು ಸಾನ್‌ಡೊಮಿಂಗೋ ಮತ್ತು ಕೋಸ್ಟಾರಿಕಾ ದಿಂದ ಸ್ವಾತಂತ್ರ್ಯ ಹೋರಾಟಕ್ಕಾಗಿ ದುಡಿಯುತ್ತಿದ್ದ ಮ್ಯಾಕ್ಸಿಮಾ ಗೊಮೆರ್ಝ್ ಮತ್ತು ಅಂತೋನಿಯೋ ಮಾಸಿಯೋರವರಿಗೆ ಪತ್ರ ಬರೆದರು. 1894ರಲ್ಲಿ 'ಕೀ ವೆಸ್ಟ್' ನಲ್ಲಿ ಕಬುನ್ ತಂಬಾಕು ಕಾರ್ಮಿಕರ ಮುಷ್ಕರ ನಡೆಯಿತು. ಜನವರಿ 29, 1895ರಂದು ಸ್ಪಾನಿಷ್ ವಸಾಹತುಶಾಹಿಯ ವಿರುದ್ಧ ಬಂಡಾಯಕ್ಕೆ ಕರೆನೀಡಲಾಯಿತು. ಮರುದಿನವೇ ಜೋಸ್‌ಮಾರ್ಟಿ ಕ್ಯೂಬಾಕ್ಕೆ ಹೊರಟರು.

ಮಾರ್ಚ್ 25 1895ರಂದು ಜೋಸ್ ಮಾರ್ಟಿ ಮಾಂಟೆಕ್ರಿಸ್ಟೋ ಪ್ರಣಾಳಿಕೆಯನ್ನು ಮುಂದಿಟ್ಟರು. ಇದು ಕ್ಯೂಬಾದ ಸ್ವಾತಂತ್ರ್ಯ ಸಮರದ ರೂಪುರೇಷೆಗಳನ್ನು ನೀಡಿತ್ತು. 1. ಕರಿಯರು ಮತ್ತು ಬಿಳಿಯರು ಒಟ್ಟಾಗಿ ಈ ಸಮರ ನಡೆಸುತ್ತಾರೆ. 2. ಸಮರ ಗೆಲ್ಲಬೇಕಾದರೆ ಎಲ್ಲಾ ಕರಿಯರು ಭಾಗವಹಿಸುವುದು ನಿರ್ಣಾಯಕ. 3. ಈ ಸಮರಕ್ಕೆ ಆಕ್ಷೇಪವಿಲ್ಲದ ಸ್ಪಾನಿಷ್ ಜನಗಳಿಗೆ ಏನೂ ಮಾಡಬಾರದು. 4. ಈ ಕ್ರಾಂತಿ ಕ್ಯೂಬಾಕ್ಕೆ ಹೊಸ ಆರ್ಥಿಕ ಜೀವನ ತರಬೇಕು.

ಕ್ಯೂಬಾದ ಪೂರ್ವ ಕರಾವಳಿಯಲ್ಲಿ ವಿಮೋಚನಾ ಸೇನೆಯನ್ನು ಸೇರಿಕೊಂಡ ಜೋಸ್ ಮಾರ್ಟಿ ಸಶಸ್ತ್ರಹೋರಾಟದ ಮುಂಚೂಣಿಯಲ್ಲಿದ್ದರು. ದೋಸ್ ರಿಯೋಸ್‌ನಲ್ಲಿ ಸ್ಪಾನಿಷ್ ಸೇನೆಯೊಡನೆ ಕದನದಲ್ಲಿ ಮೇ 19, 1895ರಂದು ಜೋಸ್ ಮಾರ್ಟಿ ಹುತಾತ್ಮರಾದರು. ಅವರ ಶವವನ್ನು ಹುಡುಕಲು ಬಂಡಾಯಗಾರರು ಬಹಳ ಪ್ರಯತ್ನಪಟ್ಟರೂ ಸಿಗಲಿಲ್ಲ. ಮೇ 27, 1895ರಂದು ಅದನ್ನು ಸ್ಪಾನಿಷ್ ಸೈನಿಕರು ಹವಾನಾದಲ್ಲಿ ಮಣ್ಣು ಮಾಡಿದರು ಎಂದು ನಂತರ ತಿಳಿದು ಬಂತು.

ಈ ಸ್ವಾತಂತ್ಯ ಸಮರ ನಂತರ 1898ರವರೆಗೂ ನಡೆಯಿತು. ಆದರೆ ಜೋಸ್ ಮಾರ್ಟಿಯವರ ಕನಸಿನ ಕ್ಯೂಬಾ ಈಡೇರಲು ಮತ್ತೆ ಆರು ದಶಕಗಳ ಕಾಲ ಹೋರಾಡಬೇಕಾಯಿತು. ಜೋಸ್ ಮಾರ್ಟಿಯವರ ಬದುಕು ಬರಹಗಳಿಂದ ಸ್ಫೂರ್ತಿ ಪಡೆದ ಫಿಡೆಲ್ ಕ್ಯಾಸ್ಟ್ರೋ ಮತ್ತು ಸಂಗಡಿಗರು ಇದನ್ನು ಜನವರಿ 1, 1959 ರಂದು ಈಡೇರಿಸಿದರು.


ಸ್ವತಂತ್ರ, ಸಮಾಜವಾದಿ ಕ್ಯೂಬಾ ಜೋಸ್ ಮಾರ್ಟಿಯವರನ್ನು ಸದಾ ನೆನಪಿಸಿಕೊಳ್ಳುತ್ತಿರುತ್ತದೆ. ಅವರ 150ನೇ ಹುಟ್ಟು ಹಬ್ಬದ ಸಂದರ್ಭದಲ್ಲೂ ವಿಶ್ವ ಸಮತೋಲನಕ್ಕೆ ಅಂತರ್ರಾಷ್ಟ್ರೀಯ ಸಮ್ಮೇಳನವನ್ನು ಹವಾನಾದಲ್ಲಿ ನಡೆಸುವ ಮೂಲಕ ಅವರ ಮಹಾನ್ ಕೊಡುಗೆಗಳನ್ನು ನೆನಪಿಸಿಕೊಳ್ಳಲಾಯಿತು.











ಹಿರಿಯ ಕಮ್ಯುನಿಸ್ಟ್ ನಾಯಕರಾದ ಕಾಂ. ಬಿ.ವಿ.ಕಕ್ಕಿಲಾಯರ 'ಜೀವನ ಚರಿತ್ರೆ' ಹಲವಾರು ಅಮೂಲ್ಯ ಮಾಹಿತಿಗಳನ್ನು, ಐತಿಹಾಸಿಕ ಮಹತ್ವಪೂರ್ಣ ನೋಟವನ್ನು ನೀಡುತ್ತದೆ. ಆದರೆ ಕಮ್ಯುನಿಸ್ಟ್ ಚಳುವಳಿಯ ಜೀವಾಳ ಆಗಿರುವ ಸೈದ್ಧಾಂತಿಕ ಪ್ರಶ್ನೆಗಳಿಗೆ ಅವರು ಮಹತ್ವವನ್ನೇ ನೀಡಿಲ್ಲ. 'ಬರೆಯುದ ದಿನಚರಿಯು ಮರೆಯುದ ಪುಟಗಳು' ಕುರಿತ ವಿಮರ್ಶೆ ಲೇಖನವಿಲ್ಲಿ

ಅಮೂಲ್ಯ ಮಾಹಿತಿಗಳ ದಿನಚರಿ

ಬಿ. ಮಾಧವ

ಕಾಮ್ರೇಡ್ ಬಿ.ವಿ. ಕಕ್ಕಿಲ್ಲಾಯರು ದಕ್ಷಿಣ ಕನ್ನಡ ಜಿಲ್ಲೆಯ ಕಮ್ಯೂನಿಸ್ಟ್ ಚಳುವಳಿಯ ಆರಂಭದ ನಾಯಕರಲ್ಲೊಬ್ಬರು. ಅವರು 'ಜೀವನ ಚರಿತ್ರೆ' ಬರೆಯುದ ದಿನಚರಿಯ ಮರೆಯುದ ಪುಟಗಳು ಸ್ವಾಭಾವಿಕವಾಗಿಯೇ ಕಳೆದ ಆರು ದಶಕಗಳ ಕಮ್ಯುನಿಸ್ಟ್ ಚಳುವಳಿಯ ಕುರಿತು ಅಮೂಲ್ಯವಾದ ಮಾಹಿತಿಗಳನ್ನು ಒದಗಿಸುವ ಜತೆಗೆ ಅವರ ಜೀವನದ ವರ್ಣಮಯ ಪುಟಗಳನ್ನು ತೆರೆದಿಟ್ಟಿದೆ.

ಅಮೂಲ್ಯ ನೆನಪು

1948ರಲ್ಲಿ ಸರಕಾರವು ದೇಶಾದ್ಯಂತ ಕಮ್ಯುನಿಸ್ಟರ ಮೇಲೆ ದಬ್ಬಾಳಿಕೆ ನಡೆಸಿದಾಗ, ಮಂಗಳೂರಿನ ಕಾರ್ಮಿಕ ಸಂಘಗಳ ಕಚೇರಿಗಳಿಗೆ ಪೋಲೀಸರು ನುಗ್ಗಿ ಅಲ್ಲಿದ್ದ ದಾಖಲೆಗಳನ್ನೆಲ್ಲಾ ನಾಶ ಮಾಡಿದ್ದರು. ಹೀಗಾಗಿ ಆ ಕಾಲದ ಅಮೂಲ್ಯ ಮಾಹಿತಿಗಳ ದಾಖಲೆಗಳು ಈಗ ಲಭ್ಯವಿಲ್ಲ. ಈ ಹಿನ್ನೆಲೆಯಲ್ಲಿ ದ.ಕ. ಜಿಲ್ಲೆಯ ಕಮ್ಯೂನಿಸ್ಟ್ ಚಳುವಳಿಯ ಆರಂಭ ಕಾಲದ ಚರಿತ್ರೆಯನ್ನು ಹಿರಿಯ ಸಂಗಾತಿಗಳ ನೆನಪುಗಳಿಂದಲೇ ಪಡೆಯುವುದು ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಕಾಮ್ರೇಡ್ ಕಕ್ಕಿಲ್ಲಾಯರ ಜೀವನದ ಮರೆಯದ ಪುಟಗಳು ತುಂಬಾ ಮಹತ್ವಪೂರ್ಣವಾಗಿವೆ.

ಈಗ ಕೇರಳದಲ್ಲಿರುವ ಕಾಸರಗೋಡು ಜಿಲ್ಲೆಯ ದಕ್ಷಿಣದಲ್ಲಿರುವ ನೀಲೇಶ್ವರ ಸಮೀಪದ ಕಾವಾಯಿ ನದೀ ತೀರದಿಂದ ಆರಂಭವಾಗಿ ಕುಂದಾಪುರ ತಾಲೂಕಿನ ಉತ್ತರದ ಗಡಿಯವರೆಗೆ ಅಂದಿನ ದಕ್ಷಿಣ ಕನ್ನಡ ಜಿಲ್ಲೆಯು ವ್ಯಾಪಿಸಿತ್ತು. ನಿರಂಜನರ ಅಮರಕೃತಿ 'ಚಿರಸ್ಮರಣೆ'ಯಲ್ಲಿ ಚಿರಸ್ಥಾಯಿಯಾದ ಕಯ್ಯಾರು ರೈತರ ಧೀರ ಹೋರಾಟ ಮತ್ತು ಬಲಿದಾನಗಳು ಅಂದಿನ ದಕ್ಷಿಣ ಕನ್ನಡ ಜಿಲ್ಲೆಯ ಕಮ್ಯುನಿಸ್ಟ್ ಚಳುವಳಿಯ ಭಾಗವಾಗಿದೆ. ಇಂದು ಕೇರಳದ ಭಾಗಗಳಾಗಿರುವ ಕರಿವೆಳ್ಳೂರು, ಪೈವಳಿಕೆ ಮೊದಲಾದ ಗ್ರಾಮಗಳಲ್ಲಿ ನಡೆದ ರೈತರ ಧೀರ ಹೋರಾಟಗಳೂ ದಕ್ಷಿಣ ಕನ್ನಡ ಜಿಲ್ಲೆಯ ಕಮ್ಯೂನಿಸ್ಟ್ ಚಳುವಳಿಯ ಸಮರಶೀಲ ಪರಂಪರೆಯ ಭಾಗಗಳಾಗಿವೆ. ಕಕ್ಕಿಲ್ಲಾಯರ ಜೀವನ ಚರಿತ್ರೆಯನ್ನು ಓದುವಾಗ ಅಂದಿನ ದಕ್ಷಿಣ ಕನ್ನಡ ಜಿಲ್ಲೆಯ ಭೌಗೋಳಿಕ ವ್ಯಾಪ್ತಿಯನ್ನು ನೆನಪಿಸಿಕೊಳ್ಳುವುದು ಪ್ರಸ್ತುತವಾಗುತ್ತದೆ.

1940 ರಲ್ಲಿ ವಿದ್ಯಾರ್ಥಿಯಾಗಿದ್ದಾಗ ಕಮ್ಯುನಿಸ್ಟ್ ಪಕ್ಷವನ್ನು ಸೇರಿದ ಕಕ್ಕಿಲ್ಲಾಯರು, ವಿದ್ಯಾರ್ಥಿ ಚಳುವಳಿಯ ಮೂಲಕ ತನ್ನ ಚಟುವಟಿಕೆಗಳನ್ನು ಆರಂಭಿಸಿ ಮುಂದೆ ಕಾರ್ಮಿಕರ ಮತ್ತು ರೈತಾಪಿ ಜನತೆಯ ಹೋರಾಟಗಳಲ್ಲಿ ವಹಿಸಿದ ಪಾತ್ರವನ್ನೂ ಅವುಗಳಿಂದ ಪಡೆದ ಅನುಭವಗಳನ್ನೂ ಎಳೆಎಳೆಯಾಗಿ ಬಿಡಿಸಿಟ್ಟಿದ್ದಾರೆ. ಈ ಹೋರಾಟಗಳಲ್ಲಿ ಅವರೊಂದಿಗಿದ್ದ ಅಸಂಖ್ಯ ಸಂಗಾತಿಗಳ ಹೆಸರುಗಳನ್ನೂ ಅವರು ಮರೆಯದೆ ಉಲ್ಲೇಖಿಸಿದ್ದಾರೆ.


ದಬ್ಬಾಳಿಕೆ ಎದುರಿಸಿಯೇ....

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರ ಪಾತ್ರ ಮಹತ್ತರವಾದದ್ದು ಬಂಡವಾಳಶಾಹಿ ಇತಿಹಾಸಕಾರರು ಕಮ್ಯುನಿಸ್ಟರ ತ್ಯಾಗ ಬಲಿದಾನಗಳನ್ನು ಸರಿಯಾಗಿ ದಾಖಲಿಸಲಿಲ್ಲ. ಕಮ್ಯುನಿಸ್ಟ್ ನಾಯಕರ ಜೀವನ ಚರಿತ್ರೆಗಳು ಈ ನಿಟ್ಟಿನಲ್ಲಿ ಮಹತ್ವಪೂರ್ಣವಾಗಿವೆ. ರಾಜಕೀಯ ಸ್ವಾತಂತ್ರ್ಯದ ಜತೆಗೆ ಆರ್ಥಿಕ ಸ್ವಾತಂತ್ರ್ಯವನ್ನೂ ಗಳಿಸಲು ಕಮ್ಯೂನಿಸ್ಟರು ಹೋರಾಟಗಳನ್ನು ಮುಂದುವರಿಸ ಬಹುದೆಂದು ಹೆದರಿದ್ದ ಬಂಡವಾಳಶಾಹಿ ಗಳು ಸ್ವಾತಂತ್ರ್ಯ ಸನ್ನಿಹಿತವಾಗುತ್ತಿದ್ದಾಗಲೇ ಕಮ್ಯುನಿಸ್ಟರ ಮೇಲೆ ದಾಳಿಗಳನ್ನು ಹರಿಬಿಟ್ಟರು. ಕಕ್ಕಿಲ್ಲಾಯರು ದಾಖಲಿಸಿದಂತೆ 1945ರಲ್ಲಿ ಬಿಡುಗಡೆ ಹೊಂದಿದ ಕಾಂಗ್ರೆಸ್ ನಾಯಕರು 1946ರಲ್ಲಿ ಕೇಂದ್ರದಲ್ಲಿ ತಾತ್ಕಾಲಿಕ ಸರಕಾರವನ್ನು ರಚಿಸಿದರು. 1945-46ರ ಕ್ರಾಂತಿಕಾರಿ ಹೋರಾಟಗಳನ್ನು ದಮನಿಸಲು ಕ್ರಮಕೈಗೊಂಡರು. ಕಮ್ಯೂನಿಸ್ಟ್ ಪಕ್ಷವನ್ನು ಹತ್ತಿಕ್ಕಲು ಹೊಸ ಹೊಸ ಅಸ್ತ್ರಗಳನ್ನು ಬಳಸಿದರು. ಸಾಮೂಹಿಕ ಸಂಘಟನೆಗಳನ್ನು ಒಡೆಯುವ ಕ್ರಮ ಕೈಗೊಂಡರು.

ದಬ್ಬಾಳಿಕೆಗಳನ್ನು ಎದುರಿಸಿಕೊಂಡೇ ಕಮ್ಯುನಿಸ್ಟ್ ಪಕ್ಷ ಬೆಳೆಯಿತು. ಮಂಗಳೂರಿನಲ್ಲಿ ನೆಯ್ಗೆ, ಬೀಡಿ, ಹಂಚು, ಪ್ರೆಸ್, ಗೋಡಂಬಿ ಮೊದಲಾದ ಕೈಗಾರಿಕೆಗಳ ಕಾರ್ಮಿಕರು ಕಮ್ಯುನಿಸ್ಟರ ನಾಯಕತ್ವದಲ್ಲಿ ದಿಟ್ಟ ಹೋರಾಟಗಳನ್ನು ನಡೆಸಿದರು. ಜನರು ಹತ್ತಿರ ಸುಳಿಯಲೂ ಹಿಂಜರಿಯುತ್ತಿದ್ದ, ಅಂದಿನ ಕಾಲದಲ್ಲಿ ತಲೆಯ ಮೇಲೆ ಮಲ ಹೊರುತ್ತಿದ್ದ ಪೌರ ಕಾರ್ಮಿಕರನ್ನು ಸಂಘಟಿಸಿ ಅವರಿಗಾಗಿ ಹೋರಾಡಿದ ಕೀರ್ತಿ ಕಮ್ಯೂನಿಸ್ಟರದ್ದು. ಸ್ವಾತಂತ್ರ್ಯ ಪೂರ್ವದ ದಿನಗಳ ಒಂದು ಉತ್ತಮ ಅಂಶವನ್ನು ಕಕ್ಕಿಲ್ಲಾಯರು ಹೀಗೆ ವಿವರಿಸಿದ್ದಾರೆ. ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಕೋಮು ಮತ್ತು ಜಾತಿ ಭಾವನೆಗಳು ಕಾರ್ಮಿಕ ವರ್ಗವನ್ನು ಹೆಚ್ಚಾಗಿ ಬಾಧಿಸಿರಲಿಲ್ಲ. ಧಾರ್ಮಿಕ ಆಚರಣೆಗಳು, ಜಾತಿ ವಿಧಿಗಳು, ಖಾಸಗಿ ವಿಚಾರಗಳಾಗಿದ್ದವು. ಶ್ರಮ ಜೀವಿಗಳೆಂಬ ನೆಲೆಯಲ್ಲಿ ಅವರೊಳಗೆ ಸ್ವಾಭಾವಿಕವಾದ ಐಕ್ಯ ಮನೋಭಾವ ಮತ್ತು ಸೌಹಾರ್ದತೆ ಗಳಿದ್ದವು. ಸ್ವಾತಂತ್ರ್ಯ ಪ್ರಾಪ್ತಿಗಿಂತ ಸ್ವಲ್ಪ ಮೊದಲು ಮತ್ತು ಅನಂತರ ಕೋಮು ಭೇದದ ವಿಷ ಕಾರ್ಮಿಕ ವರ್ಗವನ್ನು ಬಾಧಿಸತೊಡಗಿದ್ದನ್ನು ನಾವು ಕಂಡಿದ್ದೇವೆ.

ಕಮ್ಯುನಿಸ್ಟ್ ಪಕ್ಷ ಯಾಕೆ ಒಡೆಯಿತು ?

ಕಮ್ಯುನಿಸ್ಟರ ಜೀವನದಲ್ಲಿ ಸೈದ್ಧಾಂತಿಕ ಪ್ರಶ್ನೆಯು ಅತ್ಯಂತ ಮಹತ್ವ ಪೂರ್ಣ ವಾಗಿರುತ್ತದೆ. ನಿರ್ಣಾಯಕ ಸನ್ನಿವೇಶಗಳಲ್ಲಿ ನಾವು ಕಮ್ಯುನಿಸ್ಟರು ತಳೆಯುವ ಸೈದ್ಧಾಂತಿಕ ನಿಲುಮೆಯು ಕ್ರಾಂತಿಕಾರಿ ಚಳುವಳಿಯಲ್ಲಿ ನಮ್ಮ ಪಾತ್ರವನ್ನು ರೂಪಿಸುತ್ತದೆ. ಆದರೆ ಈ ನಿಟ್ಟಿನಲ್ಲಿ ಕಕ್ಕಿಲ್ಲಾಯರಲ್ಲಿ ಗಂಭೀರತೆ ಕಾಣುವುದಿಲ್ಲ. 1951ರಲ್ಲಿ ನಡೆದ ವಿಶೇಷ ಸಮ್ಮೇಳನದಲ್ಲಿ ಭಾರತದ ಕ್ರಾಂತಿಯ ಪಥದ ಕುರಿತು ನಡೆದ ಚರ್ಚೆಯ ಕುರಿತು ಬರೆಯುತ್ತಾ ಕಕ್ಕಿಲ್ಲಾಯರು ಹೀಗೆ ಹೇಳುತ್ತಾರೆ. ''ರಷ್ಯಾದ ಸಮಾಜವಾದೀ ಕ್ರಾಂತಿಯ ದಾರಿಯಾಗಲೀ ಚೀನಾದ 'ನವ ಪ್ರಜಾಪ್ರಭುತ್ವವಾದಿ' ಪಥವಾಗಲೀ ಭಾರತಕ್ಕೆ ಇದ್ದಕ್ಕಿದ್ದಂತೆ ಮಾದರಿಯಾಗಲು ಸಾಧ್ಯವಿಲ್ಲ. ಇದು ತೀರಾ ತಪ್ಪು ವಿಶ್ಲೇಷಣೆ. ರಷ್ಯದ ಕ್ರಾಂತಿಯಂತೆ ಚೀನದ ಕ್ರಾಂತಿಯೂ ಸಮಾಜವಾದಿ ಕ್ರಾಂತಿಯೇ ಆಗಿತ್ತು. 'ನವ ಪ್ರಜಾಪ್ರಭುತ್ವವಾದಿ' ಎಂಬ ವಿಶ್ಲೇಷಣೆ ಎಲ್ಲಿಂದ ಬಂತು ? ವಾಸ್ತವವಾಗಿ ಅಂದು ಪಕ್ಷದಲ್ಲಿ ನಡೆಯುತ್ತಿದ್ದ ಚರ್ಚೆ ಅದಲ್ಲ. ನಗರಗಳಲ್ಲಿ ಮತ್ತು ಕೈಗಾರಿಕಾ ಪ್ರದೇಶಗಳಲ್ಲಿ



ಕಾರ್ಮಿಕರು ರಾಜಕೀಯ ಸಾರ್ವತ್ರಿಕ ಮುಷ್ಕರ ನಡೆಸುವ ಮೂಲಕ ದೇಶವ್ಯಾಪಿ ದಂಗೆಯನ್ನು ಎಬ್ಬಿಸಬೇಕು ಮತ್ತು ರೈತರು ಅವರನ್ನು ಬೆಂಬಲಿಸ ಬೇಕು. ಈ ರೀತಿಯ ಕಾರ್ಯಾಚರಣೆ ಯಿಂದ ಪ್ರಭುತ್ವವನ್ನು ಕಿತ್ತು ಹಾಕಬಹುದೆಂಬುದು ರಷ್ಯಾ ಪಥವನ್ನು ಪ್ರತಿಪಾದಿಸುವವರ ವಾದವಾಗಿತ್ತು. ಗ್ರಾಮೀಣ ಪ್ರದೇಶಗಳಲ್ಲಿ ರೈತರು ಪಾರ್ಟಿಸನ್ ಯುದ್ಧವನ್ನು ನಡೆಸಿ ನಗರಗಳನ್ನು ಸುತ್ತುವರಿಯಬೇಕು, ಕಾರ್ಮಿಕರು ಅವರನ್ನು ಬೆಂಬಲಿಸಬೇಕು ಎಂಬುದು ಚೀನಾ ಪಥವನ್ನು ಪ್ರತಿಪಾದಿಸಿದವರ ವಾದ ವಾಗಿತ್ತು. ಈ ಎರಡು ತಾಂತ್ರಿಕ ಧೋರಣೆಗಳೂ ಭಾರತದಲ್ಲಿನ ನಿರ್ದಿಷ್ಟ ಪರಿಸ್ಥಿತಿಯನ್ನು ನಿರ್ಲಕ್ಷಿಸುವ ಹಾಗೂ ಇತರ ದೇಶಗಳೊಂದಿಗೆ ಯಾಂತ್ರಿಕವಾಗಿ ತುಲನೆಗಳನ್ನು ಮಾಡುವ ಪ್ರವೃತ್ತಿಯ ಪರಿಣಾಮ ವಾಗಿ ಉದ್ಭವಿಸಿದ್ದವು. ಅಂತಿಮವಾಗಿ, ಭಾರತದ ಕ್ರಾಂತಿ ರಷ್ಯಾ ಮಾರ್ಗದ್ದೂ ಅಲ್ಲ, ಚೀನಾ ಮಾರ್ಗದ್ದೂ ಅಲ್ಲ, ಭಾರತೀಯ ಮಾರ್ಗದ್ದಾಗಿ ರುತ್ತದೆ ಎಂಬ ನಿರ್ಧಾರಕ್ಕೆ ಬರಲಾಯಿತು.

ಅರ್ಥವಾಗದ ಸೈದ್ಧಾಂತಿಕ ಪ್ರಶ್ನೆಗಳು!

ಕಮ್ಯೂನಿಸ್ಟ್ ಪಕ್ಷ ಯಾಕೆ ಒಡೆಯಿತೆಂಬುದು ಕಾಮ್ರೇಡ್ ಕಕ್ಕಿಲ್ಲಾಯರಿಗೆ ಇನ್ನೂ ಗೊತ್ತೇ ಇಲ್ಲವೆಂದು ಕಾಣುತ್ತದೆ. ಸೈದ್ಧಾಂತಿಕ ವಿಚಾರಗಳಿಗೆ ಮಹತ್ವವನ್ನೇ ನೀಡದ ಅವರು ಹೀಗೆ ಬರೆದಿದ್ದಾರೆ. ''ಇ.ಎಂ.ಎಸ್. ನಂಬೂದಿರಿಪಾಡ್ ರವರು' ಒಬ್ಬ ಭಾರತೀಯ ಕಮ್ಯೂನಿಸ್ಟ್‌ನ ನೆನಪುಗಳು ಎಂಬ ತನ್ನ ಆತ್ಮಚರಿತ್ರೆಯಲ್ಲಿ ಪರಿಷ್ಕರಣವಾದ ಮತ್ತು ಎಡಪಂಥವಾದ ಇವೆರಡನ್ನೂ ಬಿಟ್ಟು ಸರಿಯಾದ ಮಧ್ಯಮಾರ್ಗವನ್ನು ತಾನು ಅನುಸರಿಸಿದ್ದು, ಅದೇ ಸಿಪಿಐ(ಎಂ)ನ ಮಾರ್ಗ ವಾಗಿದೆಯೆಂದು ಹೇಳಿಕೊಂಡಿದ್ದಾರೆ. ಕೂದಲೆಳೆ ಸಿಗಿಯುವ ಮತ್ತು ಸ್ವಪ್ರಧಾನಭಾವ ಪ್ರದರ್ಶಿಸುವ ಆ ಬರಹ ಪಕ್ಷ ಒಡೆದದ್ದನ್ನು ಸಮರ್ಥಿಸುತ್ತದೆ''. ಸರಿ, ಕೂದಲೆಳೆ ಸಿಗಿಯುವ ವಾದಗಳು ಒತ್ತಟ್ಟಿಗಿರಲಿ ವಾಸ್ತವತೆಗಳನ್ನು ನೋಡೋಣ. ಸಿಪಿಐ ಕೇರಳದ ಕಾಂಗ್ರೆಸಿನ ಜತೆ ಸೇರಿ ಇಎಂಎಸ್ ಸರಕಾರ ಉರುಳಿಸಿ, ಸಿ. ಅಚ್ಚುತ ಮೆನನ್‌ರ ನೇತೃತ್ವದ ಕಾಂಗ್ರೆಸ್ ಬೆಂಬಲಿತ ಮರಿರಂಗ ಸರಕಾರ ನಡೆ ಎಷ್ಟು ಸರಿ ?

ತುರ್ತು ಪರಿಸ್ಥಿತಿಯನ್ನು ಸಿಪಿಐ ಬೆಂಬಲಿ ಕುರಿತು ಕಕ್ಕಿಲ್ಲಾಯರು ಈ ರೀತಿ ಬರೆದಿದ್ದಾ "1975ರಲ್ಲಿ ಶ್ರೀಮತಿ ಇಂದಿರಾಗಾಂಧಿಯವ ಪ್ರಜಾಪ್ರಭುತ್ವವನ್ನು ರಕ್ಷಿಸುವ ಹೆಸರಿನಲ್ಲಿ ತುತ ಪರಿಸ್ಥಿಯನ್ನು ಘೋಷಿಸಿದರು. ಅಭಿವ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯ ಅನ್ಯಾಯಗಳ ಪ್ರತಿಭಟಿಸುವ ಅವಕಾಶ ಮೊದಲಾದ ಎಲ ನಾಗರಿಕ ಹಕ್ಕುಗಳು ನಿಷೇಧಿಸಲ್ಪಟ್ಟವು. ಇ ಪ್ರತಿಗಾಮಿಗಳ ದಮನಕ್ಕೆ ಅಗತ್ಯವೆಂಬ ತ ಕಲ್ಪನೆಯಿಂದ ಸಿಪಿಐ ಪಕ್ಷವು ತುರ್ತು ಪರಿಸ್ಥಿತಿ ಘೋಷಣೆಗೆ ಬೆಂಬಲ ಸೂಚಿಸಿತ್ತು. ಆ ತಪ್ಪ ಪಕ್ಷವು ಬಹಳ ತಡವಾಗಿ ಅರ್ಥ ಮಾ ಕೊಂಡಿತ್ತೆಂದು ಇಲ್ಲಿ ಹೇಳಬೇಕಾಗುತ್ತದೆ. ತುತ ಪರಿಸ್ಥಿತಿಯಲ್ಲಿ ಜನರ ಮೇಲೆ ನಡೆಸಿದ ಅಮಾನು ದೌರ್ಜನ್ಯಗಳು 1977ರ ಲೋಕಸ ಚುನಾವಣೆಯ ವೇಳೆಗಾಗಲೇ ಇಡೀ ದೇಶ ಜನರಿಗೆ ಗೊತ್ತಾಗಿತ್ತು. ಇಂದಿರಾ ಗಾಂಧಿಯವ ರಾಯಬರೇಲಿ ಕ್ಷೇತ್ರದಲ್ಲಿ ಹೀನಾಯವಾ ಸೋತರು. ಈ ಹಿನ್ನೆಲೆಯ ಇಂದಿರಾಗಾಂಧಿಯವರು ಚಿಕ್ಕಮಗಳೂ ಕ್ಷೇತ್ರದಿಂದ ಸಂಸತ್ತಿಗೆ ಸ್ಪರ್ಧಿಸಿದಾಗ ಕಕ್ಕಿಲ್ಲಾಯ ಹೇಳುವಂತೆ "ಸಿಪಿಐ ತಟಸ್ಥ ಧೋರಣೆ ವಹಿಸಿ ತುರ್ತು ಪರಿಸ್ಥಿತಿಯ ಕರಾಳ ರಾಣಿಯ ಸಿಪಿಐ(ಎಂ) ವಿರೋಧಿಸಿ, ಕಕ್ಕಿಲ್ಲಾಯ ದಾಖಲಿಸಿದಂತೆ ಸಿಪಿಐ(ಎಂ) ಪಕ್ಷ ಸ್ವ ಇ.ಎಂ.ಎಸ್. ನಂಬೂದ್ರಿಪಾಡ್ ಅವರ ಪ್ರಚಾರಕ್ಕೆ ಇಳಿಸಿತ್ತು. ಅಂತೂ ಆ ಚುನಾವಣೆಯ ಇಂದಿರಾಗಾಂಧಿಯವರು ಪ್ರಚ ಬಹುಮತದಿಂದ ಗೆದ್ದು ಪುನಃ ಸಂಸತ್ತ ಪ್ರವೇಶಿಸಿದರು'' ಎಂದು ಕಕ್ಕಿಲ್ಲಾಯ ಸಂತೋಷಪಡುತ್ತಾರೆ.

ತುರ್ತುಪರಿಸ್ಥಿತಿಯ ಲಾಭಗಳು ಬೋ ನಷ್ಟಕ್ಕಿಂತ ನೂರುಪಾಲು ದೊಡ್ಡದೆಂದು ಹೇಳ ತುರ್ತು ಪರಿಸ್ಥಿತಿಯ ಪ್ರಬಲ ಪ್ರತಿಪಾದಕನಾ ಎಸ್.ಎ.ಡಾಂಗೆಯವರನ್ನು ಮುಂದೆ ''ನಿ ಗೊಳಿಸಲಾಯಿತಲ್ಲದೆ, ಮತ್ತೆ ಪಕ್ಷದ ಉಚ್ಚಾಟಿಸಲಾಯಿತು. ತುರ್ತು ಪರಿಸ್ಥಿತಿ ಬೆನ್ನಲ್ಲೇ 1978ರಲ್ಲೇ ನಡೆದ ವಿಧಾನ ಚುನಾವಣೆಯಲ್ಲಿ ಸ್ವತಃ ಕಾಮ್ರೇಡ್ ಬಿ ಕಕ್ಕಿಲ್ಲಾಯರು ವಿಟ್ಲ ಕ್ಷೇತ್ರದಿಂದ ಕಾಂಗ್ರ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧಿಸಿ ಶಾಸಕ ಆಯ್ಕೆಯಾದರು. ಇವುಗಳೆಲ್ಲಾ ''ಕೂದ ಸಿಗಿಯುವ'' ಸೈದ್ಧಾಂತಿಕ ವಿಷಯಗಳ ಬಂಡವಾಳಶಾಹಿ ಗಳೊಂದಿಗೆ ಅಧಿಕಾರ ಹ ಕೊಳ್ಳಲು ಅವಕಾಶ ನೀಡುವ ಸಿಪಿಐ ಪ ರಾಷ್ಟ್ರೀಯ ಪ್ರಜಾಪ್ರಭುತ್ವದ ನೀತಿ ಮತ್ತು ಕಾ ವರ್ಗದ ನೇತೃತ್ವದಲ್ಲಿ ಜನತಾ ಪ್ರಜಾಪ್ರಭುತ್ವ ಸ್ಥಾಪಿಸಬೇಕೆಂಬ ಸಿಪಿಐ(ಎಂ)ನ ನೀತಿಯ ನಡು ವ್ಯತ್ಯಾಸವೇನು ಸಣ್ಣದಲ್ಲ.

ಕಾಮ್ರೇಡ್ ಬಿ.ವಿ. ಕಕ್ಕಿಲ್ಲಾಯರ ಭಾಷ ಉತ್ತಮವಾಗಿದೆ. ಅವರ ಪುಸ್ತಕವನ್ನು ಓ ಶ್ರಮ ಪಡಬೇಕಾಗಿಲ್ಲ. ಅದು ತಾನಾಗಿ ಓದಿಸಿಕೊಂಡು ಹೋಗುತ್ತದೆ.

'ಬರೆಯದ ದಿನಚರಿಯ
ಮರೆಯದ ಪುಟಗಳು'
ಬೆಲೆ ರೂ. 200
ನವಕರ್ನಾಟಕ ಪಬ್ಲಿಕೇಷನ್ ಪ್ರೈ.ಲಿ.

PRB DECR 319-79/79 AIKYARANGA WEEKLY Reg. No. 17015/64 CPM(G) / KA /BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH